ಕರ್ನಾಟಕ ವಿಧಾನ ಸಭೆ

ಸೋಮವಾರ 9ನೇ ಜುಲೈ 1990

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣರವರು) ಪೀಠವನ್ನು ಅಲಂಕರಿಸಿದ್ದರು.

ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಮಾನ್ಯ ಮಂತ್ರಿಗಳಿಂದ ಉತ್ತರ.

ವಿತ್ತೀಯ ಕಾರ್ಯ ಕಲಾಪಗಳು

೧೯೯೦-೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮತಕ್ಕೆ ಹಾಕುವುದು

ಬೇಡಿಕೆಗಳ ಕ್ರ. ಸಂ, ೩೫, ೩೬, ೪೫, ೪೬ ಮತ್ತು ೪೭ ಲೋಕೋಪಯೋಗಿ ಮತ್ತು ನೀರಾವರಿ ಬೇಡಿಕೆಗಳಿಗೆ ಮಂತ್ರಿಯವರಿಂದ ಉತ್ತರ

† ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಇಲಾಖಾ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ನೀರಾವರಿ, ಲೋಕೋಪಯೋಗಿ ಜಲ ನಿಯಂತ್ರಣ ಮತ್ತು ಅಚ್ಚುಕಟ್ಟು ಅಭಿವೃದ್ಧಿ ಬೇಡಿಕೆಗಳ ಬಗ್ಗೆ ಕಳೆದ ೫ ದಿನಗಳಿಂದ ಸದನದಲ್ಲಿ ಸಾಕಷ್ಟು ಚರ್ಚೆಯಾಗಿ ಹಲವಾರು ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವೊಂದು ನಿರ್ದಿಷ್ಟ ಪ್ರಕರಣಗಳನ್ನು ಗುರುತು ಮಾಡಿ ಇರುವ ಲೋಪಗಳನ್ನು ಹೇಳಿದ್ದಾರೆ. ಸುಮಾರು ೧೧ ಗಂಟೆಗಳ ಕಾಲ ದೀರ್ಘ ಚರ್ಚೆ ಈ ಸಭೆಯಲ್ಲಿ ನಡೆದಿದೆ. ಸುಮಾರು ೩೪ ರಿಂದ ೩೬ ಜನ ಸದಸ್ಯರು ಇದರಲ್ಲಿ ಭಾಗವಹಿಸಿದ್ದಾರೆ. ಇವರೆಲ್ಲರಿಗೂ ತಮ್ಮ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಇಲಾಖೆಯ ಬಗ್ಗೆ ಕೆಲವೊಂದು ವಿಷಯಗಳನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಬಯಸುತ್ತೇನೆ :

ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ದಿನಗೂಲಿ ಹಾಗೂ ಹಂಗಾಮಿ ನೌಕರರನ್ನು ಖಾಯಂಗೊಳಿಸಲು ಸರ್ಕಾರ ನಿರ್ಧರಿಸಿದೆ.

ಏತ ನೀರಾವರಿ ನಿಗಮಗಳನ್ನು ಮುಂದುವರೆಸಲಾಗುವುದು, ಈ ಮೂಲಕ ಈ ವರ್ಷ ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಸಾಧ್ಯವಿರುವ ಎಲ್ಲ ಯೋಜನೆಗಳನ್ನು ಪ್ರಾರಂಭಿಸಲಾಗುವುದು, ಇದರಲ್ಲಿ ರೈತರ ವಂತಿಗೆಯನ್ನು ಸರ್ಕಾರವೇ ಭರಿಸಲು ಸರ್ಕಾರ ನಿರ್ಣಯಿಸಿದೆ. ಪ್ರಸಕ್ತ ಸಾಲಿನಲ್ಲಿ ನೂರು ಕೋಟಿಯನ್ನು ಖರ್ಚು ಮಾಡಲು ನಿರ್ಧರಿಸಿದೆ. ಜೊತೆಗೆ ಹಳೇ ಏತ ನೀರಾವರಿ ರಿಪೇರಿ ಕೆಲಸಕ್ಕೂ ಗಮನ ಕೊಡಲಾಗುವುದು. ರೈತರೇ ಸ್ವಯಂಪ್ರೇರಿತರಾಗಿ ತೆಗೆದುಕೊಳ್ಳಬಹುದಾದ ಸಣ್ಣ ನೀರಾವರಿ ಯೋಜನೆಗೆ ಸರ್ಕಾರ ಸಹಾಯಧನ ಕೊಡಲು ನಿರ್ಧರಿಸಿದೆ.

ವಿಶ್ವಬ್ಯಾಂಕಿನ ವತಿಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಮೊದಲನೇ ಹಂತದ ಎರಡನೇ ಘಟಕದ ಕೆಲಸಕ್ಕೆ ೩೨೫ ಮಿಲಿಯನ್ ಡಾಲರ್ ಸಾಲ ಅಂದರೆ ೫೨೫ ಕೋಟಿ ರೂ. ಸಾಲ ಪಡೆದು ಅದನ್ನು ೧೯೮೯ ರಿಂದ ೯೬ರ ಅಂತ್ಯದವರೆಗೆ ಖರ್ಚು ಮಾಡಲಾಗುವುದು.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿಶ್ವಬ್ಯಾಂಕ್ ವತಿಯಿಂದ ರಾಷ್ಟ್ರೀಯ ಜಲನಿರ್ವಹಣ ಯೋಜನೆಗಾಗಿ ೨೯ ೩೯ ಮಿಲಿಯನ್ ಡಾಲರ್ ಸಾಲ ಪಡೆಯಲಾಗಿದೆ. ಕೃಷ್ಣಾ ಮತ್ತು ಕಾವೇರಿ ಕೊಳದ ಪ್ರಗತಿಯಲ್ಲಿರುವ ಕೆಲಸಗಳನ್ನು ತೀವ್ರಗೊಳಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ.

ನಿಗದಿತ ಭರವಸೆ ಪತ್ರಗಳನ್ನು ಪ್ರತಿ ತಿಂಗಳು ಬಿಡುಗಡೆ ಮಾಡಲು ನಿರ್ಧರಿಸಿದೆ.

ಕಾಮಗಾರಿ ಕೆಲಸಗಳ ಗುಣಮಟ್ಟ ಕಾಪಾಡಲು ತನಿಖಾ ಮತ್ತು ಜಾಗೃತಾಕೋಶದ ಸಂಚಾರಿ ದಳಗಳನ್ನು ಬಲಗೊಳಿಸಲಾಗಿದೆ.

ಗುತ್ತಿಗೆ ನಮೂನೆ ಪಿಡಬ್ಲ್ಯುಡಿ ಫಾರಂ ಅನ್ನು ಪರಿಷ್ಕರಿಸಲಾಗಿದೆ.

ದೋಷಪೂರಿತ ಕಾಮಗಾರಿಗಳಿಗೆ ಗುತ್ತಿಗೆದಾರ ಹಾಗೂ ಇಂಜಿನಿಯರ್‌ಗಳಿಬ್ಬರನ್ನೂ ಕ್ರಿಮಿನಲ್ ಕಾಯಿದೆಗೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಗುತ್ತಿಗೆದಾರರನ್ನು ಬ್ಲಾಕ್‌ಲಿಸ್ಟ್ ಮಾಡುವ ಉಗ್ರ ಕ್ರಮಗಳನ್ನು ಕೂಡ ಅಳವಡಿಸಲಾಗಿದೆ.

ಗುತ್ತಿಗೆ ಕರಾರಿನಲ್ಲಿರುವ ಅರ್ಬಿಟ್ರೇಷನ್ ಕ್ಲಾಸನ್ನು ತೆಗೆಯಲಾಗಿದೆ.

ಸರ್ಕಾರಿ ಹಿರಿಯ ಕಾರ್ಯದರ್ಶಿಯನ್ನೊಳಗೊಂಡ ಮೂರು ಜನರ ಕ್ಲೇಮ್ಸ್ ಸಮಿತಿಯನ್ನು ರಚಿಸಲಾಗಿದೆ.

ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಎಣ್ಣೆ ೪೨ ಕೋಟಿ ಅಂದಾಜಿನ ಅಂಕೋಲಾ ಹುಬ್ಬಳ್ಳಿ ರಸ್ತೆಗೆ ೨೪ ಕೋಟಿಯ ಸಾಲ ಸೌಲಭ್ಯ ಪಡೆಯಲಾಗಿದ್ದು, ಕಾಮಗಾರಿಗೆ ಗುತ್ತಿಗೆ ಕರೆಯಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪ್ರತಿ ತಾಲೂಕಿನಲ್ಲೂ ರಸ್ತೆ ಕಾಮಗಾರಿಗಾಗಿ ೧೨ ಲಕ್ಷ ರೂ. ಹೆಚ್ಚುವರಿ ಅನುದಾನ ನೀಡಲು ನಿರ್ಧರಿಸಲಾಗಿದೆ. ರಸ್ತೆ ಕಾಮಗಾರಿ ಆಯವ್ಯಯದಲ್ಲಿರುವ ಹಣದ ಜೊತೆಗೆ ಎಪಿಎಂಸಿ ಹಣ ಸಂಗ್ರಹದಿಂದ ೨೦ ಕೋಟಿ ರೂ. ಗಳನ್ನು ಹಾಗೂ ರಾಜ್ಯದ ಆಯವ್ಯಯದಿಂದ ೨೧ ಕೋಟಿ ಮತ್ತು ಗಡಿ ಪ್ರದೇಶದ ಅನುದಾನದಿಂದಲೂ ಸಹ ಸುಮಾರು ೨ ಕೋಟಿಗಳನ್ನು ರಸ್ತೆ ಮತ್ತು ಸೇತುವೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ವಿನಿಯೋಗಿಸಲು ನಿರ್ಧರಿಸಲಾಗಿದೆ.

ಗುಲ್ಬರ್ಗ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಗಳಿಂದ ಸಿಮೆಂಟ್ ಸಾಗಾಣಿಕೆಗೆ ಅನುಕೂಲವಾಗುವ ರಸ್ತೆಗಳನ್ನು ವಿಶೇಷವಾಗಿ ಅಭಿವೃದ್ಧಿಪಡಿಸಲಿಕ್ಕೆ ರಸ್ತೆ ಶುಲ್ಕ ಸಂಗ್ರಹಣೆ ಮಾಡಲು ಯೋಜಿಸಲಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿ ರಸ್ತೆಗಳ ಅಭಿವೃದ್ಧಿಗಾಗಿ ನಾಲ್ಕು ಕೋಟಿ ರೂಪಾಯಿ ಹಣವನ್ನು ಒದಗಿಸಲಾಗುವುದು. ಹೈದರಾಬಾದ್-ಕರ್ನಾಟಕ ಪ್ರದೇಶದ ರಸ್ತೆಗಳ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಕಾರ್ಯಕ್ರಮ ಹಾಕಲಾಗಿದೆ. ಗಡಿ ಪ್ರದೇಶಗಳ ರಸ್ತೆಗಳ ಅಭಿವೃದ್ಧಿಗಾಗಿ ಸುಮಾರು ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ನಿರ್ಧರಿಸಲಾಗಿದೆ. ಜಿಲ್ಲಾ ಪರಿಷತ್ ರಸ್ತೆಗಳ ಪೈಕಿ ನಿಯಮಗಳನ್ನು ಅನುಸರಿಸಿ ಹಂತ ಹಂತವಾಗಿ ಮೇಲ್ದರ್ಜೆಗೆ ಏರಿಸಿ ಇಲಾಖೆಗೆ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ನೂರು ಎಕರೆಗಿಂತ ಹೆಚ್ಚಿನ ಅಚ್ಚುಕಟ್ಟು ಇರುವ ಕೆರೆಗಳನ್ನು ಇಲಾಖೆಗೆ ವಹಿಸಿಕೊಳ್ಳಲು ಸರ್ಕಾರ ಆಲೋಚಿಸುತ್ತಿದೆ. ಕೊಂಕಣ ರೈಲ್ವೆ ಯೋಜನೆಗೆ ಐದು ವರ್ಷದ ಅವಧಿಯಲ್ಲಿ ರಾಜ್ಯ ಸರ್ಕಾರದ ಶೇರುಧನ ೩೭.೫ ಕೋಟಿ ರೂಪಾಯಿಗಳನ್ನು ಕೊಡಲು ನಿರ್ಧರಿಸಿದೆ. ಕಟ್ಟಡಗಳ ನಿರ್ವಹಣೆಗೆ ಕೊಡುತ್ತಿರುವ ಹಣವನ್ನು ಪ್ಲಿಂಥ್ ಏರಿಯಾದ ಮೇಲೆ ಕೊಡುವ ವಿಚಾರವು ಸರ್ಕಾರ ಪರಿಶೀಲನೆಯಲ್ಲಿದೆ. ಕಳೆದ ೧೭ ವರ್ಷಗಳಿಂದ ಪ್ರಯತ್ನದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಲಾಗಿದೆ. ಇರಿಗೇಷನ್ ಬಾಂಡುಗಳ ಮೂಲಕ ಸಂಪನ್ಮೂಲವನ್ನು ಕೂಡಿಸಲಿಕ್ಕೆ ಕೇಂದ್ರ ಸರ್ಕಾರವನ್ನು ಪದೇ ಪದೇ ಒತ್ತಾಯಿಸಲಾಗಿದೆ. ಪುನರ್ ವಸತಿ ಯೋಜನೆಗಳು ಕಳೆದ ೨೦ ವರ್ಷಗಳಿಂದ ಅಪೂರ್ಣವಾಗಿದ್ದು ಪೂರ್ಣಗೊಳಿಸಲು ವಿಶೇಷ ಗಮನವನ್ನು ಕೊಡಲಾಗಿದೆ. ಕಡಲ ಕೊರೆತದ ಕೆಲಸಗಳನ್ನು ತೀವ್ರಗತಿಯಿಂದ ಕೈಗೊಳ್ಳಲಾಗುವುದು. ಈಗಾಗಲೇ ೨೦ ಲಕ್ಷ ರೂಪಾಯಿಗಳನ್ನು ಪ್ರಕೃತಿ ವಿಕೋಪ ಯೋಜನೆಗೆ ೧.೭೯ ಕೋಟಿ ರೂಪಾಯಿಗಳ ಅನುದಾನದಲ್ಲಿ ಕೊಡಲು ನಿರ್ಧರಿಸಲಾಗಿದೆ. ಭೂಸ್ವಾಧೀನ ಪ್ರಕರಣಗಳನ್ನು ತೀವ್ರಗತಿಯಲ್ಲಿ ಇತ್ಯರ್ಥ ಮಾಡಲು ನೇರವಾಗಿ ಭೂಮಾಲೀಕರೊಡನೆ ಸಂಧಾನ ನಡೆಸಿ ಪರಿಹಾರ ನೀಡಿ ವಶಕ್ಕೆ ಪಡೆಯುವ ವಿಷಯ ಈಗಾಗಲೇ ಪ್ರಸ್ತಾಪಿಸಲಾಗಿದ್ದು ಸಮಾಲೋಚನೆಯನ್ನು ಮುಂದುವರಿಸಲಾಗಿದೆ. ಗೋದಾವರಿ ಕೊಳದ ನೀರನ್ನು ಉಪಯೋಗಿಸಲಿಕ್ಕೆ ಕಾಲಮಿತಿ ನಿಗದಿತವಾಗಿಲ್ಲ. ಆದಾಗ್ಯೂ ಮಂಜ್ರಾ ಏತ ನೀರಾವರಿ ಯೋಜನೆ ಬಗ್ಗೆ ತಾಂತ್ರಿಕ ಸಮಿತಿಯ ಸಲಹೆಯಂತೆ ಹೆಚ್ಚಳ ನೀರನ್ನು ಉಪಯೋಗಿಸುವ ದಿಶೆಯಲ್ಲಿ ಅಂದಾಜು ತಯಾರಿಕೆ ಮಾಡಲಾಗುತ್ತಿದೆ. ಕೆರೆಗಳಲ್ಲಿ ಹೂಳನ್ನು

ತೆಗೆಯುವ ಬಗ್ಗೆ ಮಾದರಿ ಯೋಜನೆಗಳನ್ನು ಆಯ್ಕೆ ಮಾಡಲಾಗಿದೆ. ಅಧ್ಯಯನ ಫಲಿತಾಂಶ ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ವಿಶ್ಲೇಷಿಸಿದ ನಂತರ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು. ಯೋಜನೆಗಳಲ್ಲಿ ಆಗುವ ಹೆಚ್ಚುವರಿ ವೆಚ್ಚವನ್ನು ತಡೆಗಟ್ಟಲು ಹಾಗೂ ಸೆಂಟ್ರಲ್ ಡಿಜೈನ್ ಆರ್ಗನೈಜೇಷನ್ ಒಂದನ್ನು ತಯಾರು ಮಾಡಲಾಗುತ್ತಿದೆ. ಉಚ್ಚ ಶಿಕ್ಷಣಕ್ಕಾಗಿ ಅರ್ಹ ಇಂಜಿನಿಯರುಗಳನ್ನು ತಾಂತ್ರಿಕ ಪೋಸ್ಟ್ ಗ್ರಾಜುಯೇಷನ್‌ಗೋಸ್ಕರ ವಿದೇಶಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ. ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ ಕಾರ್ಯಕ್ರಮಗಳನ್ನು ಹೆಚ್ಚು ರೂಪಿಸಲಾಗಿದೆ. ಮೂರನೇ ಒಂದು ಅನುದಾನದ ಬದಲಾಗಿ ಒಂದೇ ವರ್ಷದಲ್ಲಿ ಮುಗಿಸುವಂತೆ ಪೂರಾ ಅನುದಾನವನ್ನು ಕೊಡುವ ಯೋಜನೆ ಸರ್ಕಾರದ ಗಮನದಲ್ಲಿದೆ. ಮತ್ತೆ ಮಾನ್ಯ ಸದಸ್ಯರುಗಳು ಕೆಲವರು ಕಾವೇರಿ ಟ್ರಿಬ್ಯುನಲ್ ಬಗ್ಗೆ ಟೆಕ್ನಿಕಲ್ ಕಮಿಟಿ ಮತ್ತು ಲೀಗಲ್ ಸಮಿತಿಗಳನ್ನು ಮಾಡಲಾಗಿದೆಯೋ ಎಂದು ಒಂದು ಪ್ರಶ್ನೆಯನ್ನು ಕೇಳಿದ್ದರು. ಮತ್ತು ಅವನ್ನು ಈ ಸದನಕ್ಕೆ ತಿಳಿಸಬೇಕು ಎಂದೂ ಕೂಡಾ ನಮ್ಮ ಉಪನಾಯಕರು ಬಹಳ ಆಗ್ರಹಪೂರ್ವಕವಾಗಿ ಅದನ್ನು ಕೇಳಿದ್ದಾರೆ. ಈ ತಾಂತ್ರಿಕ ಸಮಿತಿಯನ್ನು ಸರ್ಕಾರ ಈಗಾಗಲೇ ರಚನೆ ಮಾಡಲಾಗಿದೆ. ಅವರ ಹೆಸರುಗಳನ್ನು ಈ ಸಂದರ್ಭದಲ್ಲಿ ಪ್ರಕಟಿಸಲಿದ್ದೇನೆ.

ಸೆಕ್ರೆಟರಿ—೨—ಛೇರ್ಮನ್ ಆಗಿದ್ದಾರೆ.

ಸೆಕ್ರೆಟರಿ—೧—ಸದಸ್ಯರು

ಎಸ್. ಜಿ. ಬಾಳೆಕುಂದ್ರಿ—ಸದಸ್ಯರು

ಆರ್. ಚಿಕ್ಕಣ್ಣ—ಸದಸ್ಯರು

ಎ. ಬಿ. ಶಂಕರರಾವ್—ಚೀಫ್ ಇಂಜಿನಿಯರ್ (ರಿಟೈರ್ಡ್) ಗೌರ್ನಮೆಂಟ್ ಆಫ್ ಕರ್ನಾಟಕ, ಸದಸ್ಯರು

ಆರ್. ದ್ವಾರಕನಾಥ್—ವಿ. ಸಿ., ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್, ಹೆಬ್ಬಾಳ ಸದಸ್ಯರು

ಪ್ರೊ॥ ಎಂ. ಎಸ್. ರಾಮಪ್ರಸಾದ್—ಡಿಪಾರ್ಟ್‌ಮೆಂಟ್ ಆಫ್ ಸಿವಿಲ್ ಇಂಜಿನಿಯರಿಂಗ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಸದಸ್ಯರು

ಕೆ. ಆರ್. ಕಾರಂತ—ಡೈರೆಕ್ಟರ್, ಸೆಂಟ್ರಲ್ ಗ್ರೌಂಡ್ ವಾಟರ್ ಬೋರ್ಡ್, ಸದಸ್ಯರು

ಬಿ. ಕೆ. ಮೂರ್ತಿ—ಚೀಫ್ ಇಂಜಿನಿಯರ್, ಇರಿಗೇಷನ್ ಡಿಪಾರ್ಟ್‌ಮೆಂಟ್, ಗೌರ್ನಮೆಂಟ್ ಆಫ್ ಗುಜರಾತ್, ಸರಸ್ವತಿಪುರಂ, ಮೈಸೂರು, ಸದಸ್ಯರು

ಎಸ್. ಎಲ್. ನಂಜುಂಡಸ್ವಾಮಿ—ಡೆಪ್ಯುಟಿ ಸೆಕ್ರೆಟರಿ (ರಿಟೈರ್ಡ್) ಸದಸ್ಯರು.

ಚೀಫ್ ಇಂಜಿನಿಯರ್ ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಆರ್ಗನೈಜೇಷನ್, ಬೆಂಗಳೂರು, ಸದಸ್ಯ—ಕಾರ್ಯದರ್ಶಿಗಳು

ಮತ್ತು ಕಾನೂನು ಸಲಹಾ ಸಮಿತಿಯ ಸದಸ್ಯರುಗಳು ಈ ರೀತಿ ಇದ್ದಾರೆ :

ಬಿ. ವಿ. ಆಚಾರ್ಯರು—ಅಡ್ವೋಕೇಟ್ ಜನರಲ್, ಛೇರ್ಮನ್

ಬಿ. ವೆಂಕಟಸ್ವಾಮಿ—ರಿಟೈರ್ಡ್ ಹೈಕೋರ್ಟ್ ಜಡ್ಜ್, ಬೆಂಗಳೂರು, ಸದಸ್ಯರು

ಶರದ್ ಎಸ್. ಜವಳಿ—ಅಡ್ವೋಕೇಟ್, ನವದೆಹಲಿ, ಸದಸ್ಯರು

ಎಂ. ಎನ್. ಗುರುಸ್ವಾಮಿ—ಅಡ್ವೋಕೇಟ್, ಮೈಸೂರು, ಸದಸ್ಯರು

ಹೆಚ್. ಹನುಮೇಗೌಡ—ಅಡ್ವೋಕೇಟ್, ಮಂಡ್ಯ, ಸದಸ್ಯರು

ಟಿ. ವೆಂಕಟಸ್ವಾಮಿ—ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್, ಸದಸ್ಯರು

ಪಿ. ಎಲ್. ಕುಮಾರಸ್ವಾಮಿ—ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್, ಬೆಂಗಳೂರು, ಸದಸ್ಯರು

ಎಸ್. ಎಸ್. ಅಜ್ಜಿ—ರಿಟೈರ್ಡ್ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜ್, ಸದಸ್ಯರು

ಕೆ. ಎ. ಕೃಷ್ಣಸ್ವಾಮಿ—ಅಡ್ವೋಕೇಟ್, ಹಾಸನ, ಸದಸ್ಯರು

ರೋಬಿನ್ಸನ್ ಡಿಸೋಜಾ—ಅಡಿಷನಲ್ ಸಾಲಿಸಿಟರ್, ಕಾರ್ಯದರ್ಶಿಗಳು

ಶ್ರೀ ಎಸ್. ಹೆಚ್. ಕೌಜಲಗಿ.—'' ಲಾ '' ದು ರಾಜಕೀಯವಾಗಿದೆ. ಲೀಗಲ್‌ದ್ದು ಅಷ್ಟೇನೂ ಸರಿಯಾಗಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ತಾವು ಯಾರಾದರೂ ಇದ್ದರೆ ಸಲಹೆಯನ್ನು ಕೊಡಿ. ಅವರನ್ನೂ ಸೇರಿಸಿಕೊಳ್ಳೋಣ. ಇದರಲ್ಲಿ ರಾಜಕೀಯ ಏನೂ ಇಲ್ಲ. ಈ ಸಮಿತಿಗೆ ರಾಜಕೀಯವನ್ನು ಬೆರೆಸ ಬಾರದು.

ಶ್ರೀ ಎಸ್. ಹೆಚ್. ಕೌಜಲಗಿ. ಬಹಳ ಅನುಭವಸ್ಥರು ಸಿಗುತ್ತಿದ್ದರು. ಬಹಳ ಹೆಚ್ಚಿನ ಅನುಭವ ಇದ್ದವರನ್ನು ಹಾಕಿದ್ದರೆ ಬಹಳ ಚಲೋ ಆಗುತ್ತಿತ್ತು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಯಾರಾದರು ಇದ್ದರೆ ಸಲಹೆಯನ್ನು ಕೊಡಿ. ತಮ್ಮ ಸಲಹೆ ಯನ್ನು ನಾನು ತೆಗೆದುಕೊಳ್ಳುತ್ತೇನೆ. ಬಹಳ ಜನ ಸದಸ್ಯರು ಈ ಇಲಾಖೆಯ ಬಗ್ಗೆ ಕಟುವಾಗಿ ಬಹಳ ಮಾರ್ಮಿಕವಾಗಿ ಮಾತನಾಡಿದ್ದಾರೆ. ಅದರಲ್ಲಿಯೂ ಪ್ರಮುಖವಾಗಿ ನಮ್ಮ ಉಪನಾಯಕರು ಮಾತನಾಡಿದ್ದಾರೆ. ಬಹುಶಃ ನಾನು ಇಂಥ ಮಾರ್ಮಿಕವಾದ ಭಾಷಣವನ್ನು ಅವರಿಂದ ಕೇಳಿದ್ದೇ ಇದೇ ಮೊದಲು. ಬಹುಶಃ ಅದು ನನ್ನ ಮುಂದಿನ ಮಾರ್ಗ ದರ್ಶನಕ್ಕೆ ಮತ್ತು ನಾನು ನಿರ್ವಹಿಸಬೇಕಾದಂಥ ಕೆಲಸಕ್ಕೆ ಇದು ಒಂದು ಅತ್ಯುತ್ತಮವಾದಂಥ ಒಂದು ಬುದ್ಧಿವಾದದ ಕೊಡುಗೆ ಎಂದು ನಾನಾದರೂ ಕೂಡಾ ಭಾವನೆ ಮಾಡುತ್ತೇನೆ. ಅವರು ಪ್ರಮುಖವಾಗಿ ಒಂದು ಹೇಳಿದರು, ನೀವು ನಿರ್ವಹಿಸುತ್ತಿರ ತಕ್ಕಂಥ ಕೆಲಸ ಮತ್ತು ಆ ಸ್ಥಾನ ಬಹಳ ಕಷ್ಟವಾದಂಥದು. ಜವಾಬ್ದಾರಿಯುತವಾದಂಥದ್ದು. ಹೆಚ್ಚಿಗೆ ಪ್ರಚಾರ ಮಾಡಿಕೊಳ್ಳುವುದು ಬೇಡಿ. ಸಮರ್ಪಣಭಾವದಿಂದ ಕೆಲಸ ಮಾಡಬೇಕು ಎನ್ನುವ ಒಂದು ಸಲಹೆಯನ್ನು ಅವರು ಕೊಟ್ಟಿದ್ದಾರೆ. ನಾನು ವೈಯಕ್ತಿವಾಗಿ ಅವರಿಗೆ ಮತ್ತು ಪಾಟೀಲ್ ನಾಗರಾಜ್‌ರವರಿಗೆ ಈ ಸಮಯದಲ್ಲಿ ವಂದನೆಯನ್ನು ಸಲ್ಲಿಸುತ್ತಾ ನನ್ನ ಮತ್ತು ಸರ್ಕಾರದ ನಿಲುವನ್ನು ನಾನು ಅವರಿಗೆ ಮೊದಲು ಸ್ಪಷ್ಟ ಮಾಡುತ್ತೇನೆ. ನನ್ನ ಉದ್ದೇಶ, ದೋಷಗಳನ್ನು ಕಂಡುಹಿಡಿಯು ವುದು ನಮ್ಮ ಗುರಿಯಲ್ಲ, ಸಾಧನೆಯೂ ಅಲ್ಲ. ಯಾರ ಮೇಲೂ ದ್ವೇಷವನ್ನು ಸಾಧಿಸುವುದಿಲ್ಲ. ಸಂಘರ್ಷಕ್ಕೂ ಕೂಡಾ ಇಳಿಯುವುದಿಲ್ಲ. ಅಭಿವೃದ್ಧಿ ಕೆಲಸಗಳಿಗೆ ರಾಜಕೀಯವನ್ನೂ ಕೂಡಾ ನಾನು ಬೆರೆಸುವುದಿಲ್ಲ. ಜನತೆ ನಮಗೆ ಕೊಟ್ಟಿರುವ ಅಧಿಕಾರವನ್ನು ದುರುಪಯೋಗಪಡಿಸಿ ಸ್ವಾರ್ಥ ರಾಜಕಾರಣವಂತೂ ಮಾಡುವುದಿಲ್ಲ. ಸರ್ವಾಂಗೀಣ ಪ್ರಗತಿಯೇ ನಮ್ಮ ಸರ್ಕಾರದ ಗುರಿ. ಸಮರ್ಪಣಾ ಭಾವದಿಂದ ಕೆಲಸ ಮಾಡಲು ಪ್ರತಿಜ್ಞೆ ಮಾಡಿದ್ದೇವೆ. ಅವರು ಮತ್ತೊಂದು ಮಾತನ್ನು ಹೇಳಿದರು, ಏನೆಂದರೆ ನೀರಾವರಿ ಮಂತ್ರಿಗಳ ಸ್ಥಾನದಲ್ಲಿ ಕೂತಾಗ ಅವರ ಮನಸ್ಸು ಯಾವುದಾದ್ರೂ ವುದಕ್ಕೇ ಆಸೆ ಪಡುತ್ತದೆ ಎನ್ನತಕ್ಕಂಥ ಮಾತನ್ನು ಮಾರ್ಮಿಕವಾಗಿ ಒಂದು ಮಾತನ್ನು ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ೧೮ ವರ್ಷದ ನಂತರ ಎರಡನೇ ಬಾರಿಗೆ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಈ ಸ್ಥಾನಕ್ಕೆ ಬಂದಿದ್ದಾರೆ. ಅವರಂತೂ ಕಂಡಿರಲಿಲ್ಲ. ನಾನು ಮುಖ್ಯಮಂತ್ರಿ ಯಾಗುತ್ತೇನೆಂದು. ಪರಿಸ್ಥಿತಿ ಅವರನ್ನು ಈ ಪಟ್ಟಕ್ಕೆ ತಂದು ಇಲ್ಲಿ ಕೂರಿಸಿದೆ. ಅಂಥ ಮಹಾನ್ ಮುಖ್ಯಮಂತ್ರಿಗಳು ಈ ರಾಜ್ಯಕ್ಕೆ ಉತ್ತಮವಾದಂಥ ಆಡಳಿತವನ್ನು ಕೊಡಬೇಕು, ಪ್ರಾಮಾಣಿಕವಾದಂಥ ಆಡಳಿತವನ್ನು ಕೊಡಬೇಕೆಂಬ ಸದ್ಭಾವನೆಯನ್ನು ಹೊಂದಿ ಕೆಲಸ ಮಾಡು ತ್ತಿದ್ದಾರೆ, ಯಾವುದೇ ಹಗರಣಗಳಿಗೆ ಯಾವುದೇ ವಿಧವಾದಂಥ ಸಂಪರ್ಕಕ್ಕೆ ಅವರು ಹೋಗು ವುದಕ್ಕೆ ಅವರು ಹೋಗುವುದಕ್ಕೆ ಅವರು ತಯಾರು ಇಲ್ಲ ಎನ್ನತಕ್ಕಂಥದನ್ನು ನಾನು ನಿಮಗೆ ಮನವರಿಕೆ ಮಾಡಿಕೊಡುತ್ತೇನೆ. ಸ್ವಾಮಿ, ನಾನಂತೂ ಈ ಚುನಾವಣೆಯಲ್ಲಿ ಗೆದ್ದು ಬರುತ್ತೇನೆ ಎಂದು ತಿಳಿದುಕೊಂಡಿರಲಿಲ್ಲ. ಚುನಾವಣೆಯಲ್ಲಿ ಗೆದ್ದ ನಂತರ ನಾನು ಮಂತ್ರಿಯಾಗುತ್ತೇನೆ, ನೀರಾವರಿ ಮಂತ್ರಿಯಾಗುತ್ತೇನೆ ಎಂದು ನಾನು ನಿರೀಕ್ಷಣೆ ಮಾಡಿರಲಿಲ್ಲ. ಹೇಗೋ ಬದುಕಿ ಬಂದಿದ್ದೇನೆ. ನಮ್ಮ ನಾಯಕರು ನನ್ನನ್ನು ಗುರುತು ಮಾಡಿದ್ದಾರೆ. ಈ ಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ನನಗೆ ಹೇಳಿ ದ್ದಾರೆ. ನನ್ನನ್ನು ನಂಬಿ ಈ ಜಾಗದಲ್ಲಿ ಕೂರಿಸಿದ್ದಾರೆ. ಈಗ ನನ್ನಿಂದ ಅವರು ಬಹಳ ನಿರೀಕ್ಷಣೆ ಮಾಡುತ್ತಾ ಇದ್ದಾರೆ. ಆಡಳಿತದಲ್ಲಿ ಏನಾದರೂ ಹೊಸ ಬದಲಾವಣೆ ಮಾಡತಕ್ಕಂಥಾದ್ದರ ಮೂಲಕ ದಕ್ಷತೆಯನ್ನು ಹೆಚ್ಚಿಸಿ ನಾನು ಈ ರಾಜ್ಯಕ್ಕೆ ಒಳ್ಳೆಯದನ್ನು ಮಾಡುತ್ತೇನೆಂದು ಅವರು ನಿರೀಕ್ಷಣೆ ಮಾಡಿದ್ದಾರೆ. ಸ್ವಾಮಿ, ಅವರ ನಿರೀಕ್ಷೆಗೆ ತಕ್ಕ ಕೆಲಸವನ್ನು ಖಂಡಿತ ಪ್ರಾಮಾಣಿಕ ಮಾಡುತ್ತೇನೆ. ನಾನಂತೂ ಅವರಿಗೆ ದ್ರೋಹ ಮಾಡಲಿಕ್ಕೆ ಹೋಗುವುದಿಲ್ಲ. ಆ ಕುರ್ಚಿಗೆ ನಾನು ಅಂಟಿಕೊಂಡಿರು ವುದಕ್ಕೂ ಹೋಗುವುದಿಲ್ಲ. ಈ ಸ್ಥಾನವನ್ನು ದುರುಪಯೋಗ ಮಾಡಲಿಕ್ಕೂ ನಾನು ಹೋಗುವುದಿಲ್ಲ. ಒಂದು ಭಾವನೆ ಇದೆ. ಸನ್ಮಾನ್ಯ ಸಿಂಧ್ಯರವರಿಗೆ ನನ್ನ ವೈಯುಕ್ತಿಕ ಜೀವನ ಗೊತ್ತಿದೆ. ನನಗೆ ಯಾವ ಆಸೆ ಆಕಾಂಕ್ಷೆಗಳು ಕೂಡ ಇಲ್ಲ. ಸಿಕ್ಕಿದಂಥ ಅವಕಾಶವೇ ನನ್ನ ಅದೃಷ್ಟ. ಬಹುಶಃ ನಾನು ಮೊದಲೇ ಹೇಳಿದ ಹಾಗೆ ಹೇಗೋ ಬದುಕಿ ಬಂದಿದ್ದೇನೆ, ಅವಕಾಶ ಸಿಕ್ಕಿದೆ, ನನ್ನನ್ನು ನಾಯಕರು ಗುರುತು ಮಾಡಿ ಈ

ಜಾಗವನ್ನು ಕೊಟ್ಟಿದ್ದಾರೆ. ಜನರಿಗೆ ದ್ರೋಹ ಮಾಡದೆ, ಮುಖ್ಯಮಂತ್ರಿಗಳಿಗೆ ಮತ್ತು ಆ ಸ್ಥಾನಕ್ಕೆ ದ್ರೋಹ ಮಾಡದೆ ಈ ಕೆಲಸವನ್ನು ಮಾಡಿ ಸಿಕ್ಕಿರತಕ್ಕಂಥ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳುತ್ತೇನೆ, ಎನತಕ್ಕಂಥ ಒಂದು ಭಾವನೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಾ ಇದ್ದೇನೆ, ಸಮರ್ಪಣ ಭಾವದಿಂದ ಕೆಲಸ ಮಾಡುತ್ತೇನೆ. ಒಂದು ಏನು ಭಾವನೆ ಇದೆ ಎಂದರೆ, ನೀರಾವರಿ ಮಂತ್ರಿ ಆದವರೆಲ್ಲಾ ಮುಖ್ಯಮಂತ್ರಿಯಾಗತಕ್ಕಂಥದ್ದಕ್ಕೆ ಪ್ರಯತ್ನ ಪಡುತ್ತಾರೆ ಎನ್ನತಕ್ಕಂಥ ಮಾತನ್ನು ನಾನು ಕೇಳಿದ್ದೇನೆ. ಸ್ವಾಮಿ, ನನ್ನ ವೈಯುಕ್ತಿಕ ಪರಿಸ್ಥಿತಿಯಲ್ಲಿ ಆ ಒಂದು ಪ್ರಯತ್ನ ಮಾಡುವುದಿಲ್ಲ. ನಾಯಕರಲ್ಲಿ ನಿಷ್ಠೆ ಇಟ್ಟು ಕೆಲಸ ಮಾಡತಕ್ಕಂಥ ಜನ ನಾವು. ಒಂದು ಸಾರಿ ಒಬ್ಬ ನಾಯಕನನ್ನು ನಂಬಿದರೆ, ಆ ನಂಬಿದಂಥ ನಾಯಕರಿಗೆ ದ್ರೋಹ ಮಾಡತಕ್ಕಂಥದ್ದು ಎಳ್ಳಷ್ಟೂ ನಮ್ಮಲ್ಲಿ ಬೆಳೆದು ಬರಲಿಲ್ಲ, ಮುಂದೆ ಬರುವುದೂ ಇಲ್ಲ. ಅವರ ವಿಶ್ವಾಸ ಎಲ್ಲಿಯವರೆಗೆ ನಮಗೆ ಇರುತ್ತದೋ ಅಲ್ಲಿಯವರೆಗೆ ನಾನು ಕೆಲಸ ಮಾಡುತ್ತೇನೆ. ಆ ವಿಶ್ವಾಸ ಹೋದ ಮರುಘಳಿಗೆಯಲ್ಲಿಯೇ ನಾನು ಈ ಸ್ಥಾನದಲ್ಲಿರುವುದಿಲ್ಲ. ನನಗೆ ವೈಯುಕ್ತಿಕವಾಗಿ ಆಗಬೇಕಾದ್ದೇನೂ ಇಲ್ಲ. ಬಹುಶಃ ಈ ರಾಜಕೀಯ ಸಂಘರ್ಷದಲ್ಲಿ ಎಲ್ಲವನ್ನೂ ನಾನು ಕಳೆದುಕೊಂಡಿದ್ದೇನೆ. ಕೊನೆ ಉಸಿರಿನಲ್ಲಿದ್ದೇನೆ. ಇದ್ದಂಥ ಸಂದರ್ಭದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ ಜನತೆಗೆ ಮತ್ತು ನಾಯಕನಿಗೆ ಒಳ್ಳೆಯ ಹೆಸರು ತರತಕ್ಕಂಥ ಪ್ರಯತ್ನ ಮಾಡುತ್ತೇನೆಯೇ ಹೊರತು ಯಾವ ಕಾರಣದಿಂದಲೂ ಕೂಡ ನಾನು ದಾರಿತಪ್ಪಿ ನಡೆಯುವುದಿಲ್ಲ, ಅಂತಹ ಒಂದು ದುಸ್ಸಾಹಸಕ್ಕೆ ಪ್ರಯತ್ನ ಮಾಡುವುದಿಲ್ಲ ಎನ್ನತಕ್ಕಂಥ ಪ್ರತಿಜ್ಞೆಯನ್ನು ತಮ್ಮ ಮೂಲಕ ಈ ಸಮಯದಲ್ಲಿ ಹೇಳಬಯಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಮ್ಮ ಉಪನಾಯಕರಿಗೂ ಮಂತ್ರಿಗಳಿಗೂ ಏನೋ ರಾಜಕೀಯ ಸಂಬಂಧವಿದೆ, ಏನು ಎಂದ , ನನಗೆ ಗೊತ್ತಾಗಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸ್ವಾಮಿ, ನಾಯಕರೆ, ಆ ಸಂಬಂಧವಿತ್ತು. ನಾನೂ ಅವರೂ ಒಂದೇ ಕಡೆ ಬೆಳೆದವರು, ಬಹಳ ವರ್ಷ ಜೊತೆಯಲ್ಲೇ ಇದ್ದಂಥವರು. ಆ ಗುಟ್ಟು ಅವರಿಗೂ ಗೊತ್ತು, ನನಗೂ ಗೊತ್ತು.

ಶ್ರೀ ವಾಟಾಳ್ ನಾಗರಾಜ್.—ಆ ಗುಟ್ಟು ಈಗ ಬಹಿರಂಗವಾಗುವುದು ಬೇಡ.

ಶ್ರೀ ಜಿ. ಪುಟ್ಟಸ್ವಾಮಿಗೌಡ. ಆದರೆ ಈಗ ಬೇರೆ ಬೇರೆ ಇದ್ದೇವೆ. ಅವರು ಒಂದು ಪಕ್ಷವನ್ನು ಪ್ರತಿನಿಧಿಸುತ್ತಾ ಇದ್ದಾರೆ, ನಾನು ಒಂದು ಪಕ್ಷದಲ್ಲಿದ್ದೇನೆ. ಅವರಿಗೆ ತಿಳಿದಿದ್ದನ್ನು ಅವರು ಹೇಳಿದ್ದಾರೆ. ನೀವು ಈ ರೀತಿ ಮಾಡಬೇಕು. ಹಿಂದೆ ಇಂತಹ ತಪ್ಪುಗಳಾಗಿವೆ, ಆ ರಾಜಕೀಯ ಕಳಂಕವನ್ನು ನೀವು ಹಚ್ಚಿಕೊಳ್ಳತಕ್ಕಂಥದ್ದು ಬೇಡ ಎನ್ನತಕ್ಕಂಥ ಬುದ್ಧಿವಾದ ಹೇಳಿದ್ದಾರೆ. ಅದನ್ನು ನಾನು ಮನಸಾರೆ ಒಪ್ಪಿದ್ದೇನೆ.

ಶ್ರೀ ಬಿ ಹೆಚ್. ಬನ್ನಿಕೋಡ್.—ಅವರಿಬ್ಬರೂ ಸದನಕ್ಕೆ ಬರಲಿಕ್ಕೆ ಒಬ್ಬರೇ ಕಾರಣ, ಅದಕ್ಕೆ ಇಬ್ಬರದ್ದೂ ಗುಟ್ಟು ಒಂದೇ ಇದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆದುದರಿಂದ ನಾನು ಅದನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡು ಎಚ್ಚರದಿಂದ ಕೆಲಸ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಸ್ವಾಮಿ, ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ ಆಡಳಿತ ಬಹಳಷ್ಟು ಮಟ್ಟಿಗೆ ಹದಗೆಟ್ಟಿದೆ. ಬಹಳ ಜನ ಸದಸ್ಯರು ಆ ಮಾತನ್ನು ಹೇಳಿದ್ದಾರೆ. ಮತ್ತು ಪ್ರಾಮಾಣಿಕತೆಯ ಅಭಾವ ಕೂಡ ಇದೆ. ದಕ್ಷತೆ ಕೂಡ ಕುಗ್ಗಿದೆ. ಸಮರ್ಪಣ ಭಾವನೆ ನಮ್ಮ ಇಲಾಖೆಯಲ್ಲಿ ಇಲ್ಲ ಎನ್ನತಕ್ಕಂಥದ್ದನ್ನು ನಾನೂ ಕೂಡ ಅರಿತಿದ್ದೇನೆ. ಕೆಲವರು ಬಹಳ ಆಕ್ರೋಶವಾಗಿ, ಕಟುವಾಗಿ ಹೇಳಿದ್ದಾರೆ, ಮತ್ತೆ ಕೆಲವರು ಸಲಹಾ ರೂಪದಲ್ಲಿ ಹೇಳಿದ್ದಾರೆ. ಅಂತೂ ಈ ಇಲಾಖೆಯಲ್ಲಿ ಈ ಎಲ್ಲ ಲೋಪಗಳಾಗಿವೆ ಎನ್ನುವುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಇದರಿಂದ ರಾಜ್ಯದ ಕೋಟ್ಯಾಂತರ ರೂಪಾಯಿಗಳ ಅಪವ್ಯವಹಾರ ಆಗುತ್ತಾ ಇದೆ, ಇಲ್ಲಿ ಹೂಡಿದಂಥ ಬಂಡವಾಳಕ್ಕೆ ಸಾಕಷ್ಟು ಪ್ರತಿಫಲ ಕೂಡ ಇಲ್ಲ. ಇದಕ್ಕೆ ಇಲಾಖೆಯ ಅಧಿಕಾರಿಗಳೇ ಕಾರಣರು ಎಂದು ಹೇಳುವಷ್ಟರ ಮಟ್ಟಿಗೆ ನಾನು ಹೋಗುವುದಿಲ್ಲ. ಆಡಳಿತದಲ್ಲಿ ಆ ಒಂದು ಲೋಪ ಇದ್ದರೂ ಕೂಡ ಈ ಲೋಪಕ್ಕೆ ಕೇವಲ ಅಧಿಕಾರಿಗಳೇ ಕಾರಣರು ಎಂದು ಹೇಳತಕ್ಕಂಥ ಮಟ್ಟಕ್ಕೆ ನಾನು ಹೋಗುವುದಿಲ್ಲ. ಇದಕ್ಕೆ ರಾಜಕೀಯ ಪರಿಸರ, ರಾಜಕೀಯ ಹಸ್ತಕ್ಷೇಪ ಕೂಡ ಕಾರಣ ಎನ್ನತಕ್ಕಂಥದ್ದನ್ನು ನಾವು ಒಪ್ಪಿಕೊಳ್ಳಬೇಕು. ಸ್ವಾಮಿ, ಈ ಒಂದು ಹದಗೆಟ್ಟ ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆಯೆಂದರೆ ಬಹುಶಃ ಇದನ್ನು ರಿಪೇರಿ ಮಾಡಲಿಕ್ಕೆ

ಆಗುವುದಿಲ್ಲವೋ ಎನ್ನುವಂಥ ಘಟ್ಟವನ್ನೂ ಕೂಡ ತಲುಪಿದೆ. That is an irrepairable tage ಈ ಮಟ್ಟವನ್ನು ಮಾಡುವುದಕ್ಕೆ ಮೊದಲು ನಮ್ಮಲ್ಲಿ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. A political will is necessary. ಅದು ಇಲ್ಲದೆ ಹೋದರೆ, ನಾವು ಇದನ್ನು ಸರಿಪಡಿಸುವುದಕ್ಕೆ ಖಂಡಿತಾ ಸಾಧ್ಯ ಆಗುವುದಿಲ್ಲ. ಆದ್ದರಿಂದ ನಾನು ಇದಕ್ಕೆ ಕಾರಣ ಕಂಡು ಹಿಡಿಯುವುದಕ್ಕೆ ಹೋಗುವುದಿಲ್ಲ. ಅದನ್ನು ಹಿಡಿಯತಕ್ಕಂಥಾದ್ದು ನಮ್ಮ ಕೆಲಸವೂ ಅಲ್ಲ. ಜನ ನಮಗೆ ಓಟು ಕೊಟ್ಟಿರುವಂಥಾದ್ದು ಹಿಂದೆ ಆಗಿರತಕ್ಕ ಲೋಪಕ್ಕೆಲ್ಲಾ ಕಾರಣಗಳನ್ನು ಹುಡುಕುವುದಕಲ್ಲ. ಇಂತಹ ಲೋಪಗಳನ್ನು ಸರಿಪಡಿಸಿ ಜನರಿಗೆ ಆಗಬೇಕಾದ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಜನರು ನಮಗೆ ಓಟು ಕೊಟ್ಟಿದ್ದಾರೆಯೇ ವಿನಃ ಬೇರೆ ಕಾರಣಕ್ಕೆ ಅಲ್ಲ. ಆದ್ದರಿಂದ ಈಗಿರುವ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ನಾವು ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ನಾವು ಇಟ್ಟುಕೊಂಡು ಆ ದಿಸೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಸ್ವಾಮಿ, ನಾವು ಇಲಾಖೆಯ ದಿನನಿತ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನತಕ್ಕ ನಿಲುವನು ತೆಗೆದುಕೊಂಡಿದ್ದೇವೆ. ಇಲಾಖೆಯ ಮುಖ್ಯಸ್ಥರಿಗೆ ಪೂರ್ಣ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಒಂದು ವೇಳೆ ಅದರಲ್ಲಿ ಏನಾದರು ಲೋಪ ಆದರೆ, ಇಲಾಖೆಯ ಮುಖ್ಯಸ್ಥರಿಗೆ ಪೂರ್ಣ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಒಂದು ವೇಳೆ ಅವರಲ್ಲಿ ಏನಾದರು ಲೋಪ ಆದರೆ, ಇಲಾಖೆಯ ಮುಖ್ಯಸ್ಥರೇ ಕಾರಣರು ಎಂಬ ಮಾತನ್ನು ಸ್ಪಷ್ಟವಾಗಿ ಈ ಸಭೆಗೆ ತಿಳಿಸುತ್ತಿದ್ದೇನೆ. ಪಕ್ಷ ರಾಜಕಾರಣಕ್ಕೆ ಆಗಲೀ ಸ್ವಾರ್ಥ ರಾಜಕಾರಣಕ್ಕೆ ಆಗಲೀ ಇಲಾಖೆಯನ್ನು ಖಂಡಿತವಾಗಿ ದುರುಪಯೋಗ ಮಾಡಿಕೊಳ್ಳುವುದಿಲ್ಲ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ಇಲ್ಲದೆ ರಾಜಕೀಯ ಮಾಡಲಿಕ್ಕೆ ಸಾಧ್ಯವಿದೆ ಎನ್ನತಕ್ಕದ್ದನ್ನು ನಾವು ನಮ್ಮ ಚುನಾವಣೆಯಲ್ಲಿ ಸಾಬೀತು ಮಾಡಿದ್ದೇವೆ. ನಾವು ಮಾಡಿರತಕ್ಕ ಪ್ರಯೋಗದ ಫಲಿತಾಂಶದ ಹಿನ್ನಲೆಯಲ್ಲಿ, ನಾವು ಆ ಘಟ್ಟ ತಲುಗಿದ್ದೇವೆ. ಈ ಎರಡೂ ಇಲಾಖೆಗಳನ್ನು ಆಗಲೀ ಅಧಿಕಾರಿಗಳನ್ನಾಗಲೀ ರಾಜಕೀಯಕ್ಕೆ ಬಳಸಿಕೊಳ್ಳಬೇಕಾಗಿಲ್ಲ, ಇದಕ್ಕೆ ಒಂದು ಕಾಯಕಲ್ಪ ಮಾಡಬೇಕಾಗುತ್ತದೆ. ಈ ಇಲಾಖೆಯನ್ನು ನಾವು ಎಲ್ಲ ರೀತಿಯಿಂದ ಪ್ರಾಮಾಣಿಕತೆಯನ್ನು ಹೆಚ್ಚಿಸುವ ಮೂಲಕ ಸಮರ್ಪಣ ಮನೋಭಾವದಿಂದ ಕೆಲಸ ಮಾಡಿಸಲು ನಾವು ಅವಕಾಶ ಮಾಡಿಕೊಡಬೇಕಾಗುತ್ತದೆಂಬ ಅಚಲವಾದ ನಿರ್ಧಾರವನ್ನು, ಪ್ರತಿಜ್ಞೆಯನ್ನು ಹೊತ್ತು ಈ ಕೆಲಸವನ್ನು ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳ ನಿಲುವೂ ಅಷ್ಟೆ. ಅವರಿಗೆ ಈ ಇಲಾಖೆಯಲ್ಲಿ ಸಾಕಷ್ಟು ಅನುಭವ ಇದೆ, ಅವರಿಗೆ ಗೊತ್ತಿಲ್ಲದೇ ಇರತಕ್ಕ ವಿಚಾರಗಳು ಯಾವುದೂ ಇಲ್ಲ. ಈ ಇಲಾಖೆಯನ್ನು ಸ್ವಾರ್ಥಕ್ಕೆ ಬಳಸಬಾರದು, ಈ ಇಲಾಖೆಯ ಅಧಿಕಾರಿಗಳನ್ನು ತಮ್ಮ ಕೆಲಸಕ್ಕೆ ಮಾತ್ರ ಸೀಮಿತ ಮಾಡಬೇಕೇ ಹೊರತು ಬೇರೆ ಕೆಲಸಕ್ಕೆ ಉಪಯೋಗಿಸಿಕೊಳ್ಳಬಾರದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ, ಅದನ್ನು ನಾನು ಕೂಡ ಕಾಯಾವಾಚಾಮನಸಾ ಆ ಕೆಲಸವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ. ಸ್ವಾಮಿ, ವಾಟಾಳ್ ನಾಗರಾಜ್‌ರವರು ಮತ್ತು ಕಾಗೋಡು ತಿಮ್ಮಪ್ಪನವರು ಹಾಗೂ ಇನ್ನೂ ಕೆಲವರು ಹಾಸನ ಜಿಲ್ಲೆಯವರೇ ೫ ಜನ ಮಂತ್ರಿಗಳಾಗಿ ಈ ಇಲಾಖೆಯ ಕಾರ್ಯನಿರ್ವಹಣೆ ಮಾಡಿದ್ದಾರೆ. ಏನಾದರು ಪಾಪ ಆಗಿದ್ದರೆ, ಆ ಜಿಲ್ಲೆಯವರಿಗೆ ಸೇರಬೇಕೇ ಹೊರತು, ಈ ರಾಜದ ಬೇರೆಯವರಿಗೆ ಯಾರಿಗೂ ಸೇರಬೇಕಾಗಿಲ್ಲ ಎಂದು ದೊಡ್ಡ ಉಪಕಾರವನ್ನೇ ಮಾಡಿದರು. ಹಾಸನದ ವರೆಗೆ ರಸ್ತೆ ಚೆನ್ನಾಗಿದೆ ಅಲ್ಲಿಂದ ಮುಂದಕ್ಕೆ ಚೆನ್ನಾಗಿಲ್ಲವೆಂದು ಮತ್ತೊಂದು ಮಾತನ್ನು ಅವರು ಮಾರ್ಮಿಕವಾಗಿ ಹೇಳಿದರು. ನಾನು ಈ ವಿಚಾರದಲ್ಲಿ ಉತ್ತರ ಹೇಳಬೇಕಾದ್ದು ಅನಿವಾರ್ಯವಾಗಿದೆ. ಆ ಜಿಲ್ಲೆಯವರೇ ಈ ಖಾತೆಯ ಮಂತ್ರಿಗಳಾದರೂ ಸಹ ಆ ಜಿಲ್ಲೆ ಎಷ್ಟು ಪ್ರಗತಿಯಾಗಬೇಕಾಗಿತ್ತೋ, ಅಷ್ಟು ಪ್ರಗತಿಯಾಗಿಲ್ಲ ಎನ್ನುವ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಡುತ್ತೇನೆ. ಕೈಗಾರಿಕಾ ಅಭಿವೃದ್ಧಿಯಲ್ಲಿ ಆಗಲೀ, ಅಥವಾ ಬೇರೆ ಅಭಿವೃದ್ಧಿ ಆಗಲೀ ಆಗಿಲ್ಲ. ಆದರೆ ಹೇಮಾವತಿ ಪ್ರಾಜೆಕ್ಟ್ ಒಂದು ಬಂತು, ಇದರಿಂದ ೪ ತಾಲ್ಲೂಕುಗಳಿಗೆ ನೀರು ಒದಗಿಸತಕ್ಕ ಕೆಲಸ ಆಗಿದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಸಂಘರ್ಷ ಜಾಸ್ತಿಯಾಯಿತು. ಆದ್ದರಿಂದ ಈ ಹಾಸನ ಜಿಲ್ಲೆಯ ರಾಜಕಾರಣ ಇಡೀ ರಾಜ್ಯಕ್ಕೆ ಪ್ರಸಿದ್ಧಿಯಾಯಿತೇ ಹೊರತು, ಯಾವುದೇ ರೀತಿಯ ಅಭಿವೃದ್ಧಿ ಕೆಲಸ ನಾವು ನಿರೀಕ್ಷೆ ಮಾಡಿದಂಥ ಮಟ್ಟದಲ್ಲಿ ಆಗಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸುತ್ತೇನೆ. ಹಾಸನದಲ್ಲಿದ್ದಂಥವರು ನಮ್ಮ ರಾಜ್ಯದ ರಾಜಕಾರಣಲ್ಲೇ ಹೆಚ್ಚು ಸುದ್ದಿಯನ್ನು ಮಾಡುವುದರ ಮೂಲಕ, ಗೊಂದಲವನ್ನು ಎಬ್ಬಿಸುವ ಮೂಲಕ ರಾಜ್ಯದ ೪ ಕೋಟಿ ಜನತೆಯ ಮನಸ್ಸನ್ನು ಎಳೆಯುವುದರ ಮೂಲಕ ಹಾಸನ ಜಿಲ್ಲೆಗೆ ಪ್ರಚಾರ ಸಿಕ್ಕಿತೇ ಹೊರತು, ಬೇರೇನೂ ಆಗಲಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಹಾಸನ ಜಿಲ್ಲೆಯವರು ಕೇವಲ ಮಂತ್ರಿಗಳು ಆಗಿದ್ದು ಅಷ್ಟೇ ಅಲ್ಲ. ವಿರೋಧ ಪಕ್ಷದ ನಾಯಕರೂ ಕೂಡ ಮಾನ್ಯ ಶಿವಪ್ಪನವರು ಮತ್ತು ದೇವೇಗೌಡರು ಆಗಿದ್ದರು. ಅವರುಗಳು ಒಂದಲ್ಲ ಒಂದು ರೀತಿ

ರಾಜಕಾರಣದಲ್ಲಿ ಸುದ್ದಿಯಲ್ಲಿ ಇರುತ್ತಿದ್ದರು ಎಂದು ಮತ್ತೊಮ್ಮೆ ತಿಳಿಯ ಬಯಸುತ್ತೇನೆ. ಒಂದು ವಾಗ್ದಾನವನ್ನು ಈ ಸಮಯದಲ್ಲಿ ಕೊಡುತ್ತೇನೆ. ಶನಿವಾರ ಹೊಳೇನರಸೀಪುರ ಭಾನುವಾರ ಹಾಸನ, ಸೋಮವಾರ ಬೆಂಗಳೂರು ಎನ್ನತಕ್ಕ ಮಾತನ್ನು ಮಾರ್ಮಿಕವಾಗಿ ಏನು ಹೇಳಿದ್ದಾರೆ, ಆ ಕೆಲಸ ನಾನು ಮಾಡುವುದಿಲ್ಲ. ಮತ್ತೆ ಕೆಲವು ಜನ ಸ್ನೇಹಿತರು ಏನು ಹೇಳಿದ್ದಾರೆಂದರೆ, ದಕ್ಷಿಣ ಭಾಗದಲ್ಲಿ ಹೆಚ್ಚು ಕೆಲಸವಾಗುತ್ತದೆ. ಉತ್ತರ ಭಾಗದಲ್ಲಿ ಆಗುವುದಿಲ್ಲ ಎಂದು, ಆ ಒಂದು ಸಂಶಯಕ್ಕೆ ನಮ್ಮ ಮಾನ್ಯ ಸದಸ್ಯರು ಅವಕಾಶವನ್ನು ಇಟ್ಟು ಕೊಳ್ಳಬೇಕಾಗಿಲ್ಲ. ಇಡೀ ರಾಜ್ಯವನ್ನು ಒಂದೇ ವಲಯವನ್ನಾಗಿ ಮಾಡಿ ರಾಜ್ಯದ ಎಲ್ಲಾ ಭಾಗಗಳಿಗೂ ಸಮವಾಗಿ ಅಭಿವೃದ್ಧಿಯನ್ನು ಮಾಡತಕ್ಕಂಥ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಎಂದು ಈ ಸಮಯದಲ್ಲಿ ನನ್ನ ಮಿತ್ರರಿಗೆ ಹೇಳಬಯಸುತ್ತೇನೆ. ಈ ಇಲಾಖೆಯದಕ್ಷತೆ ಹೆಚ್ಚಿಸಬೇಕಾದರೆ ನಿರ್ಧಿಷ್ಟವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಬಹುಶಃ ಈ ಇಲಾಖೆಯಲ್ಲಿ ಆಗತಕ್ಕ ಅನ್ಯಾಯ ದೇಶಕ್ಕೆ ಆಗತಕ್ಕ ಅನಾಹುತ ಮತ್ತೊಂದರಲ್ಲಿ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಅನ್ಯಾಯವನ್ನು ಸರಿಪಡಿಸುವಂತಾದ್ದಕ್ಕೆ ಮೂರು ಪ್ರಮುಖವಾದ ಕಾರ್ಯಗಳನ್ನು ನಾವು ತ್ವರಿತವಾಗಿ ಮಾಡಬೇಕಾಗುತ್ತದೆ. ಒಂದು ಕೆಲಸ ಮಾಡತಕ್ಕಂತಹ, ಗುತಿಗೆದಾರ, ಎರಡನೆಯದು ಅದರ ಮೇಲ್ವಿಚಾರಣೆ ಮಾಡತಕ್ಕಂಥ ಅಧಿಕಾರಿ, ಮತ್ತು ಮೂರನೆಯದು ಕ್ಷೇತ್ರದ ರಾಜಕಾರಣಿ, ಈ ಮೂರರ ಬಗ್ಗೆ ಸದಾ ಕಣ್ಣು ಇಡಬೇಕಾಗುತ್ತದೆ. ಸ್ವಾಮಿ, ನಮ್ಮಲ್ಲಿ ಪ್ರತಿಯೊಂದು, ಯೋಜನೆಗಳನ್ನು ಮಾಡುವಾಗ ಕರಡು ಯೋಜನೆಗಳನ್ನು ತಯಾರು ಮಾಡುವಾಗ, ಮೂಲತಃ ಅಂದಾಜು ತಯಾರು ಮಾಡತಕ್ಕ ಸಮಯದಲ್ಲಿ ನಾವು ಹಲವಾರು ತಪ್ಪುಗಳನ್ನು ಮಾಡುತ್ತಿದ್ದೇವೆ. ಇದರ ಬಗ್ಗೆ ಮೊನ್ನೆ ಮಾನ್ಯ ಚಂದ್ರೇಗೌಡರು ಹೇಳಿದರು. ನಾವು ಎಸ್ಟಿಮೇಟ್ ಮಾಡುವುದರಲ್ಲಿ ದೋಷ ಇದೆ. ನಿಖರವಾದಂಥ ಮುಂದೆ ಬರತಕ್ಕಂಥ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಎಸ್ಟಿಮೇಟ್ ಮಾಡತಕ್ಕಂಥ ಪ್ರವೃತ್ತಿ ನಮ್ಮಲ್ಲಿ ಬರಲಿಲ್ಲ. ಇವೊತ್ತು ಮೂರು ಕೋಟಿ ರೂಪಾಯಿಗೆ ಅಂದಾಜು ಯೋಜನೆ ನೂರು ಕೋಟಿರೂಪಾಯಿ ಆದರೂ ಕೆಲಸ ಮುಗಿಯುವುದಿಲ್ಲ, ಈ ರೀತಿ ಸಹಸ್ರಾರು ಇದೆ. ಇದರಿಂದ, ನಮ್ಮ ದೇಶದ ಬೊಕ್ಕಸವಲ್ಲಿರತಕ್ಕ ಎಲ್ಲ ಹಣವನ್ನು ವಿನಿಯೋಗಿಸಿದರೂ ಕೂಡ ಆದರೀದ ಫಲ ಸಿಕ್ಕುವುದಿಲ್ಲ. ಇದಕ್ಕೆ ಮೊದಲು ಕರಡು ಯೋಜನೆ ತಯಾರು ಮಾಡುವುದರಲ್ಲಿ ನಮ್ಮಲ್ಲಿ ದೋಷ ಇದೆ, ಇದನ್ನು ಸರಿಪಡಿಸತಕ್ಕಂತಾದ್ದಕ್ಕೆ. ನಮ್ಮ ಇಂಜಿನಿಯರ್‌ಗಳಿಗೆ ಸಾಕಷ್ಟು ತರಬೇತಿ ಬೇಕು, ಸಾಕಷ್ಟು ಮುತ್ಸದ್ದಿತನಬೇಕು, ಮುಂಜಾಗ್ರತೆಯ ಕ್ರಮಗಳು ಬೇಕು. ಇವುಗಳನ್ನು ಮಾಡತಕ್ಕಂತಾದ್ದಕ್ಕೆ ಈಗಾಗಲೇ ನಾನು ಮೊದಲೇ ಹೇಳಿದಹಾಗೆ ಮುಖ್ಯ ಇಂಜಿನಿಯರ್‌ಗಳು ಪ್ರತಿಯೊಂದು ವಿಷಯವನ್ನು ಪರಿಶೀಲನೆ ಮಾಡತಕ್ಕಂಥದ್ದರ ಮೂಲಕ ಆ ಯೋಜನೆಗಳು ಮಂಜೂರು ಆಗುವುದಕ್ಕೆ ಮೊದಲು, ಅವರು ಸ್ಥಳ ಪರಿಶೀಲನೆ ಮಾಡಿ ಸ್ವತಃ ಅವರೇ ಅದನ್ನು ನಿಖರವಾಗಿ ಅಧ್ಯಯನ ಮಾಡಿ ಅವುಗಳನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ಅವರಿಗೆ ಕೊಡಲಾಗಿದೆ, ಅದನ್ನು ಅವರು ನಿರ್ವಹಿಸದೇ ಹೋದರೆ, ಅವರಿಗೆ ಅದರ ಹೊಣೆಗಾರಿಕೆ ಕೂಡ ನಾವು ಕೊಡಬೇಂದು ನಮ್ಮ ನಿಯಮದಲ್ಲಿ ಈಗಾಗಲೇ ಅಳವಡಿಸಿಕೊಂಡಿದ್ದೇವೆ, ಇನ್ನು ಎರಡನೆಯದು, ಗುತ್ತಿಗೆದಾರ ಅವನ ದೃಷ್ಟಿ ಏನೆಂದರೆ, ಈ ದೇಶದಲ್ಲಿ ದುಡ್ಡು ಹೇಗಾದರೂ ಮಾಡಿ ಕಬಳಿಸಬೇಕು ಎಂದು ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡುತ್ತಾನೆ. ತನಗೆ ಸಿಕ್ಕಬೇಕಾದಂಥ ಲಾಭವನ್ನು ತೆಗೆದುಕೊಂಡು ಸರಿಯಾದ ರೀತಿಯಲ್ಲಿ ಲಾಭವನ್ನು ಮಾಡಿಕೊಳ್ಳುತ್ತಾನೆ. ಎಲ್ಲಿ ಅವನಿಗೆ ಅನುಕೂಲ ಆಗುತ್ತದೆ, ಅಲ್ಲಿ ಟೆಂಡರ್ ರೇಟಿನಲ್ಲಿ ಕಡಿಮೆ ಹಾಕಿರುತ್ತಾನೆ. ಮತ್ತು ಕೆಲವು ಕಡೆ ಸ್ವಲ್ಪ ಹೆಚ್ಚು ರೇಟು ಕೂಡ ಹಾಕಿರುತ್ತಾನೆ. ಮತ್ತೆ ಎಲ್ಲಿ ಅನುಕೂಲ ಆಗುವುದಿಲ್ಲವೋ ಅಲ್ಲಿ ರೇಟು ಕಡಿಮೆ ಮಾಡುತ್ತಾನೆ. ಈ ರೀತಿಯೆಲ್ಲಾ ಅವರು ಮಾಡುವಂತಾದ್ದು ಇರುತ್ತದೆ. ಒಟ್ಟಿನಲ್ಲಿ ಅವರು ಬಿಲ್ಲು ಹೆಚ್ಚು ತೆಗೆದುಕೊಳ್ಳುವುದರಿಂದ, ಅವನಿಗೆ ಲಕ್ಷಾಂತರ ರೂಪಾಯಿಗಳ ಆದಾಯ ಬರುತ್ತದೆ. ಜೊತೆಗೆ ಒಂದು ಮೋಷ ಇರತಕ್ಕದ್ದನ್ನು ಹೇಳಬೇಕೆಂದರೆ, ನಮ್ಮ ಇಂಜಿನಿಯರುಗಳಿಗೆ ಕರ್‌ಸ್‌ಪಾಂಡೆನ್ಸ್ ಮಾಡತಕ್ಕ ವಿಧಾನ, ತಾಳ್ಮೆ ನಮ್ಮಲ್ಲಿ ಇಲ್ಲ. ನಮ್ಮಲ್ಲಿರತಕ್ಕ ಎಲ್ಲಾ ಫೈಲುಗಳು ಕಂಟ್ರಾಕ್ಟ್‌ದಾರರ ಪರಿಶೀಲನೆಗೆ ಸದಾ ಸಿದ್ಧ ಇರುತ್ತದೆ. ನಮ್ಮ ಆಫೀಸ್ ಸ್ಟಾಫ್ ಕಂಟ್ರಾಕ್ಟರುಗಳಿಗೆ ಒಳ್ಳೆಯ ಹೆಚ್ಚು ಗೌರವವನ್ನು ಕೊಟ್ಟು ಅವರಿಗೆ ಎಲ್ಲಾ ಮಾಹಿತಿಗಳನ್ನು ಒದಗಿಸತಕ್ಕ ಪರಿಪಾಠ ನಮ್ಮಲ್ಲಿ ಇಟ್ಟುಕೊಂಡು ಬಂದಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಇದಿನಬ್ಬ ಅವರು ಒಂದು ಸಣ್ಣ ಕವನವನ್ನು ಹೇಳಿದರು. ಅದು ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಬಹಳವಾಗಿ ಹೊಂದಿಕೊಳ್ಳುತ್ತದೆ. ಇಂಜಿನಿಯರ್‌ಗಳಿಗೆ ರಾಜ್ಯದ ಹಿತಕ್ಕಿಂತ ಮುಖ್ಯವಾಗಿ ಕಂಟ್ರಾಕ್ಟ್‌ದಾರ ರಹಿತ ಬೇಕಾಗುತ್ತದೆ. ಇದು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಸರಿಪಡಿಸುವುದಕ್ಕೋಸ್ಕರ

೯-೪೫ ಎ. ಎಂ.

ನಮ್ಮ ಇಲಾಖೆಯ 'ಮುಖ್ಯಸ್ಥರಿಗೆ ಈ ಜವಾಬ್ದಾರಿಯನ್ನು ವಹಿಸಿದ್ದೇವೆ. ಜೊತೆಗೆ ಇಷ್ಟೆ ಅಲ್ಲ, ನಮ್ಮಲ್ಲಿರತಕ್ಕಂತಹ ಲೋಕೋಪಯೋಗಿ ಇಲಾಖೆಯ ಗುತ್ತಿಗೆ ಸಮೂನೆಯಲ್ಲಿ ಕೂಡ ಸಾಕಷ್ಟು ದೋಷ ಇದೆ. ಇದನ್ನು ಸರಿಪಡಿಸುವುದಕ್ಕೋಸ್ಕರ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಇದನ್ನು ಸರಿಪಡಿಸದೇ ಹೋದರೆ ಗುತ್ತಿಗೆದಾರರ ಮೇಲೆ ಯಾವುದೇ ವಿಧವಾದಂತಹ ಕಡಿವಾಣ ಈ ಸರಕಾರಕ್ಕೆ ಇರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ಗುತ್ತಿಗೆದಾರರಿಗೆ ಸಾಕಷ್ಟು ಕಡಿವಾಣ ಹಾಕಬೇಕೆಂದು ಗುತ್ತಿಗೆ ಫಾರಂನಲ್ಲಿ ಸಾಕಷ್ಟು ಸುಧಾರಣೆಗಳನ್ನು ನಮ್ಮಲ್ಲಿ ಮಾಡಿದ್ದೇವೆ. "Criminal proceedings against Departmental officers and contractors for the lapse" ಪುಟ ೨೭ ಸಬ್‌ಸೆಕ್ಷನ್ (ಸಿ)ನಲ್ಲಿ ಅಳವಡಿಸಿದ್ದೇವೆ. ಒಂದು ವೇಳೆ ಆತ ದೋಷ ಪೂರಿತವಾದ ಕಾಮಗಾರಿಯನ್ನು ಮಾಡಿ ಹಣವನ್ನು ಪಡೆದಿದ್ದರೂ ಕೂಡ ಆತನ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವುದಕ್ಕೆ ಏನು ಕ್ರಮ ಬೇಕೋ ಅದನ್ನು ಈ ಕಾಯಿದೆಯೊಳಗೆ ತರತಕ್ಕಂತಹ ಪ್ರಯತ್ನ ಮಾಡಿದ್ದೇವೆ ಮತ್ತು ಆತ ಯಾವುದೇ ಲ್ಯಾಪ್ಸ್ ಮಾಡಿದ್ದರೂ ಕೂಡ ಆತನನ್ನು ಬ್ಲ್ಯಾಕ್ ಲಿಸ್ಟ್ ಮಾಡಿ ಯಾವುದೇ ವಿಧವಾದ ಕೆಲಸ ಕೊಡಬಾರದೆಂದು ಈ ಫಾರಂನಲ್ಲಿ ಅಳವಡಿಸಿದ್ದೇವೆ. ಇದರಿಂದ ನಮಗೆ ತನ ಮೇಲೆ ಒಂದು ಹತೋಟಿ ತರತಕ್ಕಂಥಾದ್ದಕ್ಕೆ ಅವಕಾಶ ವಾಗುತ್ತಿದೆ. ಇನ್ನು ಟೆಂಡರ್ ಹಾಕತಕ್ಕಂಥಾದ್ದಕ್ಕೆ ಕೂಡ ಹಲವಾರು ನಿಬಂಧನೆಗಳನ್ನು ಜಾರಿಗೆ ತಂದಿದ್ದೇನೆ. ಶೇಕಡಾ ೨೫ ಕ್ಕಿಂತ ಜಾಸ್ತಿಯಾದರೆ ಆತನಿಗೆ ಟೆಂಡರ್ ಕೊಡಬಾರದೆಂದು ಖಂಡಿತವಾದ ನಿಲುವನ್ನು ತೆಗೆದುಕೊಂಡಿದ್ದೇವೆ. ೨೫ ಪರ್ಸೆಂಟ್‌ಗಿಂತ ಕಡಿಮೆಯಾದರೂ ಕೂಡ ಆತನಿಗೆ ಕೆಲಸವನ್ನು ಕೊಡಬಾರದೆಂದು ನಿಯಮವನ್ನು ತಂದಿದ್ದೇವೆ. ಹೀಗಾಗಿ ಆ ಟೆಂಡರ್‌ನಲ್ಲಿ ಗುತ್ತಿಗೆ ವಹಿಸತಕ್ಕಂತಹ ಸಂದರ್ಭದಲ್ಲಿ ಆಗತಕ್ಕಂತಹ ಅವ್ಯವಹಾರಗಳನ್ನು ತಡೆಗಟ್ಟತಕ್ಕಂಥಾದ್ದಕ್ಕೆ ಮತ್ತು ಮುಂದೆ ಬರಬಹುದಾದಂತಹ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸಾಕಷ್ಟು ಮುಂಜಾಗ್ರತಾ ಕ್ರಮವನ್ನು ನಮ್ಮ ಇಲಾಖೆ ತೆಗೆದುಕೊಂಡಿದೆ. ಈ ಇಲಾಖೆಯವರು ಮಾಡತಕ್ಕಂತಹ ಕೆಲಸಕ್ಕೆ ರಿಜಿಸ್ಟ್ರೇಷನ್ ನಲ್ಲಿಯೂ ಕೂಡ ಸಾಕಷ್ಟು ದೋಷ ಇದೆ. ಯಾವುದೇ ಒಬ್ಬ ೫ ಲಕ್ಷ ರೂಪಾಯಿಯ ಕೆಲಸ ಮಾಡಿದ್ದಾನೆಂದರೆ ಆತನಿಗೆ ೧ನೇ ದರ್ಜೆ ಕಂಟ್ರಾಕ್ಟರ್ ಎಂದು ಪರವಾನಗಿ ಕೊಡತಕ್ಕಂತಹ ಪರಿಪಾಠಿ ನಮ್ಮ ಇಲಾಖೆಯಲ್ಲಿ ಇದೆ. ಆದರೆ ಆಂಧ್ರದಲ್ಲಿ ಇದು ಇಲ್ಲ ಅಲ್ಲಿ ಸಾಕಷ್ಟು ಕಟ್ಟುನಿಟ್ಟುಗಳನ್ನು ಹಾಕಿದ್ದಾರೆ. ಅದನ್ನು ನಾನು ತರಿಸಿ ನೋಡಿದ್ದೇನೆ. ಒಂದನೇ ದರ್ಜೆ ಕಂಟ್ರಾಕ್ಟರ್ ಎಂದು ರಿಜಿಸ್ಟ್ರೇಷನ್ ಮಾಡಬೇಕಾದರೆ ಹಲವಾರು ಕಟ್ಟುಪಾಡುಗಳನ್ನು ಹಾಕಿದ್ದಾರೆ ಮತ್ತು ಬಲವಾರು ಕಟ್ಟುಪಾಡುಗಳನ್ನು ಹಾಕಿದ್ದಾರೆ. ಇದನ್ನು ನೋಡಿ ನಾನು ಅಲ್ಲಿ ರಿಜಿಸ್ಟ್ರೇಷನ್ ತೆಗೆದುಕೊಳ್ಳುವುದು ಕಷ್ಟವೆಂದು ತಿಳಿದುಕೊಂಡಿದ್ದೇನೆ. ಇದರಿಂದ ಆಂಧ್ರದಲ್ಲಿರತಕ್ಕಂತಹ ಬಹುತೇಕ ಜನ ರೆಡ್ಡಿಗಳು ಕರ್ನಾಟಕಕ್ಕೆ ಬಂದು ಇಲ್ಲಿ ಒಂದನೇ ದರ್ಜೆ ಕಂಟ್ರಾಕ್ಟರ್ ಎಂದು ಹೇಳತಕ್ಕಂಥಾದ್ದು ಬೇನಾಮಿ ವಿಳಾಸಗಳನ್ನು ಕೊಡತಕ್ಕಂಥಾದ್ದು ಆ ಮೂಲಕ ಇಲ್ಲಿ ಕೆಲಸ ಮಾಡಿ ಎಷ್ಟು ಲಾಭ ಗಳಿಸುವುದಕ್ಕೆ ಸಾಧ್ಯವೋ ಅಷ್ಟು ಕೆಲಸ ಮಾಡಿ, ಲಾಭಗಳಿಸಿಕೊಂಡು ಉಳಿದ ಕೆಲಸವನ್ನು ಹಾಗೇ ಬಿಟ್ಟು ಹೋಗ ತಕ್ಕಂಥಾದ್ದು ಮತ್ತು ಲಕ್ಷಾಂತರ ರೂಪಾಯಿ ಹೆಚ್ಚು ಹಣವನ್ನು ತೆಗೆದುಕೊಂಡು ಹೋಗತಕ್ಕಂತಹ ಪರಿಸ್ಥಿತಿ ಉದ್ಭವವಾಗಿದೆ. ಇದರ ಬಗ್ಗೆ ಅಕೌಂಟೆಂಟ್‌ಜನರಲ್‌ರವರೂ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರೂ ಕೂಡ ಹೇಳಿದ್ದಾರೆ. ಇಂತಹ ಕಂಟ್ರಾಕ್ಟರ್‌ದಾರರಿಂದ ವಸೂಲಾಗ ಬೇಕಾಗಿರತಕ್ಕಂತಹ ಹಣ ಇವತ್ತಿನವರೆಗೆ ಈ ಇಲಾಖೆಯಲ್ಲಿ ದಾಖಲೆಗೆ ಸಿಕ್ಕಿಲ್ಲ. ನೂರಾರು ಬೇನಾಮಿ ಕಂಟ್ರಾಕ್ಟರ್‌ಗಳ ಬೇನಾಮಿ ಕಂಪೆನಿಗಳು ನಮ್ಮಲ್ಲಿವೆ. ಒಂದು ಉದಾಹರಣೆಯನ್ನು ಇಲ್ಲಿ ಹೇಳುವುದು ಸೂಕ್ತವೆಂದು ನಾನು ತಿಳಿದಿದ್ದೇನೆ. ಕೃಷ್ಣ ರೆಡ್ಡಿ ಅಂಡ್ ಕಂಪೆನಿಗೆ ೪೫ ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಆಗಿ ಕೊಟ್ಟಿದ್ದಾರೆ. ಆ ಕಂಪನಿ ಎಲ್ಲಿದೆ, ಅವರ ಅಡ್ರೆಸ್ ಏನೆಂದು ನಮ್ಮ ಇಲಾಖೆಯರಿಗೆ ಗೊತ್ತು ಮಾಡುವುದಕ್ಕೆ ಆಗಿಲ್ಲ. ಅವರಿಂದ ರಿಕವರಿ ಮಾಡುವುದಕ್ಕೆ ಕೂಡ ಆಗಿಲ್ಲ. ಇಂತಹ ಹಣ ಎಷ್ಟು ಎಂಬುದು ಬಹುಶಃ ಇವತ್ತಿನವರೆಗೂ ಕೂಡ ಲೆಕ್ಕ ಸಿಕ್ಕಿಲ್ಲ. ನಮ್ಮಲ್ಲಿ ಇದಕ್ಕೆ ಒಂದು ಕಾರಣ ಇದೆ. ಪ್ರಮುಖವಾದ ನಿಯಮ ಏನು ಎಂದರೆ, ಕರ್ನಾಟಕದಲ್ಲಿ ಆತ ಶಾಶ್ವತವಾದಂತಹ ನೆಲೆ ಇರತಕ್ಕಂತಹವನಾಗಿರಬೇಕು. ಇದರ ಬಗ್ಗೆ ಸರ್ಟಿಫಿಕೇಟ್ ಅನ್ನು ತಹಸಿಲ್ದಾರರು ಇಲ್ಲದೇ ಡಿ. ಸಿ. ಯವರು ಕೊಡಬೇಕು. ಇಲ್ಲಿ ಸ್ಥಳೀಯ ಶಾಸಕರು ಕೊಟ್ಟರೆ ಸಾಕು, ಅವರು ರೆಸಿಡೆನ್‌ಷಿಯಲ್ ಸರ್ಟಿಫಿಕೇಟ್ ಕೊಟ್ಟರೆ ನಮ್ಮವರು ರಿಜಿಸ್ಟರ್ ಮಾಡುತ್ತಾರೆ. ಎಲ್ಲಾ ಕೆಲಸದಲ್ಲೂ ಕೂಡ ಅನುಭವ ಇರಬೇಕು ಎಂಬ ಕ್ಲಾಸ್ ಇದ್ದರೆ ಯಾವುದೋ ಒಂದು ಟ್ರಯಲ್ ಪಿಟ್‌ನ್ ೫ ಲಕ್ಷ ರೂಪಾಯಿಯ ಕೆಲಸ ಮಾಡಿದ್ದಾರೆಂದು ಸರ್ಟಿಫಿಕೇಟ್

ಕೊಟ್ಟರೆ ಸಾಕು, ನಮ್ಮಲ್ಲಿ ರಿಜಿಸ್ಟರ್ ಮಾಡತಕ್ಕಂತಹ ಪ್ರವೃತ್ತಿ ಇದೆ. ಈ ರೀತಿ ರಿಜಿಸ್ಟ್ರೇಷನ್ ಮಾಡಿಕೊಳ್ಳತಕ್ಕದ್ದರಲ್ಲಿ ನಾವು ಕಟ್ಟುನಿಟ್ಟಾದ ಷರತ್ತುಗಳನ್ನು ಅಳವಡಿಸದಿದ್ದರೆ ಇಂಥ ಗೊಂದಲವನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಈಗಿರತಕ್ಕ ವ್ಯವಸ್ಥೆಯಲ್ಲಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವಾಗುವುದಕ್ಕೆ ಅವಕಾಶವಿದೆ. ಇದನ್ನು ಕೂಡ ನಾವು ಸರಿಪಡಿಸುವ ಚಿಂತನೆಯಲ್ಲಿ ನಾವಿದ್ದೇವೆ. ಮತ್ತು ಇದನ್ನು ನಾವು ಆದಷ್ಟು ಬೇಗ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಭೂಸ್ವಾಧೀನ ಮಾಡಿಕೊಳ್ಳುವ ವಿಚಾರದಲ್ಲಿ ಆಗುತ್ತಿರುವ ತೊಂದರೆಗಳ ನಿವಾರಣೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪ್ರಾಜೆಕ್ಟ್‌ಗಳನ್ನು ಕಟ್ಟಿ ಸುಮಾರು ೨೫ ವರ್ಷಗಳಾಗಿವೆ ಆದರೆ ಅಲ್ಲಿ ಜಮೀನನ್ನು ಕಳೆದುಕೊಂಡವರಿಗೆ ಇವತ್ತಿನವರೆಗೂ ಪರಿಹಾರವನ್ನು ಕೊಟ್ಟಿಲ್ಲ. ಬೇರೆ ಕಡೆ ಭೂಮಿಯನ್ನೂ ಅವರಿಗೆ ಕೊಟ್ಟಿಲ್ಲ. ಇಂಥ ಪ್ರಕರಣಗಳು ಸಾವಿರಾರು ಇವೆ. ಇದರ ಜೊತೆಗೆ ನಮ್ಮಲ್ಲಿ ಎಷ್ಟು ದೊಡ್ಡ ದೋಷವಿದೆ ಎಂದರೆ, ಉದಾಹರಣೆಗೆ ಹೇಳುವುದಾದರೆ ಪ್ರಾಜೆಕ್ಟನ್ನು ಕಟ್ಟತಕ್ಕದ್ದು ಗೋರೂರಿನಲ್ಲಾದರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳತಕ್ಕದ್ದು ತುಮಕೂರಿನಲ್ಲಿ. ತುಮಕೂರಿನಲ್ಲಿ ಕೆಲಸವನ್ನು ಪ್ರಾರಂಭ ಮಾಡಬೇಕಾದರೆ ಮುಂದೆ ೧೦–೧೫ ವರ್ಷಗಳು ಬೇಕಾಗುತ್ತದೆ. ಅಲ್ಲಿಯವರೆಗೂ ಇವರಿಗೆ ಪರಿಹಾರವನ್ನು ಕೊಟ್ಟಿರುವುದಿಲ್ಲ. ಬೇರೆಕಡೆ ಭೂಮಿಯನ್ನೂ ಕೊಟ್ಟಿರುವುದಿಲ್ಲ. ಇದರಿಂದಾಗಿ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳತಕ್ಕ ಕೆಲಸ ಬಹಳ ಕಷ್ಟವಾಗಿದೆ. ನಮ್ಮಲ್ಲಿ ಅನುಸರಿಸುತ್ತಿರುವ ಈ ನೀತಿಯಿಂದಾಗಿ ನಮ್ಮ ನೀರಾವರಿ ಯೋಜನೆಗಳ ಪ್ರಗತಿಗೆ ಒಂದು ದೊಡ್ಡ ಮಾರಕವಾಗಿದೆ. ಈ ದೋಷವನ್ನು ನಾವು ಸರಿಪಡಿಸುವುದು ಅತ್ಯಂತ ಅಗತ್ಯ ಹಾಗೂ ಅನಿವಾರ್ಯವಾಗಿದೆ. ಆದ್ದರಿಂದ ಈ ದಿಸೆಯಲ್ಲಿ ನಾವು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಕಾಂಪ್ರಮೈಸಿಂಗ್ ಅಕ್ವಿಜಿಷನ್ ಎಂದು ಮಹಾರಾಷ್ಟ್ರದಲ್ಲಿ ಇದೆ. ಅದೇ ನೀತಿಯನ್ನು ನಮ್ಮಲ್ಲೂ ಅನುಸರಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆ ನೀತಿಯನ್ನು ನಾವು ಇಲ್ಲೂ ಕೂಡ ಅಳವಡಿಸಿಕೊಂಡಿದ್ದೇ ಆದರೆ ಖಂಡಿತವಾಗಿಯೂ ಈಗಿರತಕ್ಕ ತೊಂದರೆ ಏನಿದೆ ಇದನ್ನು ನಿವಾರಣೆ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಪುನರ್ ವಸತಿಯ ಬಗ್ಗೆ ಹೇಳುವುದಾದರೆ, ಈ ಕೆಲಸ ಇನ್ನೂ ಸರಿಯಾಗಿ ಆಗಿಲ್ಲ. ಜಮೀನನ್ನು ಕಳೆದುಕೊಂಡಿರತಕ್ಕ ಭಾಗದ ಜನರು ಯಾರಿದ್ದಾರೆ, ಅವರನ್ನು ನಾವು ತೆಗೆದುಕೊಂಡು ಹೋಗಿ ಎಲ್ಲೋ ಒಂದುಕಡೆ ಹಾಕಿದ್ದೇವೆ. ಆದರೆ ಅಲ್ಲಿ ಅವರಿಗೆ ಅವಶ್ಯಕವಾದ ಸ್ಕೂಲುಗಳ ವ್ಯವಸ್ಥೆಯನ್ನಾಗಲಿ, ಮನೆಗಳ ವ್ಯವಸ್ಥೆಯನ್ನಾಗಲಿ, ಕುಡಿಯುವ ನೀರಿನ ವ್ಯವಸ್ಥೆಯನ್ನಾಗಲಿ, ಭೂಮಿ ಕಳೆದುಕೊಂಡಿರುವುದಕ್ಕೆ ಪರಿಹಾರವನ್ನಾಗಲಿ ಇದುವರೆಗೂ ಕೊಟ್ಟಿಲ್ಲ. ಈಗ ನಾವು ಅಧಿಕಾರಕ್ಕೆ ಬಂದಮೇಲೆ ಅವರ ಪರಿಸ್ಥಿತಿಯನ್ನು ವಿಶೇಷವಾಗಿ ಗಮನಕ್ಕೆ ತೆಗೆದುಕೊಂಡಿದ್ದೇವೆ. ರೆವಿನ್ಯೂ ಇಲಾಖೆಗೆ ನಿರ್ದೇಶನ ನೀಡಿ ಅಕ್ವಿಸಿಷನ್ ಕೆಲಸವನ್ನು ಅವರೇ ವಹಿಸಿಕೊಂಡು ಭೂಮಿಯನ್ನು ಕಳೆದುಕೊಂಡವರಿಗೆ ಎಲ್ಲ ವ್ಯವಸ್ಥೆಯನ್ನೂ ಮಾಡಿ ಕೊಡುವಂತಹ ಚಿಂತನೆಯನ್ನು ಮಾಡುತ್ತಿದ್ದೇವೆ. ಆದಷ್ಟು ಬೇಗ ಈ ಕೆಲಸವನ್ನು ನಾವು ಮಾಡಲಿಕ್ಕೆ ಎಲ್ಲ ರೀತಿಯ ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಮ್ಮಲ್ಲಿರತಕ್ಕ ಇನ್ನೊಂದು ಮಹಾ ದೊಡ್ಡ ದೋಷ ಎಂದರೆ, ಕಳೆದ ೨೦ ವರ್ಷಗಳಿಂದ ಸುಮಾರು ೨೮೦ ಪ್ರಕರಣಗಳಲ್ಲಿ ಕ್ಲೈಂಸ್ ಸೆಟಲ್ ಆಗಿಲ್ಲ. ಒಬ್ಬೊಬ್ಬರಿಗೆ ೫೦ ಲಕ್ಷ, ೬೦ ಲಕ್ಷ, ೨ ಕೋಟಿ, ೩ ಕೋಟಿ ಕ್ಲೈಂಸ್ ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ. ೨೫ ವರ್ಷಗಳ ಹಿಂದೆ ಆಗಿರುವ ಕೆಲಸಗಳಿಗೆ ಇವತ್ತಿನವರೆಗೂ ಕ್ಲೈಂಸ್ ತೀರ್ಮಾನ ಆಗಿಲ್ಲ. ಇದು ಒಂದು ದೊಡ್ಡ ದೋಷವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕ್ಲೈಂಸ್ ಸೆಟಲ್‌ಮೆಂಟ್ ಸಮಿತಿ ಎಂದು ಮಾಡಿದ್ದೇವೆ. ಈ ಬಗ್ಗೆ ನಾವು ನಮ್ಮ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ್ದೇವೆ. ೨೮೦ ಪ್ರಕರಣಗಳಲ್ಲಿ ಆಗಿರುವ ಘಟನೆಗಳು ಏನಿವೆ, ಅವುಗಳಲ್ಲಿ ಹೆಚ್ಚುವರಿ ಆಗಿರುವುದಕ್ಕೆ ಕಾರಣವೇನು? ಅದನ್ನು ಕೊಡಬೇಕೇ? ಬೇಡವೇ? ಎಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವ ಸಲುವಾಗಿ ಏನೊಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಅದರ ತೀರ್ಮಾನವೇ ಅಂತಿಮ ತೀರ್ಮಾನ. ಇನ್ನು ೩ ತಿಂಗಳೊಳಗೆ ಅದು ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಒಂದು ವರದಿಯನ್ನು ಕೊಡಬೇಕೆಂದು ಹೇಳಿದ್ದೇವೆ. ಏಕೆಂದರೆ, ಕೂಲಂಕಷ ಪರಿಶೀಲನೆ ಮಾಡದೆ ಹೋದರೆ ಇಲಾಖೆಗೆ ಹೆಚ್ಚಿನ ಹೊರೆ ಬೀಳುತ್ತದೆಂಬ ಉದ್ದೇಶದಿಂದ

ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ವಿಚಾರವನ್ನು ಆದಷ್ಟು ಬೇಗ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ಬಹಳ ಪ್ರಾಮುಖ್ಯವಾದ ಕೆಲಸವನ್ನು ನಾವು ಏನು ಮಾಡಿದ್ದೇವೆಂದರೆ, ಹಿಂದೆ ಟೆಂಡರ್ ಅಗ್ರಿಮೆಂಟ್‌ನಲ್ಲಿ ಆರ್ಬಿಟ್ರೇಷನ್ ಕ್ಲಾಸ್ ಎಂದು ಇತ್ತು. ಯಾವುದೋ ಒಂದು ನೆಪವಾಗಿ ನನಗೆ ಇಷ್ಟು ನಷ್ಟವಾಗಿದೆ, ನನಗೆ ಸರ್ಕಾರದಿಂದ ಇಷ್ಟು ಹಣವನ್ನು ಕೊಡಬೇಕೆಂದು ಕಂಟ್ರಾಕ್ಟರ್ ಕೇಳಿಕೊಂಡರೆ, ಅದಕ್ಕೆ ಸರಿಯಾಗಿ ಅಂದರೆ ಅವನಿಗೆ ಅನುಕೂಲವಾದ ರೀತಿಯಲ್ಲಿ ಫೈಲುಗಳಲ್ಲಿ ಬರೆಯುತಕ್ಕ ಒಂದು ಪ್ರವೃತ್ತಿ ನಮ್ಮ ಇಲಾಖೆಯ ಅಧಿಕಾರಿಗಳಲ್ಲಿತ್ತು. ಹೌದು ಅವರಿಗೆ ನಷ್ಟವಾಗಿದೆ ಅಥವಾ ಸಾಧಾರಣವಾಗಿ ಅವರಿಗೆ ಇಷ್ಟು ದುಡ್ಡನ್ನು ಕೊಡಬೇಕಾಗುತ್ತದೆನ್ನುವುದು ನಡೆಯುತ್ತಿತ್ತು. ಇದಕ್ಕೆ ಅಧಿಕಾರಿಗಳ ಪ್ರವೃತ್ತಿಯೋ ಅಥವಾ ರಾಜಕೀಯ ಪ್ರವೃತ್ತಿಯೋ ಎನ್ನುವ ಬಗ್ಗೆ ಅವಲಂಬಿಸಿ ಮಾತನಾಡುವುದಕ್ಕೆ ಹೋಗದೆ ನಮ್ಮ ಬೊಕ್ಕಸಕ್ಕೆ ಆಗುತ್ತಿರುವ ಸಾವಿರಾರು ರೂಪಾಯಿಗಳ ನಷ್ಟ ತಡೆಗಟ್ಟಬೇಕಾಗಿದೆ. ವರ್ಲ್ಡ್ ಬ್ಯಾಂಕ್‌ನವರು ಸಹ ಈ ಬಗ್ಗೆ ಕಟುವಾಗಿ ಹೇಳಿದ್ದಾರೆ, ಈ ಆರ್ಬಿಟ್ರೇಷನ್ ಕ್ಲಾಸ್‌ನ್ನು ತೆಗೆದರೆ ಮಾತ್ರ ನಿಮ್ಮ ಯೋಜನೆಗಳಿಗೆ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇಲ್ಲದಿದ್ದರೆ ಕೊಡಲಿಕ್ಕೆ ಆಗುವುದಿಲ್ಲ. ನಿಮ್ಮ ಈ ಕಾರ್ಯವಿಧಾನದಿಂದ ನಿಮ್ಮ ಯೋಜನೆಗಳು ಸಕಾಲದಲ್ಲಿ ಪೂರ್ತಿಯಾಗುವುದಿಲ್ಲ. ಇಂತಹ ದೊಡ್ಡ ಯೋಜನೆಗಳಿಗೆ ಹಣವನ್ನು ಕೊಡುವುದಕ್ಕೆ ನಾವು ತಯಾರಾಗಿಲ್ಲವೆಂದು ಅವರು ಹೇಳಿದ್ದಾರೆ. ಆದರ ಮೇಲೆ ನಾವು ಪರಿಶೀಲನೆ ಮಾಡಿ ಅವರು ಹಾಕಿರುವ ಷರತ್ತುಗಳೂ ಸೂಕ್ತವಾಗಿದೆ ಎಂದು ಕಂಡುಬಂದುದರಿಂದ ಆ ದಿಕ್ಕಿನಲ್ಲಿ ನಮ್ಮ ಗುತ್ತಿಗೆ ಕರಾರಿನಲ್ಲಿ ಆರ್ಬಿಟ್ರೇಷನ್ ಕ್ಲಾಸ್ ತೆಗೆದುಹಾಕಿದ್ದೇವೆ. ಹೀಗೆ ಕೊಟ್ಟಂಥ ಗುತ್ತಿಗೆಯನ್ನು ಟೆಂಡರ್ ಅಗ್ರಿಮೆಂಟ್ ಪ್ರಕಾರ ನಿಗಧಿಯಾದ ಟೈಮ್‌ನಲ್ಲಿ ಮುಗಿಸದಿದ್ದರೆ ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸತಕ್ಕಂಥದ್ದನ್ನು ಕಟ್ಟುನಿಟ್ಟಾಗಿ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

(ಶ್ರೀ ಎಸ್.ಎಚ್. ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಈ ರಾಜ್ಯದಲ್ಲಿ ರಸ್ತೆಗಳ ದುರಸ್ತಿಗಳ ಕಾರ್ಯ ಬಹಳ ಹದಗೆಟ್ಟಿದೆ ಎಂದು ಮಾನ್ಯ ಸದಸ್ಯರು ಹೇಳಿರುವುದು ಸೂಕ್ತವಾಗಿದೆ. ಕಳೆದ ೪-೬ ವರ್ಷಗಳಿಂದ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ ಆಗಿಲ್ಲ. ರಾಜ್ಯದ ಸಂಪನ್ಮೂಲಗಳನ್ನು ದೊರಕಿಸುವುದು ಕಷ್ಟವಾದ ಹಿನ್ನೆಲೆಯಲ್ಲಿ ಇಂದು ಎಲ್ಲ ರಸ್ತೆಗಳು ಹಾಳಾಗಿವೆ. ಇದರಿಂದಾಗಿ ನಾವು ರಸ್ತೆಗಳ ಮೇಲೆ ಹೂಡಿದ ಬಂಡವಾಳವೆಲ್ಲಾ ನಷ್ಟವಾಗತಕ್ಕಂಥ ಪರಿಸ್ಥಿತಿಯನ್ನು ನಾವು ತಲುಪಿದ್ದೇವೆ. ಇದನ್ನು ಮನಗಂಡು ಆ ರಸ್ತೆಗಳ ರಿಪೇರಿಗೆ ನಮ್ಮ ಆಯವ್ಯಯದಲ್ಲಿ ಹಣ ಇಲ್ಲದಿದ್ದರೂ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ಸುಮಾರು ೪೫ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ತೊಡಗಿಸುತ್ತಿದ್ದೇವೆ, ಅದರಲ್ಲಿ ೨೦ ಕೋಟಿ ರೂಪಾಯಿಗಳು ಎ.ಪಿ.ಎಂ.ಸಿ. ನಿಂದ ಬರತಕ್ಕಂಥ ಹಣ ಮತ್ತು ಖರ್ಚು ಆಗದಿರುವ ಹಣವನ್ನು ಯಾವ ಉದ್ದೇಶದಿಂದ ಸಂಗ್ರಹ ಮಾಡಿದ್ದೇವೆ, ಅದೇ ಉದ್ದೇಶಕ್ಕಾಗಿ ಖರ್ಚು ಮಾಡತಕ್ಕಂಥ ಹಿನ್ನೆಲೆಯಲ್ಲಿ ಈ ೨೦ ಕೋಟಿ ರೂಪಾಯಿಗಳನ್ನು ಇದಕ್ಕೆ ವಿನಿಯೋಗಿಸುವುದು ಮತ್ತೆ ೨೫ ಕೋಟಿ ರೂಪಾಯಿಗಳನ್ನು ನಮ್ಮ ವಿತ್ತೀಯ ಮಂತ್ರಿಗಳು ಈ ಸಲ ಬಂದಿರುವ ಹೆಚ್ಚುವರಿ ಸಂಪನ್ಮೂಲದಲ್ಲಿ ಕೊಡಲಿಕ್ಕೆ ಒಪ್ಪಿದ್ದಾರೆ. ಆದ್ದರಿಂದ ರಸ್ತೆಗಳ ರಿಪೇರಿ ಕಾರ್ಯವನ್ನು ವಿಶೇಷವಾಗಿ ತೆಗೆದುಕೊಂಡು ಮಾಡಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಸರ್ಕಾರದ ನಿಲುವನ್ನೂ ಕೂಡ ತಮಗೆ ಹೇಳಿದ್ದೇನೆ. ಇದರ ಜೊತೆಗೆ ತಾವು ತಿಳಿದಿರುವಂತೆ ಹೈದರಾಬಾದ್ ಕರ್ನಾಟಕ ಏರಿಯಾದ ರಸ್ತೆಗಳು ಬಹಳಷ್ಟು ಮಟ್ಟಿಗೆ ಹದಗೆಟ್ಟಿವೆ. ಬಹುಶಃ ಒಂದು ತುಂತುರು ಮಳೆಯಾದರೂ ಕೂಡ ಮನುಷ್ಯರಾಗಲಿ, ದನಕರುಗಳಾಗಲಿ ತಿರುಗಾಡಲು ಸಾಧ್ಯವಾಗುವುದಿಲ್ಲ. ಹೈದರಾಬಾದ್ ಡೆವೆಲಪ್‌ಮೆಂಟ್ ಏರಿಯಾದಲ್ಲಿ ಕೊಟ್ಟಿರತಕ್ಕಂಥ ೪೪ ಕೋಟಿ ರೂಪಾಯಿಗಳಲ್ಲಿ ೯ ಕೋಟಿ ರೂಪಾಯಿಗಳನ್ನು ರಸ್ತೆಗೆ ವಿನಿಯೋಗಿಸಲು ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮೇಲಾಗಿ ಮತ್ತೊಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಗಡಿ ಪ್ರದೇಶ ಅಭಿವೃದ್ಧಿ ಯೋಜನೆಗೆ ೫ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರ ಘೋಷಿಸಿದೆ. ಇದರಲ್ಲಿ ಎರಡು ಕೋಟಿ ರೂಪಾಯಿ ಹಣವನ್ನು ರಸ್ತೆಗಳಿಗೋಸ್ಕರ ಕೊಟ್ಟು ದುರಸ್ತಿ ಕಾರ್ಯವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಜೊತೆಗೆ ನಮ್ಮ ವಿತ್ತೀಯ ಮಂತ್ರಿಗಳು ಇನ್ನೂ ೫ ಕೋಟಿ ರೂಪಾಯಿಗಳನ್ನು ಕೊಡಲು ಅವಕಾಶವಿದೆ ಎಂಬ

ಸೂಚನೆಯನ್ನು ಕೊಟ್ಟಿದ್ದಾರೆ. ಆ ರೀತಿ ಕೊಟ್ಟ ಹಣವನ್ನು ಬಾಕಿ ಇರತಕ್ಕಂಥ ರಸ್ತೆಗಳ ರಿಪೇರಿ ಮಾಡಲಿಕ್ಕೆ ಉಪಯೋಗಿಸಿಕೊಳ್ಳಲಾಗುತ್ತದೆಂದು ಹೇಳುತ್ತೇನೆ. ಮತ್ತೆ ಈ ಸಂದರ್ಭದಲ್ಲಿ ಆ ಮಾತನ್ನು ಹೇಳದೆ ವಿಧಿಯಿಲ್ಲ, ನಮ್ಮ ಸರ್ಕಾರದವರು ಇತ್ತೀಚೆಗೆ ಅಧಿಕಾರಕ್ಕೆ ಬಂದಮೇಲೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ನನಗೆ ಬಹಳ ಸಂಶಯವಿತ್ತು. ಈ ಇಲಾಖೆ ಯಿಂದ ಯಾವ ಒಂದು ಕೆಲಸವನ್ನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಇರತಕ್ಕಂಥ ಹಳೆಯ ಸಾಲ ತೀರಿಸುವುದಕ್ಕೆ ಸಾಧ್ಯವಾಗುವುದಿಲ್ಲ, ನಾವು ಅಧಿಕಾರವನ್ನು ವಹಿಸಿಕೊಂಡಾಗ ಸುಮಾರು ೯೦ ಕೋಟಿ ರೂಪಾಯಿಗಳಷ್ಟು ಹಳೆ ಬಿಲ್‌ಗಳನ್ನು ಕೊಡಬೇಕಾದಂಥ ಬಾಕಿ ಇತ್ತು. ಆ ಹಳೆಯ ಬಿಲ್‌ಗಳನ್ನು ಕೊಡತಕ್ಕಂಥ ಸ್ಥಿತಿಯಲ್ಲಿಲ್ಲವೆನ್ನುವ ಭಯ ಇತ್ತು. ಅಸ್ಪಷ್ಟವಾದಂಥ ವಾತಾವರಣದಲ್ಲಿ ನಮ್ಮ ಇಲಾಖೆ ಮುಂದುವರೆಯುತ್ತಿತ್ತು. ಆದರೆ ಇವೊತ್ತು ನಮ್ಮ ಸೌಭಾಗ್ಯವೆಂದು ಹೇಳಬಹುದು, ನಮ್ಮ ವಿತ್ತೀಯ ಮಂತ್ರಿಗಳ ವಿಚಕ್ಷಣೆಯಿಂದ ರಾಜ್ಯದ ಸಂಪನ್ಮೂಲಗಳನ್ನು ಕ್ರೂಢೀಕರಿಸಿದ್ದಾರೆ. ಇವತ್ತು ನಮಗೆ ಹೆಚ್ಚು ಹಣವನ್ನು ಕೊಡಬಲ್ಲೆ ಎನ್ನುವ ಮಾತನ್ನು ಹೇಳಿದ್ದಾರೆ. ಜೊತೆಗೆ ನಮ್ಮ ಇಲಾಖೆಯಲ್ಲಿರತಕ್ಕಂಥ ಎಲ್ಲ ಪೆಂಡಿಂಗ್ ಬಿಲ್‌ಗಳನ್ನು ಈಗಾಗಲೇ ಕ್ಲೀಯರ್ ಮಾಡಿದ್ದಾರೆ. ೯೦ ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್‌ಗಳನ್ನು ಇಲಾಖಾ ವತಿಯಿಂದ ಕ್ಲೀಯರ್ ಮಾಡಲಿಕ್ಕೆ ಅನುಕೂಲ ಮಾಡಿರುವುದರಿಂದ ಅವರಿಗೆ ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಸಾಲದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಕೆ.ಆರ್. ಪೇಟೆಯಲ್ಲಿ ಬಿಲ್ ಪಾವತಿ ಮಾಡಲಿಲ್ಲವೆಂದು ಈ ತಿಂಗಳಲ್ಲಿ ಧರಣಿ ನಡೆದಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ನಾನು ಹೇಳಿದ್ದು ಹಳೆಯ ಬಿಲ್ಲಿಗೆ ಸಂಬಂಧಪಟ್ಟಂತೆ ಹೊಸ ಬಿಲ್ಲಿಗಾದರೆ ಅದನ್ನೂ ಕೊಡುತ್ತೇವೆ. ಧರಣಿ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ನಮ್ಮನ್ನು ಕೇಳಿದ್ದರೆ ನಾವು ಕೊಡುತ್ತಿದ್ದೆವು. ಇವತ್ತು ತೀರಾ ಅಸಹಾಯಕ ಪರಿಸ್ಥಿತಿಯಲ್ಲೇನು ಇಲ್ಲ. ನಮ್ಮ ಜನತೆಯ ಆಸೆ ಆಶೋತ್ತರಗಳನ್ನು ಸ್ವಲ್ಪ ಮಟ್ಟಿಗಾದರೂ ಸ್ಪಂದಿಸುವ ಮಟ್ಟದಲ್ಲಿದ್ದೇವೆ, ಅಸಹಾಯಕತೆಯ ಮಟ್ಟದಲ್ಲಿ ನಾವಿಲ್ಲ. ಕೆ.ಆರ್. ಪೇಟೆಯ ಗುತ್ತಿಗೆದಾರರು ತಮ್ಮ ಮೂಲಕ ಲೆಟರ್ ಕಳುಹಿಸಿದ್ದರೂ ಸಾಕು; ನಾವು ಅವರಿಗೆ ಕೊಡಬೇಕಾದ ಹಣವನ್ನು ನಾವು ಕೊಡುತ್ತೇವೆ ಎಂಬ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ.

ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ ವಿಶ್ವ ಬ್ಯಾಂಕಿನವರಿಗೆ ಇದ್ದಂತಹ ಎಲ್ಲಾ ಸಂಶಯಗಳನ್ನು ಹೊರದೂಡಿದ ಮೇಲೆ ಇದು ಉತ್ತಮವಾದ ಯೋಜನೆ. ಇದಕ್ಕೆ ಹಣಕಾಸನ್ನು ಒದಗಿಸಿಕೊಡಬೇಕೆಂಬ ತೀರ್ಮಾನವನ್ನು ಅವರು ತೆಗೆದುಕೊಂಡು ಈ ಸಾರಿ ೩೨೫ ಮಿಲಿಯನ್ ಡಾಲರ್ ಸಾಲವನ್ನು ಕೊಟ್ಟಿದ್ದಾರೆ. ಬಹುಶಃ ಇದರ ಮೊತ್ತ ೫೨೬ ಕೋಟಿ ರೂಪಾಯಿ ಆಗುತ್ತದೆ. ಈ ಕೆಲಸವನ್ನು ನಾವು ೧೯೯೭ರವರೆಗೆ ಮಾಡಬೇಕಾಗುತ್ತದೆ. ನಮ್ಮ ಆಯವ್ಯಯದಲ್ಲಿ ೮೦ ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಇಟ್ಟಿದ್ದೇವೆ. ಇನ್ನೂ ಹತ್ತಿಪ್ಪತ್ತು ಕೋಟಿ ರೂಪಾಯಿ ಗಳನ್ನು ಕೊಡುವುದಕ್ಕೆ ನಮ್ಮ ವಿತ್ತ ಮಂತ್ರಿಗಳು ಸೂಚನೆ ಕೊಟ್ಟಿದ್ದೇನೆ ಅದಕ್ಕೆ ಹಣದ ಕೊರತೆ ಇಲ್ಲ. ಈಗಾಗಲೇ ೬ ಟೆಂಡರ್‌ಗಳನ್ನು ಕರೆದಿದ್ದೇವೆ. ವರ್ಲ್ಡ್ ಬ್ಯಾಂಕಿನವರು ಈಗಾಗಲೇ ಕ್ಲಿಯರ್ ಮಾಡಿದ್ದಾರೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಿಂದ ಆ ಯೋಜನೆಯ ಕೆಲಸವನ್ನು ಮಾಡುವುದಕ್ಕೆ ಎಲ್ಲಾ ರೀತಿಯ ತ್ವರಿತವಾದ ಕ್ರಮಗಳನ್ನು ತೆಗೆದುಕೊಂಡು, ಅದನ್ನು ಫುಲ್ ಸ್ವಿಂಗ್‌ನಲ್ಲಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ ಮುಗಿಸಿದ್ದೇವೆ. ನಮ್ಮ ನಿಗದಿತ ವೇಳೆಯಲ್ಲಿ ಆ ಕೆಲಸವನ್ನು ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಇರತಕ್ಕ ಹಲವಾರು ಕೊರತೆಗಳು, ಅದು ಭೂಸ್ವಾಧೀನ ಆಗಬಹುದು, ಪುನರ್‌ವಸತಿ ಕಾರ್ಯಕ್ರಮ ಆಗಬಹುದು, ಪ್ರೀ ರಿಕ್ವಿಸಿಷನ್ ಟೆಂಡರ್ ಮಾಡುವುದು ಆಗಬಹುದು ಹೀಗೆ ಎಲ್ಲಾ ಕೊರತೆಗಳನ್ನು ನಿವಾರಣೆ ಮಾಡಿದ್ದೇವೆಂಬ ಸಮಾಧಾನದ ಮಾತನ್ನು ಹೇಳುತ್ತೇನೆ. ಆದಕ್ಕೆ ಮಾನ್ಯ ಸದಸ್ಯರಾಗಲಿ, ರಾಜ್ಯದ ಜನರಾಗಲಿ ಗಾಬರಿ ಮಾಡಿಕೊಳ್ಳಬೇಕಾಗಿಲ್ಲ. ಆ ಕೆಲಸವನ್ನು ಪೂರ್ತಿ ಮಾಡುವುದರ ಜೊತೆಗೆ ನಮ್ಮ ರಾಜ್ಯಕ್ಕೆ ಬರಬೇಕಾದ ನೀರಿನ ಪಾಲನ್ನು ಉಪಯೋಗಿಸಿಕೊಳ್ಳುವುದಕ್ಕೆ ನಾವು ಸಮರ ಸಿದ್ಧತೆಯಿಂದ ಕೆಲಸ ಮಾಡುತ್ತಿದ್ದೇವೆ. ಕಾವೇರಿ ಬೇಸಿನ್ ಯೋಜನೆಗಳಿಗೂ ಮತ್ತು ಆ ಭಾಗದ ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ೧೫೪೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇಲ್ಲಿಯವರೆಗೆ ೭೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ, ಈ ಸಾರಿ ಆಯವ್ಯಯದಲ್ಲಿ ೧೧೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆ ಯೋಜನೆಯನ್ನು ಪೂರ್ಣಗೊಳಿಸಲಿಕ್ಕೆ ನಮಗೆ

ಇನ್ನೂ ೭೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಜೊತೆಗೆ ಈ ಎಲ್ಲಾ ಕೆಲಸಗಳನ್ನು ಮಾಡಿ ಕಟ್ಟೆಗಳನ್ನು ಸಹ ಕಟ್ಟಿ ನೀರನ್ನು ನಿಲ್ಲಿಸಿದ್ದೇವೆ. ಡಿಸ್ಟ್ರಿಬ್ಯೂಷನ್ ವರ್ಕ್ಸ್ ಮಾತ್ರ ಬಾಕಿ ಇದೆ. ಆ ಕೆಲಸಕ್ಕೆ ಹಣ ಒದಗಿಸುವುದರ ಮೂಲಕ ಸರ್ಕಾರ ಸಿದ್ಧತೆಯಲ್ಲಿ ಕೆಲಸ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದು ಕೊಂಡಿದ್ದೇವೆ. ಆ ನೀರು ಬೇರೆಯವರಿಗೆ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ಅದರಲ್ಲಿ ನಾವು ಕರ್ತವ್ಯ ಲೋಪ ಮಾಡುವುದಿಲ್ಲ. ಈ ಭಾಗದ ಜನತೆಗೆ ಯಾವ ಕಾರಣದಿಂದಲೂ ನಮ್ಮ ಸರ್ಕಾರದ ಪತಿಯಿಂದ ದ್ರೋಹವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ಹುಬ್ಬಳ್ಳಿ ಮತ್ತು ಅಂಕೋಲ ರಸ್ತೆ ಮಾಡಬೇಕೆಂದು ಬಹಳ ದಿನಗಳಿಂದ ಬೇಡಿಕೆ ಇದೆ. ಆ ರಸ್ತೆಯನ್ನು ಒಂದು ಮಾಡಬೇಕಾದರೆ ೪೨ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಮ್ಮ ರಾಜ್ಯದ ಸಂಪನ್ಮೂಲ ಅದರ ಇತಿಮಿತಿ ಇದ್ದಂತಹ ಈ ಸಂದರ್ಭದಲ್ಲಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಪಡೆದಿದ್ದೇವೆ. ಸಾಲ ಮಂಜೂರಾಗಿದೆ, ಅದರ ಷರತ್ತಿನ ಪ್ರಕಾರ ಈಗಾಗಲೇ ನಾವು ಟೆಂಡರ್ಸ್ ಕರೆಯುತ್ತಿದ್ದೇವೆ. ಇದೊಂದು ಸಂಪರ್ಕ ಕಲ್ಪಿಸುವ ಮಹತ್ವಾದನೆ ಎಂದರೆ ತಪ್ಪಾಗುವುದಿಲ್ಲ. ಕರಾವಳಿಗೆ ಸೇರಿಸತಕ್ಕ ಕಾರ್ಯ ಆ ಭಾಗದ ಪ್ರಗತಿಗೆ ಮಹತ್ಸಾಧನೆ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮೊದಲೇ ನಾನು ಹೇಳಿದ್ದೇನೆ, ಪ್ರತಿ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿಗಾಗಿ ಪ್ರಸಕ್ತ ಸಾಲಿನಲ್ಲಿ ೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ನಿರ್ಣಯ ತೆಗೆದುಕೊಂಡಿದ್ದೇವೆ. ಇದಕ್ಕೆ ಬಹುಶಃ ಚೈತನ್ಯ ಕೊಟ್ಟಂತಹವರು ನಮ್ಮ ಅರ್ಥ ಮಂತ್ರಿಗಳು. ನಮ್ಮ ಶಾಸಕರು ಹಲವಾರು ರೀತಿಯಲ್ಲಿ ಹೇಳುತ್ತಿದ್ದರು. ಏನೆಂದರೆ ನಾವು ಬಂದು ೭ ತಿಂಗಳಾಯಿತು. ಒಂದು ರಸ್ತೆಯನ್ನೂ ಮಾಡಿಸುವುದಕ್ಕಾಗಲಿಲ್ಲ. ನಾವು ಹೇಗೆ ಹಳ್ಳಿಗೆ ಹೋಗಿ ಮುಖ ತೋರಿಸುವುದಕ್ಕಾಗುತ್ತಿಲ್ಲ, ಈ ರೀತಿಯ ದೂರುಗಳು ಅಥವಾ ಸಂಖ್ಯೆಯನ್ನು ಹಲವಾರು ಮಾನ್ಯ ಸದಸ್ಯರು ವ್ಯಕ್ತ ಮಾಡಿದ್ದಾರೆ. ಇದಕ್ಕೆ ಕಾರಣ, ಆಯವ್ಯಯದಲ್ಲಿ ಮೀಸಲಿಟ್ಟಿರುವಂತಹ ಹಣ ಯಾವುದಕ್ಕೂ ಸಾಕಾಗುವುದಿಲ್ಲವಾದ್ದರಿಂದ ಈ ಕೆಲಸವನ್ನು ಮಾಡಿಸುವುದು ಹೇಗೆ ಎಂಬ ಪ್ರಶ್ನೆ ಅವರಿಗೆ ಬರುವಂತಹದ್ದು ಸಹಜ. ಅದಕ್ಕೆ ಈಗಾಗಲೇ ಸಂಬಂಧಪಟ್ಟ ಎಗ್ಸಿಕ್ಯೂಟೀವ್ ಇಂಜಿನೀಯರ್ಸ್‌ಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಸ್ಥಳೀಯ ಶಾಸಕರನ್ನು ಸಂಪರ್ಕಿಸಿ ಅಲ್ಲಿಯ ಆದ್ಯತೆಯನ್ನು ನೋಡುವುದರ ಮೂಲಕ ರಸ್ತೆ ಕೆಲಸಗಳನ್ನು ಆರಂಭ ಮಾಡುವುದಕ್ಕೆ ಬೇಕಾದ ಅಂದಾಜು ವೆಚ್ಚವನ್ನು ಮಾಡಬೇಕೆಂಬ ಸೂಚನೆಯನ್ನು ನಾವು ಈಗಾಗಲೇ ಕೊಟ್ಟಿದ್ದೇವೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಗುಲ್ಬರ್ಗ ವಿಭಾಗದಲ್ಲಿ ರಸ್ತೆಗಳ ಪರಿಸ್ಥಿತಿ ತೀರ ಹದಗೆಟ್ಟಿದೆ ಎಂಬುದರ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಅಲ್ಲಿ ಸಿಮೆಂಟ್ ಕಾರ್ಖಾನೆಗಳು ಜಾಸ್ತಿ. ಇತ್ತೀಚೆಗೆ ವಾಹನಗಳು ತಮಗೂ ಗೊತ್ತಿದ್ದ ಹಾಗೆ ೧೦–೧೫–೨೦ ಟನ್‌ಗಳಷ್ಟು ಹೊರಬಲ್ಲಂತಹ ಸಾಮರ್ಥ್ಯ ಇರತಕ್ಕಂತಹ ವಾಹನಗಳು ಆ ರಸ್ತೆಗಳಲ್ಲಿ ಓಡಾಡುತ್ತಿವೆ. ಅದಕ್ಕೆ ತಕ್ಕ ರಸ್ತೆಗಳನ್ನು ಮಾಡುವುದಕ್ಕೆ ಸಾಕಷ್ಟು ಹಣ ಬೇಕು. ಅದಕ್ಕಾಗಿ ಸಂಬಂಧಪಟ್ಟ ಕಾರ್ಖಾನೆಯವರು ಜೊತೆ ನಮ್ಮ ಕೈಗಾರಿಕೆ ಇಲಾಖೆ ಮತ್ತು ನಮ್ಮ ಇಲಾಖೆಯವರು ಹಲವಾರು ಸುತ್ತಿನ ಮಾತುಗಳನ್ನು ನಡೆಸಿದ್ದಾರೆ. ಅವರೂ ಶುಲ್ಕವನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ಏಕೆಂದರೆ ಅವರು ತಯಾರು ಮಾಡಿದಂತಹ ಸಿಮೆಂಟನ್ನು ಹೊರಗಡೆ ಕಳುಹಿಸಲು ರಸ್ತೆಗಳ ಅವಶ್ಯಕತೆ ಇದೆ. ನಾವು ಶುಲ್ಕವನ್ನು ಕೊಡಲಿಕ್ಕೆ ತಯಾರಿದ್ದೇವೆ, ರಸ್ತೆಗಳನ್ನು ಮಾಡಿಸಿ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಆ ವಿಷಯ ಕೂಡ ತೀರ ಪರಿಶೀಲನೆಯಲ್ಲಿದೆ. ಆದಷ್ಟು ಬೇಗ ಆ ಕೆಲಸವನ್ನು ಮಾಡುತ್ತೇವೆಂಬುದಾಗಿ ಹೇಳುವುದಕ್ಕೆ ಬಯಸುತ್ತೇನೆ.

ನಮ್ಮಲ್ಲಿರುವಂತಹ ರಸ್ತೆಗಳ ಪೈಕಿ ಬಹುತೇಕ ಎಲ್ಲವನ್ನೂ ಜಿಲ್ಲಾ ಪರಿಷತ್ತಿಗೆ ವಹಿಸಿಕೊಟ್ಟಿದ್ದೇವೆ. ಅಂತರ ರಾಜ್ಯ ಹೆದ್ದಾರಿಗಳು, ಮತ್ತು ಅಂತರ ಜಿಲ್ಲಾ ರಸ್ತೆಗಳನ್ನು ಬಿಟ್ಟು ಉಳಿದೆಲ್ಲಾ ಹೆಚ್ಚು ಕಡಿಮೆ ಎಲ್ಲ ರಸ್ತೆಗಳನ್ನು ಅವರಿಗೆ ವಹಿಸಿದ್ದೇವೆ; ಅವರಿಗೆ ಕೊಡತಕ್ಕ ಹಣ ಸಾಕಾಗುವುದಿಲ್ಲ. ಮತ್ತು ಅದರಲ್ಲಿ ಹೆಚ್ಚು ಕೆಲಸವನ್ನು ಮಾಡುವುದಕ್ಕೆ ಸಿಬ್ಬಂದಿಯೂ ಅವರಲ್ಲಿಲ್ಲ ಎಂಬುದನ್ನು ಮನಗಂಡಿದ್ದೇವೆ, ಜೊತೆಗೆ ಎಲ್ಲ ಶಾಸಕರುಗಳೂ ಈ ರಸ್ತೆಯ ಅಗತ್ಯತೆಯ ಬಗ್ಗೆ ಮೇಲಿಂದ ಮೇಲೆ ಒತ್ತಿ ಹೇಳುವುದರ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅವರಲ್ಲೂ ಪ್ರಮುಖವಾದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವುದರ ಮೂಲಕ ಲೋಕೋಪಯೋಗಿ ರಸ್ತೆಗಳನ್ನಾಗಿ ಪರಿವರ್ತಿಸಿ ಅವುಗಳ ದುರಸ್ತಿ ಕೆಲಸವನ್ನು ಹಂತ ಹಂತವಾಗಿ ಮಾಡತಕ್ಕಂತಹ ದಿಸೆಯಲ್ಲಿ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತಿದ್ದೇನೆ. ಹಾಗೂ ಸಣ್ಣ ಸಣ್ಣ ಕೆರೆಗಳನ್ನೂ ಸಹ ತೆಗೆದುಕೊಳ್ಳತಕ್ಕ ವಿಚಾರ ಸರ್ಕಾರದ ಗಮನದಲ್ಲಿದೆ.

ಕೊಂಕಣ ರೈಲ್ವೇ ಬಗ್ಗೆ ಹೇಳುವುದಾದರೆ, ತಮಗೇ ಗೊತ್ತಿದೆ, ಕೇಂದ್ರ ಸರ್ಕಾರ ದಕ್ಷಿಣದ ನಾಲ್ಕು ಕರಾವಳಿ ಪ್ರದೇಶಗಳ ರಾಜ್ಯಗಳಿಗೆ ಅನುಕೂಲವನ್ನು ಮಾಡತಕ್ಕಂತಹದ್ದಕ್ಕೆ ಸುಮಾರು ೧೦೪೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೊಂಕಣ ರೈಲ್ವೇ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಹೇಳಿದಾಗ, ನಮ್ಮ ರಾಜ್ಯದ ಸರ್ಕಾರ ಒಂದು ಷೇರನ್ನು ಕೊಡಬೇಕೆಂಬ ನಿರ್ಬಂದನೆಯನ್ನು ಹಾಕಿದರು. ಜೊತೆಗೆ ಭೂಮಿಯನ್ನು ಬಿಟ್ಟು ಕೊಡಬೇಕೆಂದು ಹೇಳಿದ್ದಾರೆ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ದೃಷ್ಟಿಯಿಂದ ಈ ಕಾರ್ಯಕ್ಕೆ ನಮ್ಮ ರಾಜ್ಯ ಸರ್ಕಾರದವರು ಮೂವತ್ತೇಳು ವರೆ ಕೋಟಿ ರೂಪಾಯಿಗಳನ್ನು ಮೊದಲ ಹಂತದ ಷೇರನ್ನಾಗಿ ಕೊಡುವುದಕ್ಕೆ ನಿರ್ಧರಿಸಿದ್ದೇವೆ. ಜೊತೆಗೆ ಅದನ್ನು ಪ್ರಮುಖವಾಗಿ ಮಾಡುವುದಕ್ಕೆ ಮೊಡಲಮ ಆಫೀಸ್ ಕಾರ್ಯವನ್ನು ಮಾಡುವುದಕ್ಕೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ-೧ ರವರ ನೇತೃತ್ವದಲ್ಲಿ ಈ ಕಾರ್ಯವನ್ನು ಮಾಡತಕ್ಕ ಕೆಲಸವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳ ಬಯಸುತ್ತೇನೆ,

ಇರಿಗೇಷನ್ ಬಾಂಡ್‌ನ ವಿಚಾರವಾಗಿ ಹೇಳುವುದಾದರೆ, ನಮ್ಮ ಮಿತ್ರರಾದ ಸನ್ಮಾನ್ಯ ಬೈರೇಗೌಡರು ಹೇಳಿದರು, ಈ ರಾಜ್ಯದಲ್ಲಿ ಇನ್ನೂ ೨೯ ಲಕ್ಷ ಹೆಕ್ಟೇರ್‌ಗೆ ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಅವಕಾಶ ಇದೆ, ಇದನ್ನು ಮಾಡದಿದ್ದರೆ ಬಹುಶಃ ಈ ದೇಶಕ್ಕೆ ಬಹಳ ಮಟ್ಟಿಗೆ ಅನ್ಯಾಯವಾಗುತ್ತಿದೆ, ಈ ದಿಸೆಯಲ್ಲಿ ಸರ್ಕಾರ ಗಮನಹರಿಸಬೇಕು ಎನ್ನುವ ಒತ್ತಾಯವನ್ನು ಮಾಡಿದರು. ಅದು ನಿಜ. ನಾವು ಎಷ್ಟು ಸಾಧನೆಯನ್ನು ಮಾಡಬೇಕೋ ಅಷ್ಟು ಸಾಧನೆಯನ್ನು ಇದುವರೆವಿಗೂ ಮಾಡುವುದಕ್ಕಾಗಲಿಲ್ಲ. ಇದಕ್ಕೆ ನಮ್ಮ ಹತ್ತಿರ ಇರತಕ್ಕ ಸಂಪನ್ಮೂಲದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೂ ೪೦ ವರ್ಷ ನಾವು ಶ್ರಮಪಟ್ಟರೂ ಆಗುವುದಿಲ್ಲ. ಅದಕ್ಕಾಗಿ ಸಂಪನ್ಮೂಲವನ್ನು ರೂಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಇರಿಗೇಷನ್ ಬಾಂಡನ್ನು ಮಾರಾಟ ಮಾಡುವುದರ ಮೂಲಕ ಅಥವಾ ಅದಕ್ಕೆ ಒಂದು ಬ್ಯಾಂಕೊಂದನ್ನು ಸ್ಥಾಪನೆ ಮಾಡುವುದರ ಮೂಲಕ ಸಾಲವನ್ನು ತೆಗೆದುಕೊಂಡು ಅದರಿಂದ ಬಂದಂತಹ ಹಣದಲ್ಲಿ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಅನುಕೂಲವಾಗಲೆಂದು ಇರಿಗೇಷನ್ ಬಾಂಡ್‌ಗಳನ್ನು ಮಾರಾಟ ಮಾಡುವುದಕ್ಕೆ ನಮಗೆ ಅನುಮತಿಯನ್ನು ಕೊಡಬೇಕೆಂದು ರಾಜ್ಯ ಸರ್ಕಾರ ಸುಮಾರು ೧೯೮೮ ರಿಂದಲೇ ಪ್ರಯತ್ನ ಮಾಡುತ್ತಿದೆ. ಹಲವಾರು ಸಾರಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಮೊನ್ನೆ ಕೂಡಾ ನಮ್ಮ ಮುಖ್ಯ ಮಂತ್ರಿಯವರು ಕೇಂದ್ರ ಸರ್ಕಾರದ ಅರ್ಥ ಮಂತ್ರಿಗಳ ಜೊತೆ ಇದರ ಬಗ್ಗೆ ಪ್ರಸ್ತಾಪ ಮಾಡಿ, ನೀವು ನಮಗೆ ಪ್ಲಾನ್‌ನಲ್ಲಿಯಂತೂ ಹಣ ಕೊಡುವುದಿಲ್ಲ. ನೀವು ಇದಕ್ಕೆ ನಮಗೆ ಅನುಮತಿ ಏನಾದರೂ ಕೊಡದೇ ಇದ್ದರೆ ನಮ್ಮ ರಾಜ್ಯದ ವಿಷಯವಾಗಿ ಅನ್ಯಾಯ ಮಾಡಿದಹಾಗೆ ಆಗುತ್ತದೆ ಎಂದೂ ಸಹ ಹೇಳಿದ್ದಾರೆ. ಈ ಯೋಜನೆಗೆ ಹಣವನ್ನಾದರೂ ಕೊಡಿ, ಇಲ್ಲವೇ ಬಾಂಡ್ ಮೂಲಕ ಹಣವನ್ನು ಸಂಗ್ರಹ ಮಾಡುವುದಕ್ಕೆ ಅನುಮತಿಯನ್ನಾದರೂ ಕೊಡಿ ಎಂದು ಆಗ್ರಹಪೂರ್ವಕವಾಗಿ ಒತ್ತಾಯ ಮಾಡಿದ್ದು, ಈ ಬಗ್ಗೆ ಕೇಂದ್ರದ ವಿತ್ತ ಮಂತ್ರಿಗಳು ಮಾತುಕತೆಯಲ್ಲಿ ಅನುಮತಿ ಕೊಡುವ ಚಿಹ್ನೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ, ಅವರು ಅನುಮತಿ ಕೊಟ್ಟರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಮಾಡುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನೀರಾವರಿ ಬಾಂಡ್ ವಿಷಯವಾಗಿ ಚರ್ಚೆ ನಡೆಯುವ ಕಾಲದಲ್ಲಿ ನಾನೂ ಸಹ ಅಲ್ಲಿ ಇದ್ದೆ. ಈ ಬಗ್ಗೆ ನಮ್ಮದು ಏನು ಅಭ್ಯಂತರ ಇಲ್ಲ ಎಂದು ಅರ್ಥ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಜಿ ಪುಟ್ಟಸ್ವಾಮಿಗೌಡ.—ತಾವು ಏನು ಹೇಳಿದಿರಿ, ಅದು ನಮ್ಮ ರಾಜ್ಯಕ್ಕೆ ಕಮ್ಯುನಿಕೇಟ್ ಆದರೆ ಬಹಳ ಒಳ್ಳೆಯದು. ಆ ಮೂಲಕ ನಮ್ಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ವಿಶೇಷವಾದ ಸವಲತ್ತನ್ನು ಒದಗಿಸಿದಂತಾಗುತ್ತದೆಂದು ಹೇಳಿ ಅವರಿಗೂ ಕೂಡಾ ನಾವು ಧನ್ಯವಾದಗಳನ್ನು ಅರ್ಪಿಸಬೇಕಾಗುತ್ತದೆಂದು ಹೇಳಿ, ಈ ವಿವಾದ ಕೇಂದ್ರದಲ್ಲಿ ಎರಡು ವರ್ಷಗಳಿಂದ ಪೆಂಡಿಂಗ್ ಇದ್ದು, ಇದಕ್ಕೆ ಅನುಮತಿ ಕೊಟ್ಟರೆ ನಮ್ಮ ರಾಜ್ಯಕ್ಕೆ ವಿಶೇಷವಾದ ಕೊಡುಗೆ ಕೊಟ್ಟಂತೆ ಆಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಕಟ್ಟಡಗಳ ರಿಪೇರಿ ಬಗ್ಗೆ ಈ ಶಾಸನಸಭೆಯಲ್ಲಿ ಸಾಕಷ್ಟು ಮಹತ್ವ ಪೂರ್ಣವಾದ ಚರ್ಚೆಯಾಗಿದೆ. ನಮ್ಮಲ್ಲಿ ಕಟ್ಟಡಗಳನ್ನು ಸಾಕಷ್ಟು ಕಟ್ಟಿದ್ದಾರೆ. ಸಾವಿರಾರು ಸರ್ಕಾರಿ ಕಟ್ಟಡಗಳು ದುರಸ್ತಿ ಇಲ್ಲದೇ ಬಿದ್ದುಹೋಗತಕ್ಕ ಸ್ಥಿತಿಯಲ್ಲಿದ್ದಾವೆ. ಎಷ್ಟೋ ಕಡೆ ಬಿದ್ದುಹೋಗಿವೆ. ಆದರೆ ನಮ್ಮ ಪಿಡಬ್ಲ್ಯುಡಿ ಕೋಡ್‌ನಲ್ಲಿ ಒಂದು ದೋಷ

ಇದೆ. ಕಟ್ಟಡಕ್ಕೆ ಖರ್ಚು ಮಾಡಿರತಕ್ಕ ವೆಚ್ಚದಲ್ಲಿ ಶೇಕಡಾ ೩ರಷ್ಟು ಮಾತ್ರ ರಿಪೇರಿಗೆ ಇರಬೇಕೆಂದು ಇದೆ. ಇದು ಬಹಳಹಳೆಯ ಕಾಲದ ಒಂದು ಶಾಸನ, ಬಹಳ ಹಿಂದೆ ಮಾಡಿದ ಒಂದು ಕಾನೂನು ಇದರಿಂದ ಇವತ್ತು ಆದಂತಹ ಹೆಚ್ಚುವರಿ ಕೂಲಿ ಮತ್ತು ಸಾಮಗ್ರಿಗಳ ಬೆಲೆಯಿಂದಾಗಿ ಬಹುಶಃ ಒಂದೂ ಕೆಲಸ ಕೂಡಾ ಮಾಡುವುದಕ್ಕಾಗುವುದಿಲ್ಲ. ಒಂದು ರೂಮ್ ಸಹ ರಿಪೇರಿ ಮಾಡುವುದಕ್ಕಾಗುವುದಿಲ್ಲ. ಇವತ್ತು ಪ್ಲಿಂತ್ ಏರಿಯಾ ಆಧಾರವಾಗಿ ಇಟ್ಟುಕೊಂಡು ದುರಸ್ತಿಗೆ ಹಣ ಕೊಡಬೇಕೆಂದು ಆರ್ಥಿಕ ಇಲಾಖೆಯೊಡನೆ ನಮ್ಮ ಇಲಾಖೆ ಪ್ರಸ್ತಾವನೆ ಮಾಡಿದೆ. ಆರ್ಥಿಕ ಇಲಾಖೆಯವರು ಅದಕ್ಕೆ ಅನುಮತಿಕೊಟ್ಟ ನಂತರ ಹಳೆಯ ಕಟ್ಟಡಗಳ ದುರಸ್ತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಕೇಂದ್ರ ಸರ್ಕಾರದಲ್ಲೂ ಕೂಡಾ ಈ ಒಂದು ಪ್ರಸ್ತಾವನೆ ಬಹಳ ತೀವ್ರ ಪರಿಶೀಲನೆಯಲ್ಲಿದೆಯೆಂದು ನಾನು ಕೇಳಿದ್ದೇನೆ. ಅವರೂ ಕೂಡಾ ಆದಷ್ಟು ಜಾಗ್ರತೆ ಮಾಡುವುದಾದರೆ ನಮ್ಮ ವಿತ್ತ ಇಲಾಖೆಯವರೂ ಕೂಡಾ ಕ್ಲಿಯರ್ ಮಾಡುತ್ತಾರೆಂದು ವಿಶ್ವಾಸ ಇದೆ ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ಸೆಂಟ್ರಲ್ ಡಿಸೈನ್ ಆರ್ಗನೈಸೇಷನ್ ಇಲ್ಲ. ನಾವು ಯೋಜನೆಗಳನ್ನು ತಯಾರು ಮಾಡುವಾಗ. ವಿನ್ಯಾಸ ಮಾಡುವಾಗ ನಾನು ಮೊದಲೇ ಪ್ರಸ್ತಾಪ ಮಾಡಿದಹಾಗೆ ಮುಂದೆ ಬರಬಹುದಾದ ಎಲ್ಲಾ ವೆಚ್ಚಗಳನ್ನು ಕೂಡ ಗಮನದಲ್ಲಿ ಇಟ್ಟುಕೊಂಡು ತಯಾರು ಮಾಡಲು ವಿಶೇಷವಾದ ತಾಂತ್ರಿಕ ಪ್ರಾಜ್ಞತೆ ನಮ್ಮಲ್ಲಿ ಕೊರತೆ ಇದೆ. ಆದರಿಂದಲೇ ಈ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹಣ ಖರ್ಚು ಆಗುತ್ತಿದೆಯೆಂಬ ಕಾರಣವನ್ನು ಎಲ್ಲಾ ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಇದಕ್ಕೆ ನಮ್ಮ ಇಲಾಖೆಯಲ್ಲಿ ತಜ್ಞತೆ ಇರುವವರು, ಮೇಧಾಶಕ್ತಿ ಇರುವವರು ಇಲ್ಲ ಎಂದು ಅಲ್ಲ. ನಮ್ಮಲ್ಲಿ ಅಂತಹವರು ಇದ್ದಾರೆ. ಆದರೆ ನಮ್ಮಲ್ಲಿ ಅಂತಹವರನ್ನು ಗುರುತು ಮಾಡತಕ್ಕ ಒಂದು ಕೊರತೆ ಇದೆ. ಇವತ್ತು ಏನಾಗಿದೆ ಎಂದರೆ ಎಲ್ಲೂ ಕೆಲಸಕ್ಕೆ ಬಾರದೇ ಇರುವವರು ಅಥವಾ ಯಾವುದೇ ರಾಜಕೀಯ ಪ್ರಭಾವ ಇಲ್ಲದೇ ಇರತಕ್ಕವರು ಇವತ್ತು ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಆದರಿಂದಾಗಿ ಈ ಇಲಾಖೆಗೆ ಮಹತ್ವ ಇಲ್ಲ ಈ ಇಲಾಖೆಯಲ್ಲಿ ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಅವಕಾಶ ಇಲ್ಲದೆ, ತತ್ಪರಿಣಾಮವಾಗಿ ಇಂತಹ ದೋಷದಿಂದ ಈ ರೀತಿಯಲ್ಲಿ ಬೊಕ್ಕಸದ ಮೇಲೆ ಭಾರ ಬೀಳುತ್ತಿದೆ ಎಂದು ಹೇಳಬೇಕಾಗುತ್ತದೆ. ನಾವು ಇವತ್ತು ಇದನ್ನು ಬಲಪಡಿಸಬೇಕಾಗುತ್ತದೆ. ಇದರಲ್ಲಿ ಪ್ರಜ್ಞಾವಂತರು ಯಾರು ಇದ್ದಾರೆ, ಪೋಸ್ಟ್‌ಗ್ರಾಜ್ಯುಯೇಟ್ಸ್ ಯಾರಿದ್ದಾರೆ, ಹೆಚ್ಚಿನ ತಾಂತ್ರಿಕತೆ ಇರುವವರು ಯಾರಿದ್ದಾರೆ, ಯಾರು ಆಧುನಿಕ ರೀತಿಯ ವಿನ್ಯಾಸ ಮಾಡುವ ಏಬಲ್ ಪರ್ಸನಾಲಟಿ ಹೊಂದಿರುವವರು ಯಾರಿದ್ದಾರೆ. ಅವರನ್ನು ಗುರ್ತಿಸಿ ಈ ಇಲಾಖೆಯನ್ನು ಎಲ್ಲಾ ರೀತಿಯಲ್ಲಿ ಸಂವೃದ್ಧಿಗೊಳಿಸಿ ತನ್ಮೂಲಕ ಈ ಕಾರ್ಯವನ್ನು ಮಾಡುವುದಾದರೆ ಬಹುಶಃ ಈ ಒಂದು ಸರ್ಕಾರಿ ಯೋಜನೆಗಳಿಗೆ ಒಂದು ಹೊಸ ರೀತಿಯ ಚೈತನ್ಯ ಹಾಗೂ ಚಾಲನೆ ಕೊಟ್ಟ ಹಾಗೆ ಆಗುತ್ತದೆಂದು ಹೇಳುವ ಹಿನ್ನೆಲೆಯಲ್ಲಿ ಅಂತಹ ಅಧಿಕಾರಿಗಳನ್ನು ಅದರಲ್ಲೂ ಯಂಗ್‌ಸ್ಟರ್ಸ್ ಯಾರಿದ್ದಾರೆ, ಅವರನ್ನು ಗುರುತು ಮಾಡುತ್ತಿದ್ದೇವೆ. ಅದನ್ನು ಬೆಂಗಳೂರಿನಲ್ಲೇ ಸ್ಥಾಪನೆ ಮಾಡುವವರು

೧೦–೧೫ ಎ. ಎಂ.

ಇದ್ದೇವೆ. ಹೊರಗಡೆಯಿಂದ ದೊಡ್ಡ ದೊಡ್ಡ ವಿದ್ಯಾವಂತರನ್ನು ಮತ್ತು ಪರಿಣಿತರನ್ನು ಕರೆಸಿ ಅವರಿಂದ ತರಭೇತಿಯನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಮತ್ತು ನಮ್ಮಿಂದ ಕೂಡ ಹೊರ ದೇಶಕ್ಕೆ ಕಳುಹಿಸತಕ್ಕ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ನಮಗೆ ನೀರಾವರಿ ಯೋಜನೆಗಳು ಮತ್ತು ಕಾಮಗಾರಿ ಯೋಜನೆಗಳು ಎಷ್ಟು ಪ್ರಾಮುಖ್ಯವೋ ಒಬ್ಬ ಇಂಜಿನೀಯರ್ ಅವರ ತಾಂತ್ರಿಕತೆಯನ್ನು ಹೆಚ್ಚಿಸತಕ್ಕಂತದದ್ದು ಅಷ್ಟೇ ಪ್ರಾಮುಖ್ಯವಾದುದು. ಸರ್ಕಾರ ಅದನ್ನು ಮನಗಂಡಿದೆ. ಈ ಹಿನ್ನಲೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅದಕ್ಕಾಗಿ ವಿಶೇಷವಾದ ಗಮನವನ್ನು ಈ ಸರ್ಕಾರ ಕೊಡುತ್ತಿದೆ ಎಂಬುದನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇಷ್ಟನ್ನು ಹೇಳುತ್ತಾ, ಬಹಳ ಜನ ಸ್ನೇಹಿತರು ತಮ್ಮ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ಅಗತ್ಯವಾಗಿ ಆಗಬೇಕಾಗಿರುವಂತಹ ಕೆಲಸಗಳ ಬಗ್ಗೆ ಹೇಳಿದ್ದಾರೆ. ಬಹುಶಃ ಎಲ್ಲದರ ಬಗ್ಗೆಯೂ ಕೂಡ ಅವರಿಗೆ ಹೇಳಲಿಕ್ಕಾಗದಿದ್ದರೂ ಕೂಡ ಕೆಲವೊಂದು ಪ್ರಮುಖವಾದ ಕೆಲಸಗಳನ್ನು ಮಾಡಬೇಕೆಂದಿದ್ದೇವೆಂದು ನಾನು ಈಗ ಅವರಿಗೆ ತಿಳಿಯಬಯಸುತ್ತೇನೆ. ಮುಖ್ಯವಾಗಿ ಅವರ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ, ಪ್ರತಿಯೊಬ್ಬರ ಹೆಸರನ್ನಿಟ್ಟುಕೊಂಡು ಹೇಳುವುದು ಕಷ್ಟವಾಗಬಹುದು. ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರತಕ್ಕ ಎಲ್ಲ ರಸ್ತೆಗಳನ್ನು ಹಿಂದಕ್ಕೆ ಪಡೆದು.......

ಶ್ರೀ ಡಿ. ಬಿ. ಚಂದ್ರೇಗೌಡ.—ನನಗನ್ನಿಸುತ್ತದೆ. ಹೊಸಸಂಪ್ರದಾಯವನ್ನು ಮಾನ್ಯ ಮಂತ್ರಿಗಳು ಮಾಡುತ್ತಿದ್ದಾರೆ ಅಂತ. ಕಾರಣವೇನೆಂದರೆ ಈ ಇಲಾಖೆಯ ಬೇಡಿಕೆಯ ಮೇಲೆ ೧೫–೨೦ ಸದಸ್ಯರು ಮಾತನಾಡಿರಬಹುದು. ಅವರು ಹೇಳಿದ್ದೆಲ್ಲವನ್ನೂ ನಾವು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟುಬಿಟ್ಟರೆ, ಉಳಿದ ೨೦೦ ಜನ ಸದಸ್ಯರು ಏನು ಮಾಡಬೇಕು. ಅದಕ್ಕಾಗಿ ಈ ರೀತಿ ಹೇಳುವುದು ಸರಿಯಲ್ಲವೆಂದು ನನಗನ್ನಿಸುತ್ತದೆ ಇದನ್ನು ನಿಮಗೇ ಬಿಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಇದನ್ನು ವೈಯಕ್ತಿಕವಾಗಿ ನಾನು ಹೇಳಲಿಕ್ಕೆ ಹೋಗಲಿಲ್ಲ ಜನರಲ್ಲಾಗಿ ಹೇಳಿರುವಂತಹ ವಿಚಾರವಂತಹ ವಿಚಾರದ ಬಗ್ಗೆ ಹೇಳುತ್ತಿದ್ದೇವೆ. ಜಿಲ್ಲಾ ಪರಿಷತ್ತಿ. ರಸ್ತೆಗಳ ಬಗ್ಗೆ ಹೇಳಿದ್ದಾರೆ. ಅದಕ್ಕೆ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಕೆಲವರು ಕಟ್ಟುನಿಟ್ಟಾಗಿ ನಿರ್ದಿಷ್ಟ ಪ್ರಕರಣಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಹಲಗೇಗೌಡರು ಅವರ ಕ್ಷೇತ್ರದಲ್ಲಿ ಬರತಕ್ಕ ಚಟ್ಟಂಗೆರೆ ಟನಲ್‌ನಲ್ಲಿ ಬಹಳ ಅವ್ಯವಹಾರವಾಗಿದೆ. ಅದರಲ್ಲಿ ಕೆಲಸ ಮಾಡತಕ್ಕ ಕೆಲವೊಂದು ಅಧಿಕಾರಿಗಳನ್ನು ವರ್ಗಮಾಡಿದ್ದಾರೆ. ಕಂಟ್ರಾಕ್ಟ್‌ದಾರರಿಗೆ ಬೇಕಾದ ಅಧಿಕಾರಿಯನ್ನು ಹಾಕಿದ್ದಾರೆ ಎಂಬ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅದಕ್ಕೆ ಉತ್ತರವನ್ನು ಕೊಡತಕ್ಕಂತದದ್ದು ಅಗತ್ಯವೆಂದು ನಾನು ಭಾವನೆ ಮಾಡಿದ್ದೇನೆ. ಚಟ್ಟಂಗೆರೆಟನಲ್‌ನಲ್ಲಿ ಅಕ್ರಮವಾಗಿರತಕಂತಹದ್ದು ನಿಜ. ೧೯೮೮ರಲ್ಲಿ ಅದನ್ನು ಲೋಕಾಯುಕ್ತಕ್ಕೆ ಹಾಕಿದ್ದಾರೆ. ಲೋಕಾಯುಕ್ತದ ತನಿಖೆ ತೀವ್ರ ಗತಿಯಿಂದ ನಡೆಯುತ್ತಿದೆ. ಅದರಲ್ಲೂ ತನಿಖಾಹಂತದಲ್ಲಿರುವಾಗ ನಾವು ಇಂತಹ ಅಪಾದನೆಗಳ ಬಗ್ಗೆ ನಿಖರವಾಗಿ ಹೇಳುವುದಕ್ಕೆ ಬರುವುದಿಲ್ಲ. ಅವರು ಮತ್ತೊಂದು ಅಪಾದನೆಯನ್ನು ಏನು ಮಾಡಿದ್ದಾರೆಂದರೆ, ಅಲ್ಲಿದ್ದಂತಹ ಎಗ್ಸಿಕ್ಯೂಟೀವ್ ಇಂಜಿನಿಯರ್‌ನ್ನು ಈ ಸರ್ಕಾರ ಅಧಿಕಾರಕ್ಕೆ ಬಂದನಂತರ, ಪ್ರಾಮಾಣಿಕ ಅಧಿಕಾರಿಯನ್ನು ಅಲ್ಲಿಂದ ವರ್ಗ ಮಾಡಿ, ಅಲ್ಲಿಯ ಗುತ್ತಿಗೆಗಾರರಿಗೆ ಸಹಾಯ ಮಾಡುವಂತಹ ಅಧಿಕಾರಿಯನ್ನು ಹಾಕಿದ್ದಾರೆ ಎಂಬ ನಿರ್ದಿಷ್ಟವಾದ ಅಪಾದನೆಯನ್ನು ಮಾಡಿದ್ದಾರೆ. ಈ ಸಮಯದಲ್ಲಿ ತಮ್ಮ ಮೂಲಕ ಅವರಿಗೆ ತಿಳಿಯಬಯಸುತ್ತೇನೆ. ಲೋಕಾಯುಕ್ತದವರು ಇದರ ತನಿಖೆ ಮಾಡುವುದಕ್ಕೆ ಬಂದಾಗ ಸುಮಾರು ೧೧ ತಿಂಗಳಕಾಲ ಅವರಿಗೆ ರೆಕಾರ್ಡ್‌ನ್ನು ಒದಗಿಸಲಿಲ್ಲ. ಅವರ ಸಿಬಂದಿಗಳನ್ನು ಅಲ್ಲಿಗೆ ಕಳುಹಿಸಿರಲಿಲ್ಲ. ಹಿಂದಿನ ಸರ್ಕಾರ ೧೯೮೮ರ ಅಂತ್ಯದಲ್ಲಿ ತನಿಖೆಗೆ ಆರ್ಡರ್ ಮಾಡಿದರೂ ಸಹ ೧೯೮೯ರ ಅಂತ್ಯ ಆಗುವವರೆಗೂ ಅಲ್ಲಿರತಕ್ಕ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಸಂಬಂಧಪಟ್ಟ ಮಾಹಿತಿಯನ್ನು ಒದಗಿಸುವುದಕ್ಕೆ ಮತ್ತು ಸಿಬ್ಬಂದಿಯನ್ನು ಒದಗಿಸುವುದಕ್ಕೆ ಆಸಕ್ತಿಯನ್ನು ತೋರಲಿಲ್ಲ. ಲೋಕಾಯುಕ್ತದವರು ಸರ್ಕಾರಕ್ಕೆ ಪತ್ರ ಬರೆಯುತ್ತಾರೆ, ಏನೆಂದು ಬರೆಯುತ್ತಾರೆಂದರೆ, ನೀವು ಕೊಟ್ಟ ಅವಧಿಯಲ್ಲಿ ಈಗಿರತಕ್ಕ ಅಧಿಕಾರಿಯಿಂದ ನಾವು ತನಿಕೆ ಮುಗಿಸುವುದಕ್ಕೆ ಅವಕಾಶವಾಗುವುದಿಲ್ಲ ಆದ್ದರಿಂದ ನೀವು ಅವದಿಯನ್ನು ವಿಸ್ತರಣೆ ಮಾಡುವುದು ಅಷ್ಟೇ ಅಲ್ಲ, ನಾವು ಕೇಳುವಂತಹ ಮಾಹಿತಿಯನ್ನು ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಸೂಕ್ತ ನಿರ್ದೇಶನ ಸರ್ಕಾರದ ಮತಿಯಿಂದ ಹೋಗಬೇಕೆಂದು ಕೇಳಿದ್ದಾರೆ ನಾನು ಕೇಳುತ್ತೇನೆ. ಲೋಕಾಯುಕ್ತ ತನಿಖೆಗೆ ಅವಕಾಶ ಕೊಡದ ಒಬ್ಬ ಅಧಿಕಾರಿಯನ್ನು ಸರ್ಕಾರ ಆ ಜಾಗದಲ್ಲಿ ಹೇಗೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಅವರು ಪ್ರಾಮಾಣಿಕ ಅಧಿಕಾರಿ ಆಗಿರಬಹುದು ಯಾವುದೇ ಅಧಿಕಾರಿ ಸರ್ಕಾರದ ಕೆಲಸವನ್ನು ಮಾಡುವಾಗ ಯಾವ ಕೆಲಸವನ್ನು ಯಾವ ಗಳಿಗೆಯಲ್ಲಿ ಮಾಡಬೇಕೆನ್ನುವ ಕಾರ್ಯಪ್ರಜ್ಞೆಯಿಂದ ಮಾಡಬೇಕು. ಹಾಗೆ ಮಾಡದಿದ್ದರೆ ಕರ್ತವ್ಯ ಲೋಪದ ಅಪಾದಾನೆಯಿಂದ ಶಿಕ್ಷೆ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಲೋಕಾಯುಕ್ತದವರು ಪತ್ರ ಬರೆದ ನಂತರ ಆ ಅಧಿಕಾರಿಯನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿದ್ದೇವೆ. ಆತನನ್ನು ಕಾನೂನು ನಿಯಮ ಅನುಸರಿಸಿ ಸಸ್ಪೆಂಡ್ ಮಾಡಬೇಕಾಗಿತ್ತು. ಆದರೆ ಅವರನ್ನು ನಾವು ಬೇರೆ ಕಡೆ ವರ್ಗಮಾಡಿ ಮತ್ತೊಬ್ಬ ಅಧಿಕಾರಿಯನ್ನು ಹಾಕಿದ್ದೇವೆ. ಲೋಕಾಯುಕ್ತದ ತನಿಖೆಗೆ ಅವಕಾಶ ಆಗಲಿ ಎಂದು ಅವರನ್ನು ಬೇರೆ ಕಡೆ ವರ್ಗ ಮಾಡಿದ್ದೇವೆ. ಆದರೆ ಇವರು ಕಲರ್‌ಗ್ಲಾಸ್ ತೋರಿಸಿ, ಗುತ್ತಿಗೆದಾರರಿಗೆ ಅನುಕೂಲವಾಗಲಿ ಎಂದು ಹೇಳುವುದು ಸರಿಯಲ್ಲ ಇಲ್ಲಿ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಇರುತ್ತದೆ. ಆದರೆ ಮಾತನಾಡುವಾಗ ಪೂರ್ಣ ವಿಷಯವಿದ ಮಾಹಿತಿಯನ್ನು ಇಟ್ಟುಕೊಂಡು ಮಾತನಾಡಬೇಕು. ಮುಂದೆ ಈ ರೀತಿ ಮಾತನಾಡಬಾರದೆಂದು ಹೇಳಿ. ಈ ವಿಷಯವನ್ನು ಇಷ್ಟಕ್ಕೆ ನಿಲ್ಲಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತೆ ನಮ್ಮ ಇಲಾಖೆಯಲ್ಲಿರತಕ್ಕ ಸೆಕ್ರೆಟರಿ–೧ ಅವರು ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಿದ್ದವರು ಉಪಾಧ್ಯಾಯರಾಗಿದ್ದವರು, ಹಾಗೂ ಪರಿಣತಿ ಇಲ್ಲದೇ ಇರತಕ್ಕವರಿಗೆ ಈ ಅಧಿಕಾರವನ್ನು ಕೊಟ್ಟಿದ್ದಾರೆಂದು ಮಾನ್ಯ ಹಲಗೇಗೌಡರು ಹೇಳಿದರು. ಅವರು ಯಾವ ಅಳತೆಗೋಲನ್ನು ಇಟ್ಟುಕೊಂಡು ಹೇಳಿದರೋ ನನಗೆ ಗೊತ್ತಿಲ್ಲ. ಅವರನ್ನು ತಿಳಿದುಕೊಳ್ಳತಕ್ಕ ವಿಚಾರಕ್ಕೆ ಅವರು ಹೋಗಿಲ್ಲ. ಯಾವ

ಆಧಾರದ ಮೇಲೆ ಈ ಮಾತನ್ನು ಹೇಳಿದ್ದಾರೋ ನನಗೆ ತಿಳಿಯದು. ನಮಗೆ ಇರತಕ್ಕ ಮಾಹಿತಿ ಪ್ರಕಾರ ಅವರು ಸಾಕಷ್ಟು ಪರಿಪೂರ್ಣತೆ ಇರತಕ್ಕವರು, ಸಾಕಷ್ಟು ಅನುಭವವಿರತಕ್ಕ ಅಧಿಕಾರಿಯೆಂದು ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರಿನ ಯಶವಂತಪುರ ರೆಗ್ಯುಲೇಟ್ ಮಾರ್ಕೆಟ್ ಕಟ್ಟುವಂತಹ ಸಂದರ್ಭದಲ್ಲಿ ಅಲ್ಲಿರತಕ್ಕ ಸಮಸ್ಯೆಗಳನ್ನು ಬಿಡಿಸಿದಂತೆ ಕೀರ್ತಿ ಅವರದು. ಅಷ್ಟೇ ಅಲ್ಲ ಇವರು ಇಂಜಿಯರ್ ಕಾಲೇಜುಗಳನ್ನು ಕಟ್ಟಿಸಿ ಬೆಳೆಸಿದಂತಹವರು. ಇವೊತ್ತು ಈ ಶಾಸನಸಭೆಯಲ್ಲಿ ನಾವು ಏನೇ ಹೇಳಿದರೂ ಪತ್ರಿಕೆಗಳಲ್ಲಿ ಬರೆಯುತ್ತಾರೆ. ಮಾತನಾಡಲಿಕ್ಕೆ ನಮಗೆ ವಾಕ್ ಸ್ವಾತಂತ್ರವಿದೆ. ಪತ್ರಿಕೆಗಳವರಿಗೆ ಬರೆಯಲಿಕ್ಕೆ ಸ್ವಾತ್ರಂತ್ಯ ಇದೆಅವರು ಬರೆಯುತ್ತಾರೆ. ಆದರೆ ಒಬ್ಬ ನಿಷ್ಠಾವಂತ ಹಾಗೂ ಪ್ರಾಮಾಣಿಕ ಅಧಿಕಾರಿಗೆ ಅದನ್ನು ಸಸ್ಪೆನ್ಸ್ ಮಾಡತಕ್ಕದ್ದು ಕಷ್ಟ ಎಂಬುದು ಕೂಡ ನಮ್ಮ ಸದಸ್ಯರ ಗಮನದಲ್ಲಿರಲಿ ಎಂಬ ಮಾತನ್ನು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ. ನಮ್ಮಲ್ಲಿ ಕೆಟ್ಟವರೂ ಇದ್ದಾರೆ, ಅದಕ್ಷರೂ ಇದ್ದಾರೆ. ಅಪ್ರಾಮಾಣಿಕರೂ ಇದ್ದಾರೆ, ಆದರೆ ಎಲ್ಲರೂ ಹಾಗೆಯೇ ಇದ್ದಾರೆಂದು ಹೇಳಬಾರದು. ಯಾರು ಅಂತಹವರು ಇದ್ದಾರೆ ಅಂತಹವರನ್ನು ಗುರುತು ಮಾಡಿ. ತಿದ್ದುವುದಕ್ಕೆ ಅಥವಾ ಹೊರಗೆ ಹಾಕುವುದಕ್ಕೆ ಪ್ರಯತ್ನ ನಿಮ್ಮಂತಹವರಿಂದ ಆಗಬೇಕೆಂದು ಹೇಳಬಯಸುತ್ತೇನೆ.

ಮತ್ತೊಂದು ವಿಷಯದ ಬಗ್ಗೆ ಬಹಳ ವ್ಯಾಪಕವಾಗಿ ಪತ್ರಿಕೆಯವರು ಸಹ ಬರೆದರು. ಜನಸಾಮಾನ್ಯರು ಮತ್ತು ಈ ಸಭೆಯಲ್ಲಿ ವರ್ಗಾವರ್ಗಿಯಲ್ಲಿ ಏನೋ ಈ ರಾಜ್ಯದಲ್ಲಿ ಬಹಳ ಅನ್ಯಾಯ ನಡೆದಿದೆ, ವರ್ಗಾವರ್ಗಿಯಿಂದ ಬಹಳ ಅನ್ಯಾಯವಾಗಿದೆ, ವರ್ಗಾವರ್ಗಿ ಜಾಸ್ತಿಯಾಗಿದೆ ಅದರಲ್ಲಿ ಏನೋ ನಡೆದಿದೆ ಎಂದು, ಕೆಲವರು ಎಲ್ಲಿಯವರೆಗೆ ಹೋಗಿ ಹೇಳಿದ್ದಾರೆಂದರೆ ವರ್ಗಾವರ್ಗಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಮಟ್ಟದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ನಿಮ್ಮ ಅನಿಸಿಕೆಗೆ ನನ್ನ ವಿರೋಧವಿಲ್ಲ. ಆದರೆ ಹೇಳತಕ್ಕ ಹಿನ್ನೆಲೆಯಲ್ಲಿ ಸ್ವಲ್ಪಮಟ್ಟಿಗೆ ಆದರೂ ಆಳತೆಗೋಲಿರಬೇಕು, ಪೂರ್ಣವಾದ ಮಾಹಿತಿ ನಿಮ್ಮ ವಾದದಲ್ಲಿರಬೇಕು ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ. ವರ್ಗಾವರ್ಗಿಯಲ್ಲಿ ಅದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ ನಾವು ಹೆಚ್ಚು ವರ್ಗಾವಣೆಯನ್ನು ಮಾಡಲಿಲ್ಲ. ಆಗೆತ್ಯಕಿಂತ ಒಂದನ್ನೂ ಸಹ ಹೆಚ್ಚಿಗೆ ಮಾಡಲಿಲ್ಲ. ಕಳೆದಸಾರಿ ಮಾಡಿದ್ದಕ್ಕಿಂತಲೂ ನಾವು ಬಹಳ ಕಡಿಮೆ ಮಾಡಿದ್ದೇವೆ ಮತ್ತು ಯಾರನ್ನು ಎಲ್ಲಿಂದ ತೆಗೆಯಬೇಕು ಎಂಬುದನು ನೋಡಿ, ಅವರು ಇರತಕ್ಕ ಲಾಂಗ್ ಸ್ಟ್ಯಾಂಡಿಗ್ ಮತ್ತು ಅವರು ಯಾವರೀತಿ ಕೆಲಸ ಮಾಡಿದ್ದಾರೆ ಅದನ್ನೆಲ್ಲ ನೋಡಿಕೊಂಡು ವರ್ಗಾವಣೆ ಮಾಡಿದ್ದೇವೆ. ಆದರೆ ಒಂದೆರಡು ತಪ್ಪಾಗಿದ್ದರೂ ಅದನ್ನು ಸರಿಪಡಿಸುವುದಕ್ಕೆ ಬದ್ಧರಾಗಿದ್ದೇವೆ. ಆದರೆ ಇದು ಒಂದು ವಿಷಯ, ಲೋಕೋಪಯೋಗಿ ಇಲಾಖೆಯಲ್ಲಿ ಭಾರಿ ಪ್ರಮಾಣದ ವರ್ಗಾವರ್ಗಿಯಾಗಿದೆ, ಎಲ್ಲ ಶಾಸಕರೂ ಕೂಡ ಈ ಹಿನ್ನಲೆಯಲ್ಲಿ ಬೆನ್ನುಹತ್ತಿದ್ದಾರೆ ಎನ್ನುವ ಈ ಮಾತು ಸರಿಯಲ್ಲ ಎಂದು ಹೇಳುವುದಕ್ಕೆ ಈ ಅಂಕಿಅಂಶಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿ, ೧೯೮೦ರಲ್ಲಿ ನಮ್ಮಲ್ಲಿ ಆಗಿರತಕ್ಕಂಥ ವರ್ಗಾವರ್ಗಿ ೨೩೭೮. ಇದರಲ್ಲಿ ೨೧ ಜನ ಎಸ್.ಇ. ಗಳನ್ನು ವರ್ಗ ಮಾಡಿದ್ದೇವೆ. ಎಕ್ಸಿಕ್ಯೂಟಿವ್ ಇಂಜಿನಿಯರ್ಸ್–೯೫ ಜನರನ್ನು ಮಾಡಿದ್ದೇವೆ. ಎ.ಇ.ಇ. ಗಳು ೫೩೮, ಎ.ಇ. ೧೧೮೯ ಮತ್ತು ಸಿ ಗ್ರೂಪ್‌ನಲ್ಲಿ ೧೪೫೨, ಡಿ ಗ್ರೂಪ್‌ನಲ್ಲಿ ೮೩– ಹೀಗೆ ಒಟ್ಟು ೨೩೭೮ ಜನರನ್ನು ಈ ಸಾರಿ ನಾವು ವರ್ಗಾವರ್ಗಿ ಮಾಡಿರತಕ್ಕದ್ದು. ಮತ್ತು ೧೯೮೮ರಲ್ಲಿ ಎಷ್ಟು ಆಗಿತ್ತು ಎನ್ನುವುದು ಕೂಡ ನಾವು ಸಮೀಕ್ಷೆ ಮಾಡಬೇಕು. ೧೯೮೮ರಲ್ಲಿ ಎಸ್.ಇ. ಗಳ ಪೈಕಿ ೪೧ ಜನರನ್ನು ಮಾಡಿದ್ದಾರೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ೯೭, ಎ.ಇ.ಇ. ೬೫೬, ಎ.ಇ. ೧೧೯೩ ಜನರನ್ನು ಮಾಡಿದ್ದಾರೆ. 'ಸಿ' ಗ್ರೂಪ್ ೧೧೪೮, 'ಡಿ' ಗ್ರೂಪ್ ೫೧– ಒಟ್ಟು ೩೧೮೬ ಜನರನ್ನು ವರ್ಗಾವರ್ಗಿ ಮಾಡಿದ್ದಾರೆ. ಇದರಲ್ಲಿ ನಾವು ೨೩೭೮ನ್ನು ಒಂದೇ ಲಾಟ್‌ನಲ್ಲಿ ಮಾಡಿದ್ದೇವೆ. ಜೂನ್ ನಂತರ ವರ್ಗಾವರ್ಗಿ ಮಾಡಿದರೆ ಅಧಿಕಾರಿಗಳಿಗೆ ಮತ್ತು ಸರ್ಕಾರಿ ಕೆಲಸಗಳಿಗೆ ಅನಾನುಕೂಲವಾಗುತ್ತದೆ ಎಂದು ಈ ಹಿನ್ನಲೆಯಲ್ಲಿ ಒಂದೇ ಸಾರಿ ವರ್ಗ ಮಾಡಿದ್ದೇವೆ. ಆದರೆ ೧೯೮೮ರಲ್ಲಿ ಮಾಡಿರತಕ್ಕ ವರ್ಗಾವರ್ಗಿ ವಿವರವನ್ನು ಸಭೆಗೆ ಕೊಡತಕ್ಕದ್ದು ಸೂಕ್ತವೆಂದು ನಾನು ಭಾವಿಸುತ್ತೇನೆ. ೩೦–೬–೮೮ರಲ್ಲಿ ಎ.ಇ.ಇ.ಗಳು ೪೧, ೩–೮–೮೮ರಲ್ಲಿ ೧೩೦, ೫–೮–೮೮ ರಲ್ಲಿ ೫೩, ೧೨–೮–೮೮ರಲ್ಲಿ ೨೮, ೩೧–೮–೮೮ರಲ್ಲಿ ೧೦೪, ೮೮ರ ಡಿಸೆಂಬರ್‌ನಲ್ಲಿ ೨೩– ಈ ಪ್ರಕಾರ ಏಪ್ರಿಲ್‌ನಿಂದ ಹಿಡಿದು ಡಿಸೆಂಬರ್‌ವರೆಗೆ ಮಾಡಿದ್ದಾರೆ. ಎಸ್.ಸಿ.ಗಳನ್ನು ಮೇ ನಿಂದ ಹಿಡಿದು ಆಕ್ಟೋಬರ್ ವರೆಗೆ ಮಾಡಿದ್ದರೆ ಹೀಗೆ ಹಂತಹಂತವಾಗಿ ಮೇ ಯಿಂದ ಡಿಸೆಂಬರ್‌ವರೆಗೆ ಅನುಕೂಲಕ್ಕೆ ಕಂಡುಬಂದಹಾಗೆ ಮಾಡಿಕೊಂಡು ಹೋಗಿದ್ದಾರೆ. ಆದರೆ ನಾವು ನಮ್ಮ ಇಲಾಖೆಯ ಕೆಲಸ ಮತ್ತು ಅಧಿಕಾರಿಗಳಿಗೆ ಆಗಿರತಕ್ಕಂಥ ಅನಾನುಕೂಲತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸ ಮಾಡಿದ್ದೇವೆ. ಇದರಲ್ಲಿ ಒಂದು ಮಾತು ಹೇಳುತ್ತೇನೆ. ಯಾವುದೇ

ಭ್ರಷ್ಟಾಚಾರ ಇದರಲ್ಲಿ ನಡೆದಿಲ್ಲ. ನಾನು ಈ ವಿಚಾರವನ್ನು ಖಂಡತುಂಡವಾಗಿ ಈ ಸಮಯದಲ್ಲಿ ತಿಳಿಸ ಬಯಸುತ್ತೇನೆ. ಯಾವುದಾದರೂ ಒಂದು ನಿದರ್ಶನಗಳು ಇದ್ದರೆ ಅದನ್ನು ಸ್ಪಷ್ಟಪಡಿಸಿದ್ದಲ್ಲಿ ನಾನು ತಿದ್ದಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ ಎಂಬ ಮಾತನ್ನು ಹೇಳಬಯಸುತ್ತೇನೆ. ಬಹುಶಃ ಇಷ್ಟು ಹೇಳುವುದರ ಮೂಲಕ, ನನಗೆ ಸೂಕ್ತ ಸಲಹೆಗಳನ್ನು ಕೊಟ್ಟು ಹೆಚ್ಚಾಗಿ ಈ ಚರ್ಚೆಯಲ್ಲಿ ಭಾಗವಹಿಸಿ ಇದು ಫಲಕಾರಿಯಾಗುವಂತೆ ನಡೆದುಕೊಂಡ ಎಲ್ಲ ಸದಸ್ಯರಿಗೆ ನಾನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಸದಾನಂದಸ್ವಾಮಿ ಕಮೀಷನ್ ವರದಿಯನ್ನು ಇದೇ ಸದನದಲ್ಲಿ ಮಂಡಿಸಿದ್ದೀರಿ. ಅದರೆ ಏನು ಕ್ರಮ ತೆಗೆದ‍ಕೊಳ್ಳಲಾಗಿದೆ ಎಂಬುದು ಹೇಳಿಲ್ಲ. ಬರೇ ಸಮಿತಿ ವರದಿಯನ್ನು ಮಂಡನೆ ಮಾಡಿದರೆ ಆಯಿತೇನು ? ಈ ಬಗ್ಗೆ ತಾವು ತೆಗೆದುಕೊಂಡಿರತಕ್ಕ ಕ್ರಮಗಳು ಏನು ? ಅವರು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳು ಈಗ ನೌಕರಿಯಲ್ಲಿ ಇರಲಿ, ಇಲ್ಲವೇ ನಿವೃತ್ತಿಯಾಗಿರಲಿ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ದಿಷ್ಟವಾಗಿ ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು? ಈ ವರದಿಯನ್ನು ಒಪ್ಪಿಕೊಂಡಿದ್ದರೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮಗಳು ಏನು ? ಕಾವೇರಿ ಜಲಾಯನದ ಬಗ್ಗೆ ಟ್ರಿಬ್ಯುನಲ್ ರಚನೆ ಆಗುವುದಕ್ಕೆ ಮುನ್ನ ಬೇಕಾದಂಥ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಸದನದ ಸಮಿತಿಯನ್ನು ನೇಮಕ ಮಾಡಿದ್ದೀರಿ ಇದರ ಬಗ್ಗೆ ನಾವು ಪ್ರಸ್ತಾವ ಮಾಡಲಿಲ್ಲ. ಈ ಸಮಿತಿ ಇದುವರೆಗೆ ಸಭೆ ಸೇರುವುದಕ್ಕೆ ಸಾಧ್ಯ ಆಗಲಿಲ್ಲ. ಈ ಅಧಿವೇಶನ ಮುಗಿದ ಮೇಲಾದರೂ ತಕ್ಷಣ ಒಂದು ಸಭೆ ಕರೆದು, ಚರ್ಚೆ ಮಾಡುವುದಕ್ಕೆ ಏನಾದರೂ ಅಲೋಚನೆ ಮಾಡಿದ್ದೀರಾ ? ಮತ್ತೊಂದು ಮುಖ್ಯವಾದ ವಿಚಾರ ಏನೆಂದರೆ, ಜಿಲ್ಲಾಪರಿಷತ್ತಿಗೆ ಬಹುತೇಕ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ವರ್ಗಾವಣೆಯಾದ ಮೇಲೆ ಬೇರೆ ಬೇರೆ ಹಂತದಲ್ಲಿ ಸಬ್ ಡಿವಿಜನ್‌ಗಳನ್ನು ಮಾಡಿದ್ದೀರಿ. ಕೆಲವು ತಾಲ್ಲೂಕುಗಳನ್ನು ಆ ಕಡೆ ಈ ಕಡೆ ಸೇರಿಸಿ ಮಾಡಿದ್ದೀರಿ. ಇದನ್ನು ಮಾಡುವಾಗ, ತಾವು ಹಾಕಿಕೊಂಡಿರತಕ್ಕ ಕ್ರೈಟೀರಿಯಾ ಏನು ? ಈಗ ಇದು ಸರಿಯಾಗಿಲ್ಲವೆಂದು ಕಂಡು ಬಂದರೆ ಬದಲಾಯಿಸುವ ಪ್ರಯತ್ನವನ್ನು ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ವಿರೋಧಪಕ್ಷದ ನಾಯಕರ ಪ್ರಶ್ನೆಗೆ ಉತ್ತರವಾಗಿ. ಸದಾನಂದಸ್ವಾಮಿಯವರ ವಿಚಾರಣಾ ವರದಿಯನ್ನು ಸರ್ಕಾರ ಈಗಾಗಲೇ ಒಪ್ಪಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅದರ ಶಿಫಾರಸ್ಸುಗಳನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಮತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ರಾಜ್ಯದ ಹಿರಿಯ ಅಧಿಕಾರಿಗಳ ಸಮಿತಿಯನ್ನು ಮಾಡಲಾಗಿದೆ. ಈ ಸಮಿತಿ ಈಗಾಗಲೇ ಕ್ರಮ ಕೈಗೊಂಡಿದೆ ಎಂದು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಕೈಗೊಂಡಿರುವ ಕ್ರಮಗಳನ್ನು ಶೀಘ್ರದಲ್ಲಿಯೇ ಈ ಸದನಕ್ಕೆ ತಿಳಿಸಬಯಸುತ್ತೇನೆ ಎನ್ನುವುದನ್ನು ಹೇಳಬಯಸುತ್ತೇನೆ. ಕಾವೇರಿ ನೀರಿನ ಬಗ್ಗೆ ಸದನದ ಸಮಿತಿಯನ್ನು ಈಗಾಗಲೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚನೆ ಮಾಡಲಾಗಿದೆ ಎಂದು ತಿಳಿಯಬಯಸುತ್ತೇನೆ. ಈ ಸಮಿತಿಯ ಸಭೆಯು ಈ ತಿಂಗಳು ಅಸೆಂಬ್ಲಿ ಕಳೆದ ಮರುದಿನವೇ......

ಶ್ರೀ ವೀರೇಂದ್ರಪಾಟೀಲ್.—ನಾವು ಈ ವಿಚಾರದಲ್ಲಿ ಈಗಾಗಲೇ ನಿರ್ಣಯ ಮಾಡಿದ್ದೇವೆ. ೧೩ನೇ ತಾರೀಖು ಸಾಯಂಕಾಲ ಈ ಸಮಿತಿಯ ಸಭೆ ಸೇರುತ್ತದೆ. ನಾನು ಈ ವಿಷಯವನ್ನು ಮಾನ್ಯ ವೀರಪ್ಪ ಮೊಯ್ಲಿಯವರಿಗೂ ಹೇಳಿದ್ದೇನೆ. ಈ ಸಮಿತಿಯು ಮೊದಲನೇ ಸಲ ಸೇರುವುದರಿಂದ, ಟೆಕ್ನಿಕಲ್ ಸೆಲ್‌ನ ಸದಸ್ಯರನ್ನೂ ಹಾಗೂ ಲೀಗಲ್ ಸೆಲ್‌ನ ಸದಸ್ಯರನ್ನೂ ಬರಮಾಡಿಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ಈ ಸಮಿತಿಯು ಮುಂದೆ ಯಾವರೀತಿ ಕೆಲಸ ಮಾಡಬೇಕೆಂಬ ವಿಚಾರವನ್ನು ಸದಸ್ಯರಿಗೆ ಸ್ಪಷ್ಟಮಾಡಬೇಕಾದ ಮುನ್ನ, ಈ ಎರಡು ಸೆಲ್‌ಗಳ ಸದಸ್ಯರೂ ಇರಬೇಕೆಂದು ಹೇಳಿದ್ದೇನೆ. ೧೩ನೇ ತಾರೀಖು ಸಾಯಂಕಾಲ ಕೃಷ್ಣಾದಲ್ಲಿ ಸಭೆ ಸೇರುತ್ತದೆ. ಇಷ್ಟರಲ್ಲೇ ತಮಗೆ ನೋಟೀಸ್‌ಗಳು ಬರುತ್ತದೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಜಿಲ್ಲಾಪರಿಷತ್ ಬಂದಮೇಲೆ, ಮಾಡಿರತಕ್ಕ ಸಬ್ ಡಿವಿಜನ್‌ಗಳಲ್ಲಿ ಸ್ವಲ್ಪ ದೋಷವಿದೆಯೆಂದು ಹೇಳಿದ್ದಾರೆ. ಇದು ಸರ್ಕಾರದ ಗಮನಕ್ಕೂ ಬಂದಿದೆ, ಇದನ್ನು ಸರಿಪಡಿಸುವುದಕ್ಕೆ ತಕ್ಕ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ನಾನು ಮಾತನಾಡಿರತಕ್ಕ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬರಕಾಮಗಾರಿ ಕೆಲಸದಲ್ಲಿ ಬಹಳ ಅಕ್ರಮಗಳು ನಡೆದಿದೆಯೆಂದೂ ಇದರ ಬಗ್ಗೆ ವಿಚಾರಣೆ ನಡೆಸಬೇಕೆಂದೂ ಕೇಳಿದ್ದೆ. ಇದರ ಬಗ್ಗೆ ಇನ್ನೂ ಕೆಲವು ಸದಸ್ಯರೂ ಕೂಡ ಹೇಳಿದ್ದರು. ಈ ವಿಚಾರದಲ್ಲಿ ವಿಚಾರಣೆ ನಡೆಸುವುದಕ್ಕೆ ಸರ್ಕಾರದವರು ಸಿದ್ಧರಿದ್ದೀರಾ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ನನಗೆ ತಿಳಿದಿರುವ ಮಟ್ಟಿಗೆ ಕಾವೇರಿ ನದಿ ವ್ಯವಹಾರದಲ್ಲಿ ರಚನೆ ಮಾಡಿರತಕ್ಕ ಟ್ರಿಬ್ಯುನಲ್‌ಗೆ, ಕೇಂದ್ರಸರ್ಕಾರ ಈಗಾಗಲೇ ಒಂದು ನೋಟಿಫಿಕೇಷನ್ ಹೊರಡಿಸಿ, ಟರ್ಮ್ಸ್ ಆಫ್ ರೆಫರನ್ಸ್ ನಿಗದಿಪಡಿಸಿದ್ದಾರೆಂದು ಕೇಳಿದ್ದೇನೆ. ಇದು ನಿಜವೇ ಅಥವಾ ಅಲ್ಲವೇ ಎಂಬುದನ್ನು ತಿಳಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಹಾಗೆಯೇ ಹೊಳೆನರಸೀಪುರ ತಾಲ್ಲೂಕಿನಲ್ಲೂ ಕಾಮಗಾರಿ ವಿಚಾರದಲ್ಲಿ ಬಹಳವಾಗಿ ಅವ್ಯವಹಾರ ನಡೆದಿವೆ ಎಂದು ಇಲ್ಲಿ ಪ್ರಸ್ತಾಪವಾಗಿದೆ. ಇದರ ಬಗ್ಗೆ ಹಾಗೂ ಬಿಜಾಪುರದಲ್ಲಿ ನಡೆದಿರುವ ಬಗ್ಗೆ, ಈ ಈ ಎರಡರ ಬಗ್ಗೆಯೂ ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಬಿಜಾಪುರ ಜಿಲ್ಲೆ ಕಾಮಗಾರಿಯಲ್ಲಿ ಅವ್ಯವಹಾರ ಆಗಿದೆ ಎನ್ನುವುದನ್ನು ಸನ್ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಮತ್ತು ಈ ವಿಚಾರದಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರೂ ಕೂಡ ಈಗಾಗಲೇ ಇದರ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಈ ವರದಿಯ ಆಧಾರದ ಮೇಲೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಶೀಘ್ರದಲ್ಲಿಯೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಹೊಳೆನರಸಿಪುರ ಮತ್ತು ಚೆನ್ನರಾಯ ಪಟ್ಟಣ ಹಾಗೂ ಕೆ. ಆರ್. ಪೇಟೆ ತಾಲ್ಲೂಕುಗಳ ಬಗ್ಗೆ ನನಗೆ ಯಾವುದೇ ವಿಧವಾದ ವರದಿ ಪಿ. ಎ. ಸಿ. ಯಿಂದ ಅಥವಾ ಬೇರೆ ಕಡೆಯಿಂದ ಬಂದಿಲ್ಲ. ಇದರ ಬಗ್ಗೆ ಸದಸ್ಯರ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಪರಿಶೀಲಿಸಿ ನಂತರ ಏನು ಮಾಡಬೇಕೆಂಬುದರ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇನೆ...

ಶ್ರೀ ಪಿ. ಎಸ್. ರಾಣೆ (ಕಾರವಾರ).—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಈ ನೀರಾವರಿ ಇಲಾಖೆ ಇದ್ದೂ ಇಲ್ಲದಂತಾಗಿದೆ. ಕಾರಣ ಏನೆಂದರೆ ನಮ್ಮಲ್ಲಿ ಯಾವುದೇ ದೊಡ್ಡ ನೀರಾವರಿ ಯೋಜನೆಗಳು ಇಲ್ಲ. ಚಿಕ್ಕ ನೀರಾವರಿ ಯೋಜನೆಗಳಲ್ಲಿ ಅತೀ ಚಿಕ್ಕ ನೀರಾವರಿ ಯೋಜನೆಗಳು ಮಾತ್ರ ಇವೆ. ಅದರೆ ಕರಾವಳಿಯ ಐದು ತಾಲ್ಲೂಕುಗಳಲ್ಲಿ ಅಪಾರವಾದ ಗಜನಿ ಭೂಮಿ ಇದೆ. ಕಳೆದ ಐದಾರು ವರ್ಷಗಳಿಂದ ಸರಿಯಾದ ನಿರ್ವಹಣೆ ಆಗದಿರುವುದರಿಂದ ಗಜನಿ ಭೂಮಿ ಎಲ್ಲಾ ಹಾಳಾಗಿ ಹೋಗಿದೆ. ಮಹಾರಾಷ್ಟ್ರದ ಮಾದರಿಯಲ್ಲಿ ಗಜನಿ ಭೂಮಿಗಳ ಅಭಿವೃದ್ಧಿಗಾಗಿ ಒಂದು ಬೇರೆಯಾದ ಮಂಡಲಿಯನ್ನು ರಚಿಸಿ ಅದರ ಅಭಿವೃದ್ಧಿಗೆ ವಿಶೇಷ ಗಮನವನ್ನು ಕೊಡುವಂತೆ ಸರಕಾರದವರು ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಗಜನಿ ಭೂಮಿಯ ಅಭಿವೃದ್ಧಿಗೆ ನೀರಾವರಿ ಇಲಾಖೆಯು ಒಂದು ರೂಲ್ಸ್ ಪ್ರಕಾರ ಹಾಗೂ ನಾರ್ಮ್ಸ್ ಪ್ರಕಾರ ಹಣವನ್ನು ಒದಗಿಸಿದರೆ ಅದನ್ನು ಸರಿಯಾದ ನಿರ್ವಹಣೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಆದ್ದರಿಂದ ಮಹಾರಾಷ್ಟ್ರ ಮಾದರಿಯಲ್ಲಿ ಗಜನಿ ಭೂಮಿಯ ಅಭಿವೃದ್ಧಿಗಾಗಿ ವಿಶೇಷ ಕ್ರಮ ಕೈಗೊಳ್ಳುತ್ತೀರಾ ಎಂಬುದನ್ನು ತಿಳಿಯ ಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಇದರ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಬಸವನಗೌಡ, ಸೋಮನಗೌಡಪಾಟೀಲ್ (ಬಸವನಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಬಸವನಬಾಗೇವಾಡಿ ತಾಲ್ಲೂಕಿನ ಲಕ್ಷಾಂತರ ಎಕರೆ ಫಲವತ್ತಾದ ಭೂಮಿ ನೀರಿನಲ್ಲಿ ಮುಳುಗಿ ಆ ಜನ ನಿರ್ಗತಿಕರಾಗಿದ್ದಾರೆ. ಅಣೆಕಟ್ಟಿನ ಕೆಲಸ ಕೂಡಾ ಮುಗಿದಿಲ್ಲ. ಆ ಜನರಿಗೆ ಬೇರೆ ನೀರಾವರಿ ಸೌಲಭ್ಯ ಇಲ್ಲ. ಜನರಿಗೆ ಏನಾದರೂ ಒಂದು ಆಸೆ ಇದ್ದರೆ ಅದು ಮುಳುವಾದ ಏತ ನೀರಾವರಿ ಯೋಜನೆ ಈ ಮುಳುವಾದ ಏತ ನೀರಾವರಿ ಯೋಜನೆ ಆದರೆ ಬಿಜಾಪುರ, ಬಸವನಬಾಗೇವಾಡಿ, ಮುದ್ದೇಬಿಹಾಳ ತಾಲ್ಲೂಕುಗಳ ನಾಲ್ಕೈದು ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಇದನ್ನು ನಾವು ಬಹಳಷ್ಟು ಸಲ ಸರಕಾರದ ಗಮನಕ್ಕೆ ತಂದಿದ್ದೇವೆ. ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಮಾನ್ಯ ರಾಮಕೃಷ್ಣ ಹೆಗಡೆಯವರು ಅನೇಕ ಅಡಿಗಲ್ಲನ್ನು ಇಟ್ಟರು ಅದರ ಬಗ್ಗೆ ಸರಕಾರ ಯಾವ ಕ್ರಮವನ್ನೂ ತೆಗೆದುಕೊಂಡಿದೆ. ಮುಳುವಾದ

ಏತ ನೀರಾವರಿ ಯೋಜನೆಯನ್ನು ಮಾಡಬೇಕೆಂಬ ವಿಚಾರ ಸರಕಾರದ ಗಮನದಲ್ಲಿದೆಯೋ ಹೇಗೆ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ವಿಚಾರ ಹೇಳಿ ನಮ್ಮ ಬಿಜಾಪುರ ಜಿಲ್ಲೆಯ ಜನರ ಬಹು ದಿವಸದ ಕನಸು ನನಸಾಗುವ ಹಾಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮುಳವಾಡ ಏತ ನೀರಾವರಿ ಯೋಜನೆ ಮೊದಲನೇ ಘಟ್ಟದ ಮೂರನೆ ಯೋಜನೆಯಲ್ಲಿ ಅಡಗಿದೆ. ಈಗ ಈ ಯೋಜನೆಯು ಎರಡನೇ ಹಂತದಲ್ಲಿದ್ದೇವೆ. ಎರಡನೇ ಹಂತ ೧೯೯೩ನೇ ಇಸವಿಗೆ ಮುಗಿಯುತ್ತದೆ. ಜಾಗತೀಕ ಬ್ಯಾಂಕ್‌ನವರು ನಮಗೆ ನೆರವು ಕೊಟ್ಟಿದ್ದಾರೆ. ಮುಳವಾಡ ಯೋಜನೆಯನ್ನು ನಂತರ ಕೈಗೊಳ್ಳಬೇಕಾಗುತ್ತದೆ. ಅದನ್ನು ಪರಿಶೀಲಿಸಲಾಗುವುದು.

†ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶವಾಗಲಿಲ್ಲ. ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುವುದು ನನ್ನ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಪಿ. ಡಬ್ಲ್ಯು. ಡಿ. ಇಲಾಖೆಯು ಇದೆಯೋ ಇಲ್ಲವೋ ಎಂಬ ಸಂಶಯ ನಮಗೆ ಇತ್ತು. ಆದರೆ ತಾವು ಬಂದ ಮೇಲೆ ತಮ್ಮ ಸರಕಾರದಲ್ಲಿ ಈ ಇಲಾಖೆ ಕೆಲಸ ಮಾಡುವುದಕ್ಕೆ ಪ್ರಾರಂಭವಾಗಿದೆ. ನಿಮ್ಮ ಕಾಲದಲಾದರೂ ಒಳ್ಳೆಯ ಕೆಲಸ ಮಾಡುತ್ತೀರಿ ಎಂಬ ವಿಶ್ವಾಸ ನಿಮ್ಮ ಬಗ್ಗೆ ನನಗೆ ಇದೆ. ನನ್ನ ತಾಲ್ಲೂಕಿನ ದೃಷ್ಟಿಯಿಂದ ಎರಡು ಸಂಗತಿ ಹೇಳುತ್ತೇನೆ. ತಾವು ಮಂತ್ರಿಗಳಾದ ತಕ್ಷಣ ತಮ್ಮಲ್ಲಿ ಒಂದು ವಿನಂತಿ ಮಾಡಿದೆ. ಏನೆಂದರೆ, ಮೂರು ನಾಲ್ಕು ಸಾವಿರ ಬಡ ಕುಟುಂಬಗಳಿಗೆ ನೆರವಾಗುವ ಸನ್ಯಾಸಿಕೊಪ್ಪ ಲಿಫ್ಟ್ ಈರಿಗೇಷನ್ ಸ್ಕೀಮ್ ಬಗ್ಗೆ ೪-೫ ವರ್ಷದ ಹಿಂದೆ ಎಸ್ಟಿಮೇಟ್, ಪ್ಲಾನ್ ಆಗಿ ಅದು ಹಾಗೇ ಉಳಿದುಕೊಂಡು ಬಿದ್ದಿದೆ. ಅದರ ಬಗ್ಗೆ ತಾವು ಉತ್ತರ ಕಳುಹಿಸಿದ್ದೀರಿ. ಈ ವರ್ಷ ಪ್ರಾರಂಭ ಮಾಡುತ್ತೇನೆಂದು ಹೇಳಿದ್ದೀರಿ. ಈ ವರ್ಷವೇ ಅದು ಪ್ರಾರಂಭವಾಗುವಂತೆ ನೋಡಿಕೊಳ್ಳಬೇಕೆಂದು ಕೇಳುತ್ತೇನೆ. ಅದು ಕೇವಲ ೨೫-೩೦ ಲಕ್ಷ ರೂಪಾಯಿನ ಯೋಜನೆಯಾಗಿರುವ ಕಾರಣ ಅದನ್ನು ತೆಗೆದುಕೊಳ್ಳಬೇಕು. ಇನ್ನು ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ವರ್ಲ್ಡ್ ಬ್ಯಾಂಕ್ ಯೋಜನೆಯಿಂದ ಕಲ್ಲುವೊಡ್ಡು ಯೋಜನೆ ಪ್ರಾರಂಭವಾಗಬೇಕೆಂದು ಮಂಜೂರಾಗಿದೆ. ಅದಕ್ಕೆ ಒಂದು ಸಬ್ ಡಿವಿಜನ್ ಪ್ರಾರಂಭವಾಗಿ ೧೫-೨೦ ಲಕ್ಷ ರೂಪಾಯಿಗಳನ್ನೂ ಸಹ ಖರ್ಚು ಮಾಡಿದ್ದಾರೆ. ಆದರೆ ಬೇರೆ ಬೇರೆ ರಾಜಕೀಯ ಗೊಂದಲಗಳ ಕಾರಣದಿಂದ ಆ ಕೆಲಸ ನಿಂತಿದೆ. ಅದನ್ನು ಮತ್ತೆ ಪ್ರಾರಂಭ ಮಾಡಬೇಕಾಗಿದೆ. ಆ ಯೋಜನೆಯನ್ನು ಮಂಜೂರಾತಿ ಮಾಡಿಕೊಡಬೇಕು. ಅಲ್ಲಿ ಕಡಿಮೆ ಕಾಡು ಹೋಗುತ್ತದೆ. ದೊಡ್ಡ ಪ್ರಮಾಣದಲ್ಲಿ ರೈತರಿಗೆ ಅನುಕೂಲವಾಗುತ್ತದೆ. ಅದು ಬರಗಾಲ ಪ್ರದೇಶವಾಗಿದ್ದು, ಇದನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಕಳೆದ ೪-೫ ವರ್ಷಗಳಿಂದ ನನ್ನ ತಾಲ್ಲೂಕಿನಲ್ಲಿ ಬೇರೆ ಬೇರೆ ಕಾರಣಗಳಿಗೋಸ್ಕರ ರಸ್ತೆ ಕೆಲಸ ನಿಂತು ಹೋಗಿದೆ. ಕಳೆದ ೪-೫ ವರ್ಷಗಳಲ್ಲಿ ರಸ್ತೆ ಕೆಲಸ ಆಗದಿರುವ ತಾಲ್ಲೂಕುಗಳಲ್ಲಿ ನನ್ನದೂ ಒಂದು. ಬೇಕಾದರೆ ತಾವು ತರಿಸಿ ನೋಡಿ. ನನ್ನ ತಾಲ್ಲೂಕಿನಲ್ಲಿ ರಸ್ತೆ ಕೆಲಸ ಆಗದಿರುವುದು ತಮಗೆ ಮನದಟ್ಟಾದರೆ, ಹೆಚ್ಚು ಹಾಳಾಗಿರುವ ರಸ್ತೆಗಳನ್ನು ಹೆಚ್ಚು ಹಣ ಕೊಟ್ಟು ಆದ್ಯತೆ ಮೇಲೆ ಕೆಲಸ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ ಸನ್ಯಾಸಿಕೊಪ್ಪ ಏತ ನೀರಾವರಿ ಬಗ್ಗೆ ಅಂದಾಜು ತಯಾರು ಮಾಡಿದ್ದೇವೆ. ಆಡಳಿತಾತ್ಮಕ ಮಂಜೂರಾತಿ ದೊರೆತ ಮೇಲೆ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಆಮೇಲೆ ಕಲ್ಲು ಒಡ್ಡು ಯೋಜನೆ ಮತ್ತು ರಸ್ತೆ ಕಾಮಗಾರಿಗಳ ಬಗ್ಗೆ ಏನು ಹೇಳಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ (ಬಸವನ ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಮೂರನೇ ಹಂತದಲ್ಲಿ ಮುಳವಾಡ ಏತ ನೀರಾವರಿ ಯೋಜನೆ ಬರುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಆ ಸಮಯದ ಹೊತ್ತಿಗೆ ಆ ಸ್ಥಳ ನೀರಿನಲ್ಲಿ ಮುಳುಗಡೆ ಹೊಂದಿ, ಅಲ್ಲಿ ಕೆಲಸಕ್ಕೆ ತೊಂದರೆಯಾಗುತ್ತದೆ. ಇದು ಬಿಜಾಪುರ ಜಿಲ್ಲೆಗೆ ಒಂದು ಕಾಮಧೇನು ಕಲ್ಪವೃಕ್ಷವಿದ್ದಂತೆ. ಈ ಯೋಜನೆಯನ್ನು ತೀವ್ರಗತಿಯಲ್ಲಿ ಮಾಡಿದರೆ ಅನುಕೂಲವಾಗುತ್ತದೆ, ಮೂರನೇ ಹಂತದಲ್ಲಿ ಇದನ್ನು ಪ್ರಾರಂಭ ಮಾಡುವುದಾದರೆ ಆ ಜಾಗ ಮುಳುಗಡೆಯಾಗುತ್ತದೆ. ಈ ಬಗ್ಗೆ ಅಲ್ಲಿನ ರೈತರಿಗೆ ಪರಿಹಾರ ಏನು ಕೊಡುತ್ತೀರಿ? ಈ ಬಗ್ಗೆ ಉತ್ತರಹೇಳಬೇಕು.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಆ ಜಾಗದಲ್ಲಿ ಈ ಯೋಜನೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ಈಗಾಗಲೇ ಕ್ರಮ-ಕೈಗೊಳ್ಳಲಾಗಿದೆ.

ಶ್ರೀ ರಂಗದೇವರಾಯಲು.—ಮಾನ್ಯ ಅಧ್ಯಕ್ಷರೇ, ನಾನು ತುಂಗಭದ್ರಾ ಎಡ ದಂಡೆ ಕಾಲುವೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯಮಂತ್ರಿಗಳಿಂದ ಉತ್ತರಬರಲಿಲ್ಲ, ತುಂಗಭದ್ರಾ ಎಡದಂಡೆ ಕಾಲುವೆಯು ಸುಮಾರು ೨೫೦ ಕಿಲೋ ಮೀಟರ್‌ಗಳು ಇದೆ. ಅಲ್ಲಿ ಮುಖ್ಯವಾಗಿ ೩೧ನೇ ಡಿಸ್ಟ್ರಿಬ್ಯೂಟರ್ ೫೦-೬೦ ಕಿಲೋಮೀಟರ್ ಇದ್ದು ಸಬ್ ಡಿಸ್ಟ್ರಿಬ್ಯೂಟರ್ಸ್ ಸೇರಿದರೆ ನೂರಾರು ಕಿಲೋಮೀಟರ್ಸ್ ಆಗುತ್ತದೆ. ಆ ಭಾಗದ ರಸ್ತೆಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಏನೂ ಹೇಳಲಿಲ್ಲ. ಆಮೇಲೆ ವಿಜಯನಗರದ ಅಣೆಕಟ್ಟುಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ ಆ ಬಗ್ಗೆ ಸಹ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಈ ಎಲ್ಲದರ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ವಿಜಯನಗರದ ಅಣೆಕಟ್ಟುಗಳ ಬಗ್ಗೆ ಮತ್ತು ತುಂಗಭದ್ರಾ ಎಡದಂಡೆ ನಾಲೆಯ ೫೪ನೇ ಕಿಲೋಮೀಟರ್ ಮತ್ತು ೭ ಉಪ ನಾಲೆಗಳನ್ನು ಆಧುನೀಕರಣ ಮಾಡತಕ್ಕಂಥದ್ದರ ಬಗ್ಗೆ ಹೇಳುವುದಾದರೆ ನಾವು ಕೇಂದ್ರ ಸರ್ಕಾರದ ಅಂತರ ಜಲ ಯೋಜನೆಯಡಿಯಲ್ಲಿ ಜಾಗೃತಿಕ ಬ್ಯಾಂಕ್‌ಗೆ ರೆಕಾರ್ಡ್‌ಗಳನ್ನು ಕೊಟ್ಟಿದ್ದೇವೆ. ಈಗ ಒಂದೆರಡು ಯೋಜನೆಗಳು ಮಂಜೂರಾಗಿವೆ. ಮತ್ತು ಕೆಲವೊಂದು ಯೋಜನೆಗಳು ಮಂಜೂರಾಗುವ ಹಂತದಲ್ಲಿ ಇವೆ. ಮಂಜೂರಾದ ತಕ್ಷಣ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೇ ತುಂಗ ಮೇಲ್ದಂಡೆ ಯೋಜನೆ ಬಗ್ಗೆ ನಾವು ಇಲ್ಲಿ ಅನೇಕಸಲ ಪ್ರಸ್ತಾಪ ಮಾಡುತ್ತಿದ್ದೇವೆ. ಈ ವಿಷಯವನ್ನು ಮಾನ್ಯಮುಖ್ಯಮಂತ್ರಿಗಳ ಗಮನಕ್ಕೆ ಮತ್ತು ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಸಹ ತಂದಿದ್ದೇವೆ ಈ ಯೋಜನೆಗೆ ಬಚಾವತ್ ಆಯೋಗದವರು ನೀರನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ಯೋಜನೆ ಕಾರ್ಯಗತವಾದರೆ ಸುಮಾರು ೨ ಲಕ್ಷ ೩ ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ಧಾರವಾಡ ಜಿಲ್ಲೆಯ ಹಿರೇಕೆರೂರ, ರಾಣೆಬೆನ್ನೂರು, ಹಾವೇರಿ ಹಾನಗಲ್‌ಗೆ ಮತ್ತು ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಹೊನ್ನಾಳಿ ಮುಂತಾದ ೬ ತಾಲ್ಲೂಕುಗಳಿಗೆ ನೀರಾವರಿಯಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಬೇಗ ಪ್ರಾರಂಭ ಮಾಡುತ್ತೀರಾ ? ಮತ್ತು ಈ ಯೋಜನೆ ಬಚಾವತ್ ಅವಾರ್ಡ್ ಪ್ರಕಾರ ನಾವು ನೀರು ಉಪಯೋಗ ಮಾಡಿಕೊಳ್ಳುವುದಕ್ಕೂ ಸಹ ಅನುಕೂಲವಾಗುತ್ತದೆ. ಈ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಸಹ ತಂದಿದ್ದೆ, ಈ ಪ್ರದೇಶ ಸತತವಾಗಿ ಬರಗಾಲ ಪ್ರದೇಶ. ಆದಷ್ಟು ಬೇಗ ಈ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಳ್ಳುವುದೇ ? ಸರ್ಕಾರ ತೀವ್ರವಾಗಿ ಈ ಸಲವೇ ಕೆಲಸ ಪ್ರಾರಂಭ ಮಾಡುವುದೇ ಎಂದು ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರು ಹೇಳಿದಹಾಗೆ ಇದು ಬಹಳ ಪ್ರಮುಖವಾದ ನೀರಾವರಿ ಯೋಜನೆ, ಬಚಾವತ್ ಅವಾರ್ಡ್ ಪ್ರಕಾರ ನಮಗೆ ಬರತಕ್ಕಂಥ ನೀರನ್ನು ಈ ಯೋಜನೆ ಮೂಲಕ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬಹುದು ಈ ಬಗ್ಗೆ ಮಾನ್ಯ ಸದಸ್ಯರು ಮತ್ತು ಆ ಭಾಗದ ರೈತರು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಅರ್ಥಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಸಹ ಸಲ್ಲಿಸಿದ್ದಾರೆ. ಅದರ ಜೊತೆಗೆ ಈ ಸದನದಲ್ಲೂ ಸಹ ಹಲವಾರು ಸಾರಿ ಪ್ರಸ್ತಾಪ ಮಾಡಿದ್ದಾರೆ. ನಾವು ಈಗಾಗಲೇ ಈ ಯೋಜನೆಯನ್ನು ತಯಾರು ಮಾಡಿ ತಾಂತ್ರಿಕ ಮಂಜೂರಾತಿಗೆ ಕಳುಹಿಸಿದ್ದೇವೆ. ತಾಂತ್ರಿಕ ಮಂಡಲಿಯನ್ನು ನಾವು ಈಗಾಗಲೇ ರಚನೆ ಮಾಡಿದ್ದೇವೆ. ಇದನ್ನು ಮೊದಲನೇ ಮೀಟಿಂಗ್‌ನಲ್ಲಿಟ್ಟು ಚರ್ಚೆ ಮಾಡಿ ಕೇಂದ್ರ ಸರ್ಕಾರದ ಅನುಮತಿಗೆ ಕಳುಹಿಸಲು ನಾವು ಬದ್ಧರಾಗಿದ್ದೇವೆ. ಈ ದಿಸೆಯಲ್ಲಿ ಪ್ರಯತ್ನ ನಡೆಸಿದ್ದೇವೆಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳ ಬಯಸುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಈಗ ಈ ಯೋಜನೆಗೆ ೫ ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಇನ್ನು ಹೆಚ್ಚು ಹಣ ಒದಗಿಸಿಕೊಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸ್ವಾಮಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂಬ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ. ಕೇಂದ್ರದಿಂದ ಅನುಮತಿ ಸಿಕ್ಕಿದ ತಕ್ಷಣ ಕೆಲಸ ಪ್ರಾರಂಭ ಮಾಡಿ ೫ ಲಕ್ಷ ಅಲ್ಲ, ೧೦ ಲಕ್ಷ ರೂಪಾಯಿಗಳಾದರೂ ಖರ್ಚು ಮಾಡಿ ಪ್ರಾರಂಭ ಮಾಡಲು ನಾವು ಬದ್ಧರಾಗಿದ್ದೇವೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ಕರ್ನಾಟಕ ರಾಜ್ಯದ ಬರಗಾಲ ಸಮಸ್ಯೆಗೂ ನೀರಾವರಿ ಮಂತ್ರಿಗಳಿಗೂ ಏನೂ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಉತ್ತರ ಬಂದಿದೆ. ಅವರು ಎಷ್ಟೇ ಪ್ರಯತ್ನ ಮಾಡಿದರೂ ಶೇಕಡ ೨೦ ಭಾಗ ನೀರಾವರಿ ಮಾಡ

೧೦-೪೫ ಎ. ಎಂ.

ಬಹುದು. ಕೇವಲ ದೊಡ್ಡ ನೀರಾವರಿ ಬಗ್ಗೆಯೇ ಮಾತನಾಡುತ್ತಿದ್ದಾಗ, ನಾನು ಬರಗಾಲ ಪೀಡಿತ ಪ್ರದೇಶದರೈತ. ಇನ್ನು ೨೦ ವರ್ಷಗಳ ಮೇಲೆ ನೀವು ನೀರು ಕೊಡುವ ಯೋಜನೆ ನನಗೆ ಅಸಂಬದ್ಧ. ನನಗೆ ಮಧ್ಯಾಹ್ನದ ಊಟ ಬೇಕು. ಅಂದರೆ ತಕ್ಷಣದಲ್ಲಿ ನೀರು ಕೊಡುವಂಥ ಯೋಜನೆಗಳನ್ನು ತಾವು ಹಾಕಿದ್ದೀರೋ ಹೇಗೆ ? ಈಗಾಗಲೇ ಬರಗಾಲದ ಲಕ್ಷಣಗಳು ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿವೆ. ಈ ಬರಗಾಲದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಏನಾದರೂ ಆಲೋಚನೆ ಮಾಡುತ್ತೀರೋ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷರೇ, ಪ್ರೊಫೆಸರ್ ನಂಜುಂಡಸ್ವಾಮಿಯವರು ಬಹಳ ಪ್ರಮುಖವಾದಂಥ ಪ್ರಶ್ನೆಯನ್ನು ಎತ್ತಿದ್ದಾರೆ. ಸ್ವಾಮಿ, ನಾವು ಎರಡು ಸವಾಲುಗಳನ್ನು ಎದುರಿಸಬೇಕಾಗಿದೆ. ಒಂದು ಸಂಪನ್ಮೂಲದ ಕೊರತೆ, ಮತ್ತೊಂದು ಇವತ್ತು ನಮ್ಮ ರಾಜ್ಯದ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಸೌಲಭ್ಯದ ಬಗ್ಗೆ ಹೇಳಬೇಕೆಂದರೆ, ಇವೊತ್ತು ಮುಂದುವರಿದ ಯೋಜನೆಗಳು ಏನಿವೆ, ವಿವಾದಗ್ರಸ್ತ ಯೋಜನೆಗಳು ಏನಿವೆ. ಅವುಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ಒಂದು ವೇಳೆ ಈ ಯೋಜನೆಗಳಿಗೆ ಹೆಚ್ಚು ಆದ್ಯತೆ ಕೊಡದಿದ್ದರೆ ನಮಗಿರತಕ್ಕಂಥ ಹಕ್ಕುಗಳನ್ನು ಕಳೆದುಕೊಳ್ಳತಕ್ಕಂಥ ಭೀತಿ ಇದೆ. ಈ ಹಿನ್ನೆಲೆಯಲ್ಲಿ ನಮ್ಮಲ್ಲಿರತಕ್ಕಂಥ ಸಂಪನ್ಮೂಲಗಳನ್ನು ಮೊದಲು ಆದ್ಯತೆ ಮೇರೆಗೆ ಅದಕ್ಕೆ ರೂಢಿಸಿ ಆ ಯೋಜನೆಗಳನ್ನು ಪೂರ್ತಿ ಮಾಡಿ, ಅದರಲ್ಲಿ ಬರತಕ್ಕಂತಾದ್ದು ನಮ್ಮ ಸರ್ಕಾರದ ಇಂಗಿತವಾಗಿದೆಯೆಂದು ನಾನು ತಿಳಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದಂತೆ ಸಣ್ಣ ಕೆರೆಗಳನ್ನು ದುರಸ್ತಿ ಮಾಡುವುದು, ಶಿಲ್ಟ್ ಅಪ್ ಆಗಿರುವುದನ್ನು ತೆಗೆಸಿ, ಅಂತರ್ಜಲ ಬಳಕೆಮಾಡತಕ್ಕಂಥಾದ್ದು ಬಹಳ ಪ್ರಾಮುಖ್ಯವಾದ ವಿಚಾರ. ಇವತ್ತು ಆ ಕೆಲಸಗಳನ್ನು ಏಕಕಾಲದಲ್ಲಿ ತೆಗೆದು ಕೊಳ್ಳುವುದಕ್ಕೆ ಹಣದ ಕೊರತೆ ಇದೆ ಎಂದು ತಮಗೆ ಹೇಳಬೇಕಾಗಿಲ್ಲ. ಈ ಮುಂದುವರಿದ ಯೋಜನೆಗಳನ್ನು, ಮೊದಲು ಪೂರ್ತಿ ಮಾಡಿ ನಂತರ ಈ ಕೆಲಸಗಳನ್ನು ಸಹ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅಪ್ಪಾಜಿ ಶಂಕರ್‌ರಾವ್ ನಾಡಗೌಡ.—ಸನ್ಮಾನ್ಯಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ಕೂಡಲಸಂಗಮದ ಬಗ್ಗೆ ಒಂದು ವಿಚಾರವನ್ನೂ ಕೂಡ ಪ್ರಸ್ತಾಪ ಮಾಡಲಿಲ್ಲ. ಒಂದೇ ಒಂದು ಧಾರ್ಮಿಕವಾದ ಸ್ಥಳ ಅಂದರೆ ಜಗಜ್ಯೋತಿ ಬಸವೇಶ್ವರನು ಐಕ್ಯವಾದಂಥ ಸ್ಥಳ ಅಂದರೆ ಕೂಡಲಸಂಗಮ ಅದು ನೀರಿನಲ್ಲಿ ಮುಳುಗಡೆಯಾಗಿ ಯಾವ ಸ್ಥಿತಿಯಾಗಿದೆಯೆಂದರೆ, ಅಲ್ಲಿ ಜಾತ್ರೆ ನಡೆಯುವಂಥ ಸಮಯದಲ್ಲಿ ಒಂದು ತೊಟ್ಟು ನೀರೂ ಕೂಡಾ ಇರುವುದಿಲ್ಲ. ಮಳೆಗಾಲದಲ್ಲಿ ಕೂಡಲ ಸಂಗಮ ನೀರಿನ ಮಧ್ಯದಲ್ಲಿರುತ್ತಾನೆ. ಒಂದು ಟೈಮ್‌ನಲ್ಲಿ ಕುಡಿಯಲಿಕ್ಕೂ ಒಂದು ತೊಟ್ಟು ನೀರು ಇರುವುದಿಲ್ಲ. ಇನ್ನೊಂದು ಸಂದರ್ಭದಲ್ಲಿ ಅಲ್ಲಿ ಹೋಗಿ ದರ್ಶನ ಮಾಡುವಂಥ ಅವಕಾಶ ಇಲ್ಲ, ಇಂಥಾ ಒಂದು ಪುಣ್ಯ ಕ್ಷೇತ್ರದ ಬಗ್ಗೆ ಸರ್ಕಾರ ಏನು ನಿಲುವು ತೆಗೆದುಕೊಂಡಿದೆಯೆಂದು ತಾವು ಸ್ಪಷ್ಟ ಪಡಿಸಬೇಕು. ಅದೂ ಅಲ್ಲದೆ ಮುಳುಗಡೆ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಕುಡಿಯುವ ನೀರು ಅಂದರೆ, ಗೊಜ್ಜು ನೀರು ಕೊಡಬೇಕಾದ ಪರಿಸ್ಥಿತಿ ಇವತ್ತು ೬೦ ಹಳ್ಳಿಗಳಿಗೆ ಬಂದಿದೆ ಅಲ್ಲಿ ಬೋರ್ ಹಾಕಿದರೆ ವಾಟರ್ ಟೇಬಲ್ ಕೂಡಾ ಇಲ್ಲ. ಎಲ್ಲಿ ನೀರು ಟ್ಯಾಪ್ ಆಗುತದೋ ಅಲ್ಲಿ ಉಪ್ಪು ನೀರು ಬರುತ್ತದೆ. ಕೃಷ್ಣಾ ದಂಡೆ ಮೇಲಿರುವ ಎಲ್ಲಾ ಹಳ್ಳಿಗಳಿಗೂ ಇರುವ ಸಮಸ್ಯೆ ಇದು. ಇದುವರೆಗೂ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ. ಮುಳುಗಡೆಯಾದಂಥ ಪ್ರದೇಶದಲ್ಲಿ ಕೋರ್ಟ್ ಡಿಕ್ರಿ ತೆಗೆದುಕೊಂಡು ಬಂದ ಮೇಲೂ ಮತ್ತು ಕೋರ್ಟ್‌ನ ಅವಾರ್ಡ್ ಆದ ಮೇಲೂ ಕೂಡ ನಮ್ಮ ಸರ್ಕಾರ ದುಡ್ಡನ್ನು ತುಂಬುತ್ತಾ ಇಲ್ಲ, ರೈತರುಗಳು ತಮ್ಮ ಜಮೀನಿನ ಬಗ್ಗೆ ಕಾಂಪನ್‌ಸೇಷನ್ ಪಡೆಯಬೇಕಾದರೆ ಸುಮಾರು ೧೪ ವರ್ಷವಾದರೂ ಇದುವರೆಗೆ ಆಗಿಲ್ಲ. ಇದರ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆಯೆಂದು ಹೇಳಬೇಕು. ಆಮೇಲೆ ಮುಳುಗಡೆಯಾದ ಪ್ರದೇಶಗಳಿಗೆ ಎಕರೆಗೆ ೨೦ ರಿಂದ ೨೫ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಅದರೆ ಮಾರ್ಕೆಟ್ ಬೆಲೆ ಎಕರೆಗೆ ೬೦ ಸಾವಿರಕ್ಕಿಂತ ಕಡಿಮೆ ಇಲ್ಲವೆಂದು ತಾವು ಮನಗಾಣಬೇಕು. ಎಲ್ಲಾ ರೀತಿಯಿಂದಲೂ ರೈತರುಗಳಿಗೆ ತೊಂದರೆಯಾಗುತ್ತಿದೆ, ಈ ಬಿಲ್‌ನ್ನು ಕೊಡುವಾಗ ಇಷ್ಟು ಪರಸೆಂಟ್ ಕ್ಲರ್ಕ್‌ಗೆ, ಇಷ್ಟು ಪರ್‌ಸೆಂಟ್ ಮೇಲೆ ಇರುವಂಥ ಅಧಿಕಾರಿಗಳಿಗೆ ಕೊಟ್ಟು ನಂತರ ರೈತನಿಗೆ ಸಿಗುವುದು ಎಷ್ಟು ಎಂದರೆ ಎಕರೆಗೆ ೧೫ ಸಾವಿರ ಮಾತ್ರ, ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂಬ ಬಗ್ಗೆ ತಾವು ಉತ್ತರ ಕೊಡ

ಬೇಕು. ಇನ್ನು ಮುಳವಾಡ ಏತನೀರಾವರಿ ಬಗ್ಗೆ ಹೇಳುವುದಾದರೆ ಸರಕಾರ ಇದರ ಬಗ್ಗೆ ಈಗಾಗಲೇ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಮೂರನೇ ಹಂತದಲ್ಲಿ ಇದನ್ನು ನಾವು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಇದನ್ನು ಮೂರನೇ ಹಂತದಲ್ಲಿ ಇದನ್ನು ಕೈಗೊಳ್ಳುವುದಕ್ಕಿಂತ ಮುಂಚೆ ಅಲ್ಲಿ ಜಾಕ್‌ವೆಲ ತೆಗೆಯುವುದಾಗಲಿ ಇಂಟೇಕ್ ಚಾನಲ್ ತೆಗೆದುಕೊಳ್ಳುವುದಾಗಲಿ, ಪಂಪಿಂಗ್ ಮಾಡುವುದಾಗಲಿ. ಇವು ಯಾವುವೂ ಸಾಧ್ಯತೆ ಇರಲಾರದ ಪರಿಸ್ಥಿತಿಯು ಇದೆ. ಆದ್ದರಿಂದ ದಯವಿಟ್ಟು ಇನಟೇಕ್ ಚಾನಲ್, ಮತ್ತು ಜಾಕ್‌ವೆಲ್ ಕೆಲಸವನ್ನಾದರೂ ಕೈಗೆತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೆ, ಮುಳವಾಡ ಏತನೀರಾವರಿ ಯೋಜನೆಯ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಜಾಕ್‌ವೆಲ್ ಮತ್ತು ಇನ್‌ಟೇಕ್ ನಾಲೆಗಳನ್ನು ಅಳವಡಿಸುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಂತೆಯೇ ಕೂಡಲ ಸಂಗಮದ ಅಭಿವೃದ್ಧಿಗೋಸ್ಕರವಾಗಿ ಅವರು ಮಾಹಿತಿಗಳನ್ನು ಕೇಳಿದ್ದಾರೆ. ಈ ಬಗ್ಗೆ ಮುದ್ದಾಳ್ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿಕೊಂಡಿದ್ದು ಮುಖ್ಯಕಾರ್ಯದರ್ಶಿಗಳ ಮುಖಂಡತ್ವದಲ್ಲಿ ಒಂದು ಮೀಟಿಂಗ್‌ನ್ನು ಕರೆಯುತ್ತಾ ಇದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷತೆಯಲ್ಲಿ ಆ ಮೀಟಿಂಗ್ ನಡೆಯುತ್ತದೆ. ಅಲ್ಲಿ ಕೂಲಂಕುಷವಾಗಿ ಎಲ್ಲಾ ಸಮಸ್ಯೆಗಳನ್ನು ಕುರಿತು ಚರ್ಚೆಮಾಡಿ ಅದಕ್ಕೆ ಬೇಕಾದಂಥ ಪರಿಹಾರಗಳನ್ನು ಕಂಡುಹಿಡಿಯುವುದಕ್ಕೆ ಅವಕಾಶ ಆಗುತ್ತದೆಂಬ ಮಾತನ್ನು ತಮಗೆ ಹೇಳ ಬಯಸುತ್ತೇನೆ. ಮತ್ತೆ ಭೂಸ್ವಾಧೀನ ನಡವಳಿಕೆಯ ಬಗ್ಗೆ ಆಗಿರತಕ್ಕಂಥ ಅಕ್ರಮಗಳ ಮತ್ತು ಅನ್ಯಾಯಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆಯೂ ನಾನು ಮಾತನಾಡಿದ್ದೇನೆ. ಈ ಸಮಸ್ಯೆಯು ಕೇವಲ ಯುಕೆಪಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೂ ಸಂಬಂಧಪಟ್ಟದ್ದು ಆಗಿದೆ, ಈ ವಿಚಾರದಲ್ಲಿ ರೈತರುಗಳಿಗಿಂತ ಮಧ್ಯವರ್ತಿಗಳಿಗೆ ಹೆಚ್ಚು ಅನುಕೂಲ ಇದರಿಂದಾಗುತ್ತಿದ್ದು. ಅವರುಗಳು ಹಣ ದುರುಪಯೋಗವನ್ನು ಮಾಡುತ್ತಿದ್ದಾರೆ ಎಂದು ಸರಕಾರದ ಗಮನಕ್ಕೆ ಬಂದಿದೆ. ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಈ ಬಗ್ಗೆ ಒಂದು ಸಮಗ್ರವಾದಂಥ ತೀರ್ಮಾನವನ್ನು ತೆಗೆದುಕೊಳ್ಳುವ ಸಲುವಾಗಿ ನಮ್ಮ ಆರ್ಥಿಕ ಮಂತ್ರಿಯವರು, ನಾನು, ಮತ್ತು ಎಲ್ಲ ಹಿರಿಯ ಅಧಿಕಾರಿಗಳ ಸಭೆ ಎರಡು ಸಾರಿ ಸಭೆ ಸೇರಿದ್ದೇವೆ, ಈಗಾಗಲೇ ಒಂದು ನಿರ್ಣಯಕ್ಕೆ ಬಂದಿದ್ದೇವೆ, ಆ ನಿರ್ಣಯವನ್ನು ನಾನು ನನ್ನ ಪ್ರಸ್ತಾವನೆಯಲ್ಲಿ ಹೇಳಿದ್ದೇನೆ. ಅದು ಜಾರಿಗೆ ಬಂದರೆ ಮಾನ್ಯ ಸದಸ್ಯರು ಹೇಳಿದಂಥ ಸಮಸ್ಯೆಗಳು ಬಿಡುಗಡೆಯಾಗಿ ನೇರವಾಗಿ ರೈತರಿಗೆ ಹಣ ಸಿಗುತ್ತದೆ ಜೊತೆಗೆ ವಿಳಂಬವಾಗಲಾರದು ಎಂಬ ಆಶೆ ಇಟ್ಟುಕೊಂಡಿದ್ದೇನೆ,

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸಕ್ಕರೆ ತಿನ್ನುವವರಿಗೆ ಕಬ್ಬು ಬೆಳೆಯುವವರ ಪರಿಸ್ಥಿತಿಯು ಗೊತ್ತಾಗುತ್ತದೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆದರೆ ನೂರಾರು ಕೋಟಿ ರೂಪಾಯಿಗಳವರೆಗೆ ಪರ್‌ಚೇಸ್‌ಫೀ ಎಂದು ಕೊಡುತ್ತಾ ಇದ್ದಾರೆ: ಒಂದೊಂದು ಕಾರ್ಖಾನೆ ವ್ಯಾಪ್ತಿಯಲ್ಲಿ ಸುಮಾರು ೨೦–೩೦ ಲಕ್ಷ ರೂಪಾಯಿಗಳನ್ನಾದರೂ ಕೊಟ್ಟರೂ ರಸ್ತೆ ದುರಸ್ಥಿಗೆ ಅನುಕೂಲವಾದ ಹಾಗೆ ಆಗುತ್ತದೆ. ಅದನ್ನು ಕೊಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದರು. ಹೀಗೆ ಕೊಟ್ಟರೆ ಅದು ಹೆಚ್ಚೆಂದರೆ ೪–೫ ಕೋಟಿ ರೂಪಾಯಿಗಳು ಮಾತ್ರ ಆಗಬಹುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ರಸ್ತೆ ದುರಸ್ತಿಯ ಬಗ್ಗೆ ಸರ್ಕಾರದ ನಿಲುವನ್ನು ಪ್ರಕಟಿಸಿದ್ದೇವೆ. ಸಕ್ಕರೆ ಕಾರ್ಖಾನೆಗಳು ಕೊಡತಕ್ಕ ತೆರಿಗೆಯಲ್ಲಿ ಆ ಒಂದು ವ್ಯಾಪ್ತಿಗೆ ಬರಬಹುದಾದ ರಸ್ತೆಯ ದುರಸ್ತಿಗೆ ಆ ಹಣದಿಂದ ಮಾಡಿ ಎಂದು ಹೇಳುತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡುವುದರ ಮೂಲಕ ಅದಷ್ಟು ಬೇಗ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ಎಂ. ಕಾನಡೆ.—ಲೋಕೋಪಯೋಗಿ ಇಲಾಖೆಯಲ್ಲಿ ಹರಿಜನ ಗಿರಿಜನರಿಗೆ ಕೊಡಬೇಕಾದ ಬಡ್ತಿ ಏನಾದರೂ ಬಾಕಿ ಇದೆಯಾ ? ಇದ್ದರೆ ಯಾವಾಗ ಮಾಡಿಕೊಡುತ್ತೀರಿ. ಎಷ್ಟು ದಿವಸಕ್ಕೆ ಮಾಡಿಕೊಡುತ್ತೀರಿ. ಎಷ್ಟು ತಿಂಗಳಿಗೆ. ಎಷ್ಟು ವಾರಕ್ಕೆ ಎಷ್ಟು ವರ್ಷಕ್ಕೆ ಮಾಡಿಕೊಡುತ್ತೀರಿ ಎಂಬುದನ್ನು ಹೇಳಿದರೆ ಸಾಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸನ್ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಪ್ರಾಮುಖ್ಯವಾದುದು. ಅವರು ನಮ್ಮ ಇಲಾಖೆಯ ಶೇಕಡವಾರು ಬಡ್ತಿಯ ಬಗ್ಗೆ ಕೇಳುತ್ತಿದಾರೆ, ಈಗ ಪ್ರಸ್ತುತ ಪರಿಸ್ಥಿತಿಯಲ್ಲಿ ಇರತಕ್ಕದ್ದು ಅವರು ನಿರೀಕ್ಷಣೆ ಮಾಡಿರುವ ಶೇಕಡವಾರುಗಿಂತ ಜಾಸ್ತಿ ಇದೆ. ಅವರು

ಶೇಕಡ ೧೮ ರಷ್ಟು ಕೇಳಿದರೆ ಈಗ ನಮ್ಮಲ್ಲಿರುವ ಅಂಕಿಅಂಶಗಳ ಪ್ರಕಾರ ೨೪.೫ ಪರ್ಸೆಂಟ್ ಆಗ್ತದೆಂದು ನಾನು ಕೇಳಿದ್ದೇನೆ. ನಿಮ್ಮ ವರ್ಗದವರಿಗೆ ನಮ್ಮ ಇಲಾಖೆಯಲ್ಲಿ ಹೆಚ್ಚಿಗೆ ಅದ್ಯತೆ ಸಿಕ್ಕಿದೆ ಎಂಬ ಸಮಾಧಾನಕರವಾದ ಮಾತನ್ನು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಎಸ್. ಸಿ. ಮತ್ತು ಎಸ್. ಟಿ. ಯವರಿಗೆ ಪಿ. ಡಬ್ಲ್ಯೂ. ಡಿ ಕಂಟ್ರಾಕ್ಟ್ ಅನ್ನು ಒಂದು ಲಕ್ಷದ ವರೆಗೆ ಕೊಡಲು ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಆ ರೀತಿ ಕೊಡಬಹುದು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್.—ಲೋಕೋಪಯೋಗಿ ಸಚಿವರು ಅವರ ಇಲಾಖೆಗೆ ಒಂದು ಹೊಸ ಕಾಯಕತ್ವ ಕೊಡಬೇಕೆಂಬ ಉದ್ದೇಶದಿಂದ ಅವರು ಬಹಳ ನಿಚ್ಚಳವಾದಂತೆಹ ಉತ್ತರವನ್ನು ಕೊಟ್ಟಿದ್ದಾರೆ. ಅದು ನಿಜವಾಗಿಯೂ ಮೆಚ್ಚತಕ್ಕದ್ದು. ಒಂದು ವಿಚಾರ ಅವರ ಗಮನಕ್ಕೆ ತರುತ್ತೇನೆ. ನಿನ್ನೆ ತಾನೆ ನಾನು ಭಾಷಣ ಮಾಡುವಾಗ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ಒಂದು ಗಡಿ ಪ್ರದೇಶದ ಅಭಿವೃದ್ಧಿ ಬಗ್ಗೆ ನಿಮ್ಮ ರೀತಿ ನೀತಿ ಏನು ? ನನ್ನ ತಾಲ್ಲೂಕು ಅತ್ಯಂತ ಹಿಂದುಳಿದಿರುವಂತಹ ಗಡಿ ಪ್ರದೇಶದಲ್ಲಿರುವ ಚಾಮರಾಜನಗರ ತಾಲ್ಲೂಕಿನ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ವಿಶೇಷವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಹಾಗೂ ಸಮಗ್ರ ಬೆಳಗಾವಿ ಜಿಲ್ಲೆ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ; ಕಾವೇರಿ ಪಂಚಾಯತ್ ಬಗ್ಗೆ ಒಂದು ಮೇಲ್ಮನವಿಯನ್ನು ಹಾಕಿದ್ದೇವೆ. ಅದರ ಪರಿಸ್ಥಿತಿ ಏನಾಯಿತೆಂಬುದನ್ನು ನಾನು ನಿನ್ನೆ ನನ್ನ ಭಾಷಣದಲ್ಲಿ ಕೇಳಿದ್ದೇನೆ. ಯಾವಾಗ ನಿರ್ಧಾರವಾಗಬಹುದು. ಅದು ಈಗ ಯಾವ ಹಂತದಲ್ಲಿದೆ ಎಂದು ತಾವು ತಿಳಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ ಸಂಪನ್ಮೂಲಗಳ ಸಮಿತಿ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮಾಡಿದ್ದೀರಾ, ಬಿಟ್ಟರಾ ಏನಾಯಿತು ಎಂಬುದನ್ನು ತಿಳಿಸಬೇಕು. ನಾಲ್ಕನೆಯದಾಗಿ ವರ್ಣಾನಾಲೆ ಆಗುತ್ತದೆ, ಆಗುತ್ತದೆ ಎಂದು ಚಿಂತನೆ. ಇದೆಯೋ ಹೊರತು ಆ ವರ್ಣಾನಾಲೆಯನ್ನು ಯಾವಾಗ ಮುಗಿಸಲು ಸಾಧ್ಯವಾಗುತ್ತದೆ ಕಬಿನಿ ಎರಡನೆ ಹಂತ...

ಶ್ರೀ ಎಂ. ಪಿ. ವೆಂಕಟೇಶ್.—ಇದಕ್ಕೆ ನನ್ನ ತಕರಾರು ಇದೆ. ತಾರಕ ಯೋಜನೆ ಮೊದಲು ಮಾಡಿ ಎಂದು ನೀವು ಹೇಳಿ ; ಅದನ್ನು ಬಿಟ್ಟು ಹೆಗಡದೇವನಕೋಟೆಯನ್ನು ಹಾಳು ಮಾಡಿಬಿಟ್ಟು ಕಬಿನಿ ಕಬಿನಿ ಎರಡನೆ ಹಂತ ಅಂತ ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಇಲ್ಲೆಲ್ಲಾ ಆನೆಗಳು ಬಂದು ಹಾಳು ಮಾಡುತ್ತಿವೆ, ಇಲ್ಲೆಲ್ಲ ವಾಟಾಳ್ ನಾಗರಾಜ್ ಅವರು ಏಕೆ ಹಾಳುಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ವೆಂಕಟೇಶ್ ಬಗ್ಗೆ ನನಗೆ ಬಹಳ ಅಭಿಮಾನ ಇದೆ. ತಾರಕ ಬಗ್ಗೆ ನನ್ನ ವಿರೋಧ ಇಲ್ಲ, ಕಬಿನಿ ಎರಡನೆ ಹಂತದ ಬಗ್ಗೆ ಸರ್ಕಾರದ ನಿಲುವೇನು ? ಯಾವಾಗ ಮಾಡುತ್ತೀರಿ, ಈ ವರ್ಷ ಎಷ್ಟು ಹಣ ತೆಗೆದಿಟ್ಟಿದ್ದೀರಿ, ನಾನು ಕೇಳಿದ ಈ ಪ್ರಶ್ನೆಗಳಿಗೆ ಪ್ರಮಾಣಿಕವಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಗಡಿ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಚಾಮರಾಜನಗರ ತಾಲ್ಲೂಕ್ ಬಗ್ಗೆ ಮಾನ್ಯ ವಾಟಾಳ್‌ರವರು ಪ್ರಸ್ತಾಪ ಮಾಡಿದ ಹಾಗೆ ಹಿಂದೆಂದೂ ಕೂಡ ಇಲ್ಲದೆ ಇರತಕ್ಕ ಒಂದು ಹೊಸ ಯೋಜನೆಯನ್ನು ಗಡಿ ಪ್ರದೇಶದ ಭಾಗಗಳಿಗೆ ಮಾಡಬೇಕೆಂದು ನಮ್ಮ ಸರ್ಕಾರ ಆಯವ್ಯಯದಲ್ಲಿ ವಿಶೇಷ ಯೋಜನೆಯನ್ನು ಹೊರಡಿಸಿದೆ. ಬಹುಶಃ ಅದನ್ನು ಹೆಮ್ಮೆಯಿಂದ ಹೇಳುತ್ತೇನೆ. ಈವರೆಗೆ ಆ ಪ್ರದೇಶಗಳು ನಿರ್ಲಕ್ಷಿಸಲ್ಪಟ್ಟಿತ್ತು, ಮೊನ್ನೆ ನಮ್ಮ ಸ್ನೇಹಿತರು ಭಾಷಣಮಾಡುವಾಗ, ಮಹಾರಾಷ್ಟ್ರದಿಂದ ಬರುವವರಿಗೆ ರಸ್ತೆ ಚೆನ್ನಾಗಿದೆ, ಕರ್ನಾಟಕಕ್ಕೆ ಬಂದ ತಕ್ಷಣ ಇದು ಮಹಾರಾಷ್ಟ್ರ ಅಲ್ಲ ಇದು ಕರ್ನಾಟಕವೆಂದು ಗೊತ್ತಾಗುತ್ತದೆ, ಇಷ್ಟರಮಟ್ಟಿಗೆ ನಮ್ಮ ಪರಿಸ್ಥಿತಿ ಇದೆ ಎಂದು ಹೇಳಿದರು. ಈ ಒಂದು ಮಾತಿನ ಹಿನ್ನೆಲೆಯನ್ನು ಅರ್ಥ ಮಾಡಿಕೊಂಡೇ ಈ ಒಂದು ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಆಯವ್ಯಯದಲ್ಲಿ ೫ ಕೋಟಿ ರೂಪಾಯಿಯನ್ನು ಇದಕ್ಕೆ ಅಳವಡಿಸಿದ್ದೇವೆ. ನಮ್ಮ ಅರ್ಥಮಂತ್ರಿಗಳು ಇನ್ನೂ ೫ ಕೋಟಿ ರೂಪಾಯಿಯನ್ನು ಕೊಡುತ್ತೇನೆಂಬ ಇಂಗಿತವನ್ನು ಕೂಡ ಅವರು ಸೂಚಿಸಿದ್ದಾರೆ. ಆದ್ದರಿಂದ ಗಡಿ ಪ್ರದೇಶಗಳ ಭಾಗಗಳಲ್ಲಿ ಪ್ರಮುಖವಾಗಿ ರಸ್ತೆ

ಗಳನ್ನು ಅಭಿವೃದ್ಧಿ ಪಡಿಸುವುದೇ ಈ ಒಂದು ಯೋಜನೆಯ ಗುರಿ ಇದರಲ್ಲಿ ನಾವು ಚಾಮರಾಜನಗರ ವನ್ನು ಸಹ ಸೇರಿಸಿದ್ದೇವೆ. ಅಗತ್ಯವಾಗಿ ಚಾಮರಾಜನಗರಕ್ಕೆ ವಿಶೇಷ ಗಮನ ಕೊಡುತ್ತೇವೆ. ನಾನು ಪ್ರವಾಸ ಹೋಗಿದಾಗ ಅಲ್ಲಿನ ರಸ್ತೆಗಳ ವಸ್ತುಸ್ಥಿತಿಯನ್ನು ಕಣ್ಣಾರೆ ಕಂಡಿದ್ದೇನೆ. ಆದ್ದರಿಂದ ಆ ಭಾಗಕ್ಕೆ ವಿಶೇಷ ಗಮನಕೊಡುತ್ತೇನೆ. ಮತ್ತೆ ಬೆಳಗಾವಿ ಗಡಿಪ್ರದೇಶಕ್ಕೂ ಸಹ ನಾವು ಸಾಕಷ್ಟು ಕಾರ್ಯಕ್ರಮ ಗಳನ್ನು ಹಾಕಿಕೊಂಡಿದ್ದೇವೆ. ಆಮೇಲೆ ವರುಣಾ ನಾಲೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆಗಲೇ ನಾವು ಕಾವೇರಿ ಕೊಳ್ಳದ ನೀರನ್ನು ಉಪಯೋಗಿಸಿಕೊಳ್ಳುವುದಕಾಗಿ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುವು ದಾಗಿ ಹೇಳಿದ್ದೇನೆ. ವರುಣಾ ನಾಲೆಗೆ ನಮ್ಮ ಆಯವ್ಯಯದಲ್ಲಿ ಈ ಸಲ ೫ ಕೋಟಿ ಇಡಲಾಗಿದೆ ಇನ್ನೂ ೫ ಕೋಟಿ ರೂಪಾಯಿಗಳನ್ನು ಕೊಡಲು ನಾವು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದನು ತೀವ್ರ ವಾಗಿ ಮಾಡಿ ಅದರ ಪ್ರಯೋಜನ ಈ ನಾಡಿನ ಜನತೆಗೆ ಸಿಗುವಂತೆ ಮಾಡುತ್ತೇನೆ. ಮತ್ತೆ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣಕ್ಕೆ ಹೆಚ್ಚಿನ ಗಮನ ಕೊಡುತ್ತೇವೆ ಎಂಬ ಮಾತನ್ನು ಈ ಸಮಯದಲ್ಲಿ ತಿಳಿಸ ಬಯಸುತ್ತೇನೆ. ಮತ್ತೆ ಮೇಲ್ಮನವಿ ಬಗ್ಗೆ ಮತ್ತು ನಮ್ಮ ಸಂಪನ್ಮೂಲ ಸಮಿತಿ ಬಗ್ಗೆ ನಮ್ಮ ಲಾ ಮಿನಿಸ್ಟರ್ ಇದ್ದಾರೆ ಅವರು ವಿವರಣೆ ಕೊಡುತ್ತಾರೆ. ಕಾವೇರಿ ಕೊಳ್ಳದ ಬಗ್ಗೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಕಬಿನಿಯೂ ಅದರಲ್ಲಿ ಬರುತ್ತದೆ.

SRI MODGEKAR DEASI.—Sir, in Halaga area the first phase is completed 8-10 years back. The Second phase of the work of irrigation is suddenly stopped due to some reasons. May I know from the hon'ble Minister when the second phase of irrigation work will start and farmers will get the benefit of that irrigation.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅದನ್ನು ಪರಿಶೀಲಿಸಲಾಗುವುದು.

ಶ್ರೀ ಐನಾಪುರ ಮನೋಹರ್ ಉಮಾಕಾಂತ್.—ಮಾನ್ಯ ಅಧ್ಯಕ್ಷರೆ, what action the Government has taken on the inefficient and default contractors so far ? Secondly, why most off the cases are decided in favour of the contractors though they are black-listed. ಮತ್ತೆ ಎರಡನೇದಾಗಿ ಯಾವುದೇ ಪ್ರಾಜೆಕ್ಟನ್ನು ಇಲ್ಲವೇ ರಸ್ತೆಗಳನ್ನು ತೆಗೆದುಕೊಳ್ಳುವಾಗ ಅದಕ್ಕೆ ಮೂರನೇ ಒಂದು ಭಾಗದ ಅಮೌಂಟನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡಬೇಕಾಗುತ್ತದೆ. ಉದಾಹರಣೆಗೆ i.e. at Nimbal in Indi Taluk, M.I. tank is appearing in the Budjet for the last four years. The amount that is being provided is ten thousand, five thousand and three thousand like that. When the total cost of the project is about 44.5 lakhs, the amount that is being provided for 1990-91 is only 10 thousand. By this, the work will not be taken up at all, ಅದಕ್ಕಾಗಿ ಈ ಕೆಲಸವನ್ನು ಕಾರ್ಯಗತಗೊಳಿಸಲು ಅಧಿಕಾರಿಗಳಿಗೆ ಯಾವ ರೀತಿ ಇನ್‌ಸ್ಟ್ರಕ್ಷನ್ ಕೊಡುತ್ತೀರಿ ಎಂದು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಲೋಕೋಪಯೋಗಿ ನಿಯಮಾವಳಿ ಪ್ರಕಾರ ಯಾವುದೇ ಯೋಜನೆಯನ್ನು ಮಂಜೂರು ಮಾಡುವುದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಡುವುದಕ್ಕೆ, ಅದರ ಅಂದಾಜಿನಲ್ಲಿ ಮೂರನೇ ಒಂದು ಭಾಗ ಕಡ್ಡಾಯವಾಗಿ ಆಯವ್ಯಯದಲ್ಲಿ ಇರಿಸಿದರೆ ಮಾತ್ರ ಅವಕಾಶ ವಾಗುತ್ತದೆಂದು ಆಗಲೇ ನಾನು ತಿಳಿಸಿದ್ದೇನೆ. ಆದರೂ ಕೂಡ ನಮ್ಮಲ್ಲಿ ಕೆಲವೊಂದು ಸಾರಿ ಹೆಸರು ಗಳನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಿ ಕಡಿಮೆ ಹಣ ಇಟ್ಟಿರುವುದೂ ಚಾಲ್ತಿಯಲ್ಲಿದೆ. ಆದರೆ ಈ ಸಾರಿಯ ಆಯವ್ಯಯದಲ್ಲಿ ಇದನ್ನು ಬಹುತೇಕ ಮಟ್ಟಿಗೆ ಈ ಲೋಪಗಳನ್ನು ತೊಡೆದುಹಾಕತಕ್ಕಂಥ ಪ್ರಯತ್ನ ಮಾಡಿದ್ದೇವೆ. ಒಂದೆರಡು ಉಳಿದಿದ್ದರೂ ಸಹ ಅದನ್ನು ಸರಿಪಡಿಸತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ಆ ಕೆಲಸದ ಪ್ರಾಮುಖ್ಯತೆಯನ್ನು ನೋಡಿ ಅದಕ್ಕೆ ಮೂರನೇ ಒಂದು ಭಾಗದ ಹಣವನ್ನು ಕೊಡತಕ್ಕಂಥ ಮತ್ತು ನಿಗದಿತ ಕಾಲದಲ್ಲಿ ಆ ಕೆಲಸವನ್ನು ಮುಗಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. ಆ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಮನೋಹರ್ ಐನಾಪುರ್.—ಕಂಟ್ರಾಕ್ಟರ್ಸ್ ಬಗ್ಗೆ ಕೇಳಿದ್ದೆ. ಅವಕ್ಕೆ ತಾವು ಉತ್ತರ ಕೊಡಲಿಲ್ಲ, What action the Government has taken so far in respect of the inefficient and defaulting contractors. Eventhough they have been black-listed, they have been favoured all the time.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಪ್ರಶ್ನೆಯ ಬಗ್ಗೆ ನಾನು ಮೊದಲೇ ನಾನು ನನ್ನ ಪ್ರಸ್ತಾವದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ರೀತಿಯ ಪ್ರಕರಣಗಳು ಈ ರಾಜ್ಯದಲ್ಲಿ ಬಹಳಷ್ಟು ಆಗಿವೆ. ಕೋಟಿಗಟ್ಟಲೆ ಹಣ ಈ ಟ್ರೆಜರಿಗೆ ಹೊರೆಯಾಗಿದೆ ಎಂದು ಹೇಳಿದ್ದೇನೆ. ಯಾವ ಯಾವ ರೀತಿಯ ಅನ್ಯಾಯಗಳು ಬೇಕು, ಅಂತಹ ಎಲ್ಲ ರೀತಿಯ ಅನ್ಯಾಯಗಳು ಕೂಡಾ ಈ ಇಲಾಖೆಯಲ್ಲಿ ನಡೆದಿದೆ ಎಂದು ಹೇಳಿದ್ದೇನೆ. ಆಗಬಾರದ ಕೆಲಸಗಳೆಲ್ಲಾ ಆಗಿಹೋಗಿವೆ ಎಂದು ಹೇಳಿದ್ದೇನೆ. ಅದರಲ್ಲಿ ಇವೂ ಸಹ ಒಂದು ಎಂದು ಅವರಿಗೆ ಮನವರಿಕೆ ಮಾಡಿಕೊಡುತ್ತಾ ಇಂಥ ಲೋಪಗಳು, ಇಂಥ ಅನ್ಯಾಯಗಳು ಆಗದಂಥ ರೀತಿಯಲ್ಲಿ ಮುಂದೆ ಎಚ್ಚರ ವಹಿಸುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎಂ. ರಾಮಪ್ಪ.—ಕಂಟ್ರಾಕ್ಟರ್ ತಪ್ಪು ಮಾಡಿರಬಹುದು, ಇಲ್ಲದಿದ್ದರೆ ಇಂಜಿನಿಯರ್ ತಪ್ಪು ಮಾಡಿರಬಹುದು, ಯಾರ ಮೇಲಾದರೂ ಒಬ್ಬರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದು ಬಿಟ್ಟು ಆ ಕಡೆಗೂ ಇಲ್ಲ, ಈ ಕಡೆಗೂ ಇಲ್ಲ ಎಂದು ಹೇಳಿಬಿಟ್ಟರೆ ಹಣ ಸೋರುವಿಕೆ ಜಾಸ್ತಿಯಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈವರೆಗೆ ಇದ್ದಂಥ ಕಾನೂನಿನಲ್ಲಿ ಕಂಟ್ರಾಕ್ಟರ್ ಮೇಲೆ ಉಗ್ರ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ಗುತ್ತಿಗೆಯ ಷರತ್ತಿನಲ್ಲಿ ಅವಕಾಶ ಇರಲಿಲ್ಲ. ಆ ಕಾರಣದಿಂದ ಆ ಗುತ್ತಿಗೆದಾರನ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಆಗುತ್ತಿರಲಿಲ್ಲ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವಷ್ಟರಲ್ಲಿ ಅವರು ರಿಟೈರ್ಡ್ ಆಗುತ್ತಿದ್ದರು. ಇಲ್ಲದಿದ್ದರೆ ಸ್ವಲ್ಪ ಭಾಗ ಅವರ ಪೆನ್‌ಷನ್‌ನಲ್ಲಿ ಕಟ್ ಮಾಡುತ್ತಿದ್ದರು. ಆದರಿಂದ ಈ ರೀತಿ ಆಗತಕ್ಕಂದ ನಷ್ಟವನ್ನು ತುಂಬುವುದಕ್ಕಾಗುವುದಿಲ್ಲವೆಂಬುದು ಮನವರಿಕೆಯಾದ ಮೇಲೆ ನಾವು ಈ ಕಂಟ್ರಾಕ್ಟರ್ ಮತ್ತು ಇಂಜಿನಿಯರ್‌ಗಳ ಇಬ್ಬರೂ ಕೂಡ ತಪ್ಪಿತಸ್ಥರು ಎಂದು ಘೋಷಣೆ ಮಾಡತಕ್ಕಂಥದ್ದರ ಮೂಲಕ ಕ್ರಿಮಿನಲ್ ಮೊಕದ್ದಮೆಗೆ ಒಳಪಡಿಸತಕ್ಕಂಥದ್ದಕ್ಕೆ ಕಾಯ್ದೆಯನ್ನು ನಾವು ಒಳಪಡಿಸತಕ್ಕಂಥ ಹಿನ್ನೆಲೆಯಲ್ಲಿ ಈ ಗುತ್ತಿಗೆಯ ನಮೂನೆಯನ್ನೇ ನಾವು ಬದಲಾಯಿಸಿದ್ದೇವೆ. ಈ ಮಾತನ್ನು ನಾನು ಮೊದಲೇ ಹೇಳಿದ್ದೇನೆ. ಬಹುಶಃ ಈ ಒಂದು ಹೊಸ ನಮೂನೆಯ ಗುತ್ತಿಗೆಯ ಷರತ್ತಿನಿಂದ ಇಂಥ ಅವ್ಯವಹಾರಕ್ಕೆ ಅವಕಾಶ ಆಗುವುದಿಲ್ಲ ಎಂಬ ಒಂದು ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ನೀರಾವರಿ ಭವನ ಕಟ್ಟಡವನ್ನು ಕಟ್ಟಲಿಕ್ಕೆ ಹೋದ ವರ್ಷ ಹಣವನ್ನು ಇಟ್ಟಿದ್ದರು. ಆದರೆ ನಿಮ್ಮ ಸರ್ಕಾರ ಬಂದ ಮೇಲೆ ಇದನ್ನು ಕಾರ್ಯಗತ ಮಾಡುತ್ತೀರೋ ಹೇಗೆ ಎಂಬುದನ್ನು ಹೇಳಬೇಕು. ಎರಡನೆಯ ಪ್ರಶ್ನೆ ಬೀದರ್ ಜಿಲ್ಲೆಯ ಕಾರಂಜ ನೀರಾವರಿ ಯೋಜನೆಗೆ ಅಚ್ಚುಕಟ್ಟು ಪ್ರಾಧಿಕಾರವನ್ನು ಮಾಡುವ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು ಬೀದರ್‌ಗೆ ಬಂದಂಥ ಸಂದರ್ಭದಲ್ಲಿ ಹೇಳಿದ್ದರು, ತಾವು ಕೂಡಾ ಹೇಳಿದ್ದೀರಿ. ಅದರ ಬಗ್ಗೆ ಇವತ್ತು ಘೋಷಣೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಪ್ರಶ್ನೆ ಎಂದರೆ ಅಪ್ಪರ್‌ಮುಲ್ಲಾಮಾರಿ ನೀರಾವರಿ ಯೋಜನೆಯಿಂದಾಗಿ ಮುಳುಗಡೆ ಆಗುವ ಶರಣ ನಗರಕ್ಕೆ ಏತನೀರಾವರಿ ಕಲ್ಪಿಸುವಂಥ ಕಾರ್ಯಕ್ರಮವನ್ನು ಈ ವರ್ಷದ ಬಜೆಟ್‌ನಲ್ಲಿ ಇಟ್ಟಿದ್ದೀರೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು. ಮತ್ತು ಬೀದರ್ ಜಿಲ್ಲೆಯ ಮಾಜಲ್ ಇರಿಗೇಷನ್ ಕೆಲಸವನ್ನು ಈ ವರ್ಷದ ಬಜೆಟ್‌ನಲ್ಲಿ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ಬಜೆಟ್‌ನಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ, ಹೈದರಾಬಾದ್-ಕರ್ನಾಟಕ ಪ್ರದೇಶದ ಅಡಿಯಲ್ಲಾದರೂ ಕೂಡಾ ಇದಕ್ಕೆ ಹಣ ಕೊಟ್ಟು ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ಹೇಗೆ ? ಎನ್ನುವುದನ್ನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಕೊನೆಯದಾಗಿ ಪ್ರತಿ ತಾಲ್ಲೂಕಿಗೂ ೧೨ ಲಕ್ಷ ರೂಪಾಯಿ ಅನ್ವಯದ ರೀತಿ ನಮ್ಮ ಬಸವಕಲ್ಯಾಣದ ತಾಲ್ಲೂಕು ಐತಿಹಾಸಿಕವಾಗಿರುವುದರಿಂದ, ಆ ತಾಲ್ಲೂಕಿನಲ್ಲಿ ರಸ್ತೆಗಳು ಸರಿಯಾಗಿಲ್ಲ. ಬಸವಕಲ್ಯಾಣ ಪಟ್ಟಣದಲ್ಲಿ ಏನು ಕಾಮಗಾರಿಗಳ ಕೆಲಸ ಈಗಾಗಲೇ ಇದೆ, ಈ ಕಾಮಗಾರಿಗಳ ಸಲುವಾಗಿ ೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೀರೋ ಹೇಗೆ ? ಇದರ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೀರಾ ? ಇಷ್ಟಕ್ಕೆ ಮಾನ್ಯ ಮಂತ್ರಿಗಳು ವಿವರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ವಿಚಾರದಲ್ಲಿ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ನಾವು ಸುತ್ತೋಲೆಯನ್ನು ಕಳುಹಿಸಿ ಕೊಟ್ಟಿದ್ದೇವೆ. ಸ್ಥಳೀಯ ಶಾಸಕರನ್ನು ಸಹ ಕೂಡಾ ಸಂಪರ್ಕನ ಮಾಡಿ ಅವರು ಕೊಡತಕ್ಕಂಥ ಆದ್ಯತೆಯನ್ನು ಗಮನದಲ್ಲಿ ಇಟ್ಟು ಕೆಲಸವನ್ನು ಮಾಡಿ ಎಂದು ಹೇಳಿದ್ದೇನೆ. ಬಹುಶಃ ನೀವು ಇಲ್ಲಿಂದ ವಾಪಸ್ ಊರಿಗೆ ಹೋಗುವುದರೊಳಗಾಗಿ ಅವರು ಬಂದು ನಿಮ್ಮನ್ನು ಭೇಟಿ ಮಾಡಲಿದ್ದಾರೆ. ಮತ್ತೊಂದು ವಿಷಯ ಏತನೀರಾವರಿ ಬಗ್ಗೆ ಹೇಳಿದ್ದೀರಿ. ಅದನ್ನು ಮೊನ್ನೆ ತಾವು ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ಕೇಳಿದ್ದೀರಿ. ಆ ಯೋಜನೆ ತಯಾರು ಮಾಡುವುದಕ್ಕೆ ನಾನು ಆದೇಶ ಕೊಟ್ಟಿದ್ದೇವೆ. ಮತ್ತೊಂದು ವಿಷಯ, ನೀರಾವರಿ ಭವನವನ್ನು ಬೆಂಗಳೂರಿನಲ್ಲಿ ಕಟ್ಟಬೇಕು ಎಂದು ತಮ್ಮ ಕಾಲದಲ್ಲಿ ಎರಡು ಕೋಟಿ ರೂಪಾಯಿ ಮೀಸಲಾಗಿ ಇರಿಸಿದ್ದೆವು ಎಂದು ಹೇಳಿದ್ದೀರಿ. ಅದು ಎರಡನೇ ಕೆ. ಆರ್. ಹಾಸ್ಪಿಟಲ್ ಆಗಿದೆ. ನೀವು ಕೊಟ್ಟಿರುವ ಎರಡು ಕೋಟಿ ರೂಪಾಯಿ ಬರೇ ಫೌಂಡೇಷನ್‌ಗೆ ಸಾಕಾಗಿಲ್ಲ ಅದಕ್ಕೆ ಹಣ ಎಲ್ಲಿಂದ ತರಬೇಕು ಎಂಬುದು ಸಮಸ್ಯೆಯಾಗಿ ಉಳಿದಿದೆ. ಆದರೂ ಅದು ಆಗಬೇಕು. ಇಲ್ಲದಿದ್ದರೆ ಕೊಟ್ಟಿರತಕ್ಕ ಹಣ ಪೋಲು ಆಗುತ್ತದೆ. ಅದಕ್ಕೆ ಶೀಘ್ರದಲ್ಲಿಯೇ ಒಂದು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಕಾರಂಜಾ ಯೋಜನೆ ಬಗ್ಗೆ ಹೇಳಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈಗಾಗಲೇ ಅದು ಮಾನ್ಯ ಮುಖ್ಯಮಂತ್ರಿಗಳ ಪರಿಶೀಲನೆಯಲ್ಲಿದೆ. ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ರಮಾನಾಥ ರೈ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರದ ಕೊರೆತದಿಂದ ಅಲ್ಲಿಯ ರೈತರಿಗೆ ಅನ್ಯಾಯ ಆಗಿರುವ ಬಗ್ಗೆ ಸರ್ಕಾರ ತೀವ್ರವಾಗಿ ಗಮನಿಸಿ ಮಾನ್ಯ ಸಚಿವರು ಭೇಟಿ ಮಾಡಿ ಅಲ್ಲಿ ತಡೆಗೋಡೆಯನ್ನು ನಿರ್ಮಾಣ ಮಾಡುವ ಬಗ್ಗೆ ಭರವಸೆಯನ್ನು ಕೊಟ್ಟು, ಆ ವಿಚಾರದಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ಆದರೆ ಸಮುದ್ರಕ್ಕೆ ಸಮೀಪವಾಗಿ ನೇತ್ರಾವತಿ ನದಿ ಸೇರ್ಪಡೆ ಆಗುವ ಭಾಗ ಅಟ್ಟಾರೆ ಕನ್ನೂರ್ ಎಂಬ ಗ್ರಾಮ ಬರುತ್ತದೆ. ಅಲ್ಲಿ ನೂರಾರು ಎಕರೆ ಜಮೀನು ನದಿಯ ಕೊರೆತಕ್ಕೆ ಒಳಗಾಗಿದೆ. ಅನೇಕ ರೈತರಿಗೆ ತೊಂದರೆ ಆಗಿದೆ. ಆ ಭಾಗಕ್ಕೂ ಕೂಡ ತಡೆಗೋಡೆ ರಚನೆ ಮಾಡಬೇಕು, ಎಂಬುದು ಬಹಳ ಸಮಯದ ಬೇಡಿಕೆ ಇದ್ದರೂ ಕೂಡ ಅದರ ಬಗ್ಗೆ ತಾವು ಪ್ರಸ್ತಾವನೆ ಮಾಡಿಲ್ಲ. ಈ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನೂ ಒಂದು ವಿಚಾರ ಎಂದರೆ ಕೆಲವು ಜಿಲ್ಲಾ ಪರಿಷತ್ ರಸ್ತೆಗಳು ಬಹಳ ಹದಗೆಟ್ಟಿವೆ. ಜಿಲ್ಲಾ ಪರಿಷತ್ತಿನಿಂದ ಅದನ್ನು ಅಭಿವೃದ್ಧಿ ಪಡಿಸಲಿಕ್ಕೆ ಅಸಾಧ್ಯವಾದ ಪರಿಸ್ಥಿತಿ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಎಂಡಿಆರ್ ರಸ್ತೆಯಾಗಿ ಪರಿವರ್ತನೆ ಮಾಡಬೇಕು ಎನ್ನುವ ಭರವಸೆ ಕೊಟ್ಟಿದ್ದರೂ ಕೂಡ, ಇವೊತ್ತಿಗೂ ಕೂಡ ಅದನ್ನು ತೆಗೆದುಕೊಳ್ಳತಕ್ಕ ಒಂದು ಪ್ರಯತ್ನವನ್ನು ಸರ್ಕಾರ ಮಾಡಲಿ, ಅದನ್ನು ಕೂಡ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ನಾನು ಇತ್ತೀಚಿನ ದಿನಗಳಲ್ಲಿ ಮಂಗಳೂರಿಗೆ ಪ್ರವಾಸ ಮಾಡಿ ನೋಡಿದ್ದೇನೆ. ನೇತ್ರಾವತಿ ನದಿ ಸಮುದ್ರಕ್ಕೆ ಸೇರುವ ಮುಖಜ ಭೂಮಿಯಲ್ಲಿ ಬಹಳಷ್ಟು ಮಟ್ಟಿಗೆ ರೈತರಿಗೆ ತೊಂದರೆ ಆಗುತ್ತದೆ ಮತ್ತು ನಮ್ಮ ಭಾಗ ಭೂಮಿ ಕೊರೆತಕ್ಕೆ ಸಿಗುತ್ತದೆ ಎಂಬುದನ್ನು ಮನಗಂಡಿದ್ದೇವೆ. ಈ ಒಂದು ನ್ಯೂನತೆಯನ್ನು ಸರಿಪಡಿಸತಕ್ಕದ್ದಕ್ಕೆ ಕೂಡಲೇ ಕ್ರಮ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಸೂಚನೆ ಕೊಟ್ಟಿದ್ದೇನೆ. ಈಗಾಗಲೇ ಅದಕ್ಕೆ ಹಣ ಕೂಡ ಬಿಡುಗಡೆ ಮಾಡಿದ್ದೇವೆ. ಮೇಲಾಗಿ ಹಳೆಯ ಮಂಗಳೂರು ಬಂದರನ್ನು ಅಭಿವೃದ್ಧಿ ಮಾಡುವ ಕೆಲಸದ ಬಗ್ಗೆ ಈಗಾಗಲೇ ಸಚಿವ ಸಂಪುಟದ ತೀರ್ಮಾನ ತೆಗೆದುಕೊಂಡು ಕಾರ್ಯೋನ್ಮುಖರಾಗುವುದಕ್ಕೆ ನಾವು ಈಗಾಗಲೇ ಅಧಿಕಾರಿಗಳಿಗ ಆದೇಶ ಕೊಟ್ಟಿದ್ದೇವೆ. ಸಂಬಂಧಪಟ್ಟ ಯೋಜನೆಯನ್ನು ಕೂಡ ನಾವು ಮಂಜೂರು ಮಾಡಿದ್ದೇವೆ. ಈ ಕೆಲಸದ ಶೀಘ್ರದಲ್ಲಿಯೇ ಆರಂಭ ಆಗುವ ಮೂಲಕ ಅವರು ಪಡತಕ್ಕ ಭಯ ಏನು ಇದೆ, ಅದು ನಿವಾರಣೆ ಆಗುತ್ತದೆ ಎಂದು ತಮ್ಮ ಮೂಲಕ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ತಾವು ಉತ್ತರ ಕೊಡುವಾಗ ಇಲಾಖೆಯಲ್ಲಿ ಆಗಬಾರದ್ದು ಆಗಿ ಬಿಟ್ಟಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ ಇನ್ನೂ ಒಂದು ಮಾತು ಹೇಳಿದರು. ಅಂತಹವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ ಎಂದು ರಾಮಪ್ಪ

ನವರು ಕೇಳಿದ್ದಕ್ಕೆ, ಅಗ್ರಿಮೆಂಟ್‌ನಲ್ಲಿ, ಅದಕ್ಕೆ ಅವಕಾಶ ಇಲ್ಲ ಮತ್ತೆ ಕೆಲವು ಅಧಿಕಾರಿಗಳು ಕೂಡ ರಿಟೈರ್ ಆಗಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ತಾವು ಏನಾದರೂ ಹೇಳಿಕೆ ಕೊಡಬೇಕಾದರೆ ಜವಾಬ್ದಾರಿಯಿಂದ ಕೊಡಬೇಕು ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಗಬಾರದ್ದು ಆಗಿ ಹೋಗಿದೆ ಎಂದರೆ ಅದು ಯಾರಿಂದ ಆಗಿದೆ. ಅಧಿಕಾರಿಗಳಿಂದ ಆಗಿದೆಯೋ ಅಥವಾ ಹಿಂದೆ ಈ ಇಲಾಖೆಯಲ್ಲಿದ್ದ ಮಂತ್ರಿಗಳಿಂದ ಆಗಿದೆಯೋ ಅಥವಾ ಯಾರಿಂದ ಆಗಿದೆ ? ನಾನು ಮಾತನಾಡುವಾಗ ಸ್ಪಷ್ಟವಾಗಿ ಹೇಳಿದ್ದೇನೆ. ಏನೆಂದರೆ ಯಾರಿಂದಲೇ ಅಲ್ಲಿ ದುರ್ವ್ಯವಹಾರ, ದುರುಪಯೋಗ ಆಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು. ಏಕೆಂದರೆ ಅದು ಸಾರ್ವಜನಿಕರ ಹಣ. ಅದು ಯಾರಿಂದಲೇ ಆಗಿದ್ದರೂ, ಅವರ ಮೇಲೆ ಕ್ರಮ ತೆಗದುಕೊಳ್ಳಬೇಕು. ಒಂದು ಸಾರಿ ಹೇಳುವುದು ಆಗಬಾರದ್ದು ಆಗಿದೆ ಎಂದು, ಮತ್ತೆ ಪ್ರಶ್ನೆ ಕೇಳಿದರೆ, ಕ್ರಮ ತೆಗೆದುಕೊಳ್ಳಬೇಕು. ಒಂದು ಸಾರಿ ಹೇಳುವುದು ಆಗಬಾರದ್ದು ಆಗಿದೆ ಎಂದು, ಮತ್ತೆ ಪ್ರಶ್ನೆ ಕೇಳಿದರೆ, ಕ್ರಮ ತೆಗೆದುಕೊಳ್ಳಲು ಅವಕಾಶ ಇಲ್ಲ ಎಂದು ಹೇಳಿದರೆ ಹೇಗೆ? ಹಾಗಾದರೆ ಆಗಬಾರದ್ದು ಏನು ಆಗಿದೆ, ಏತಕ್ಕೆ ಈ ತರಹದ ಪ್ರಚಾರ ಗಿಟ್ಟಿಸತಕ್ಕ ಮಾತನ್ನು ಮಂತ್ರಿಗಳು ಆಡುತ್ತಿದ್ದಾರೆ ಎಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟ ಪಡುತ್ತೇನೆ,

ಶ್ರೀ ಜಿ. ಪುಟ್ಟಸ್ವಾಮಿಗೌಡ, ನಾನು ಹೇಳಿದ ಮಾತಿನ ಹಿನ್ನೆಲೆ ಏನು ಅಂದರೆ ಅಕೌಂಟೆಂಟ್ ಜನರಲ್‌ರವರು ಸತತವಾಗಿ ಇಂತಹ ಒಂದು ಲೋಪಗಳನ್ನು ಗುರುತು ಮಾಡಿ ರಾಜ್ಯ ಸರ್ಕಾರಕ್ಕೆ ತಿಳಿಸುತ್ತಲೇ ಇದ್ದಾರೆ, ಈ ಸಾರ್ವಭೌಮತ್ವ ಸಭೆಯ ಅಧೀನ ಸಮಿತಿ ಆದ ಪಬ್ಲಿಕ್ ಅಕೌಂಟ್ಸ್

೧೧.೧೫ ಎ.ಎಂ.

ಕಮಿಟಿಯವರೂ ಕೂಡ ತಿಳಿಸಿದ್ದಾರೆ. ಕೇವಲ ಒಂದು ಕಾಲಕ್ಕೆ ಸಂಬಂಧಪಟ್ಟ ಸಮಸ್ಯೆಗಳಲ್ಲ, ನಾನು ಕೇಳಿದ್ದು. ಕರ್ನಾಟಕ ಲೋಕೋಪಯೋಗಿ ಇಲಾಖೆ ಹುಟ್ಟಿದಗಿನಿಂದ ಇವತ್ತಿನವರೆಗೆ ನಡೆದಿರತಕ್ಕಂಥ ಘಟನೆಗಳನ್ನು ಕ್ರೋಢೀಕರಿಸಿ ಈ ಮಾತನ್ನು ಹೇಳಿದ್ದೇನೆ. ಬಹುಶಃ ಇದನ್ನು ಅವರು ಏಕೆ ವೈಯಕ್ತಿಕವಾಗಿ ತಿಳಿದುಕೊಳ್ಳುತ್ತಾರೊ ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ವೈಯಕ್ತಿಕ ಏನಿಲ್ಲ. ಸಾರ್ವಜನಿಕರ ಹಣ ಪೋಲಾಗಿದೆ. ವೈಯಕ್ತಿಕವಾಗಿ ಯಾರ ಮೇಲೂ ಇಲ್ಲ. ಪುಟ್ಟಸ್ವಾಮಿಗೌಡರ ಮೇಲೆ ಇಲ್ಲ, ಮತ್ತೊಬ್ಬರ ಮೇಲೆ ಕೂಡ ವೈಯಕ್ತಿಕ ಏನಿಲ್ಲ, ಆಗಬಾರದ್ದು ಆಗಿದೆ ಅಂದರೆ ಸಾರ್ವಜನಿಕರ ಹಣ ಪೋಲಾಗಿದೆ ಎಂದು ಅರ್ಥ, ಅದು ಯಾವಾಗಲೇ ಆಗಿರಲಿ, ಸಾರ್ವಜನಿಕರ ಹಣ ಪೋಲಾಗಬೇಕಾದರೆ, ನಾವು ಜನರ ಕಸ್ಟೋಡಿಯನ್ನಾಗಿ ಇಲ್ಲಿ ಬಂದು ಕುಳಿತಿದ್ದೇವೆ. ಅದನ್ನು ನೋಡಿಕೊಂಡು, ಅದನ್ನು ತಡಕೊಂಡು ಕುಳಿತುಕೊಳ್ಳುವುದಕ್ಕೆ, ನಾನಂತೂ ಇಲ್ಲಿಗೆ ಬಂದಿಲ್ಲ. ಆ ದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ವೈಯಕ್ತಿಕವಾಗಿ ಯಾರ ಮೇಲೂ ಕೂಡ ಇಲ್ಲ. ನನಗೆ ಏಕೆ, ನಾನೂ ಯಾರ ಪರವಾಗಿ ಕೂಡ ಬಂದಿಲ್ಲ, ಜನಗಳ ಪರವಾಗಿ ನಾನು ಇಲ್ಲಿಗೆ ಬಂದಿರತಕ್ಕದ್ದು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸ್ವಾಮಿ, ಅಕೌಂಟೆಂಟ್ ಜನರಲ್, ಆಡಿಟರ್ ಜನರಲ್ ಯಾರಿದ್ದಾರೆ ಅವರು ಈ ಇಲಾಖೆಯ ಲೆಕ್ಕಪತ್ರಗಳನ್ನು ಪ್ರತಿವರ್ಷ ತಪಾಸಣೆ ಮಾಡುವುದರ ಮೂಲಕ ಇರತಕ್ಕಂಥ ನಿರ್ದಿಷ್ಟ ದೋಷಗಳನ್ನು, ಗುರುತು ಮಾಡಿ ರಾಜ್ಯ ಸರ್ಕಾರಕ್ಕೆ ತಿಳಿಸುತ್ತಿದ್ದಾರೆ. ೧೯೫೧ನೇ ಇಸವಿಯಿಂದ ಇವತ್ತಿನವರೆಗೂ ತಿಳಿಸುತ್ತಾ ಇದ್ದಾರೆ. ಹಾಗೆ ಈ ಇಲಾಖೆಯಲ್ಲಿ ಬೇನಾಮಿ ಕಂಟ್ರಾಕ್ಟರುಗಳಿಗೆ ಬೇಕಾದಷ್ಟು ಅಡ್ವಾನ್ಸ್ ಹಣ ಕೊಟ್ಟಿದ್ದಾರೆ., ಆ ಕಂಟ್ರಾಕ್ಟ್ ಕಂಪೆನಿಗಳು ಇವತ್ತು ಅಸ್ತಿತ್ವದಲ್ಲಿದ್ದಾವೋ ಇಲ್ಲವೋ ಎನ್ನುವುದನ್ನು ಗುರುತು ಮಾಡಲಿಕ್ಕೆ ಆಗಲಿಲ್ಲ. ನಾನು ಮೊದಲೆ ನನ್ನ ಪ್ರಸ್ತಾಪನೆಯಲ್ಲಿ ಹೇಳಿದ್ದೇನೆ, ಕೃಷ್ಣರೆಡ್ಡಿ ಅಂಡ್ ಕಂಪನಿಗೆ ಈ ರೀತಿ ಹಣ ಕೊಟ್ಟಿದ್ದಾರೆಂದು ಅಕೌಂಟಂಟ್ ಜನರಲ್‌ರವರು ಗುರುತು ಮಾಡಿದ್ದಾರೆ. ನಮಗೆ ಅವರ ವಿಳಾಸ ಪತ್ತೆ ಮಾಡಲಿಕ್ಕೆ ಇವತ್ತಿನವರೆಗೂ ಆಗಿಲ್ಲ ಎಂದು ಹೇಳುತ್ತಿದ್ದೇನೆ. ಇಂತಹ ಪ್ರಕರಣಗಳು ಸಾವಿರಾರು ನಮ್ಮ ಮುಂದೆ ಇದ್ದು, ನಾವು ಅವುಗಳನ್ನು ಪತ್ತೆಹಚ್ಚಿ ಅವರ ಮೇಲೆ ಕ್ರಮ ತೆಗೆದುಕೊಳುವುದಕ್ಕೆ ನಮಗೆ ಕಾನೂನಿನಲ್ಲಿಯೂ ಸ್ವಲ್ಪ ತೊಡಕು ಇದೆ. ಈ ಇಂತಹ ಅವ್ಯವಹಾರ ಆಗಿಹೋಗಿದೆ. ನಾವು ಬಂದ ಆರು ತಿಂಗಳಲ್ಲಿ ಇದನ್ನು ಬದಲಾವಣೆ ಮಾಡಿ ಎಲ್ಲವನ್ನೂ ಸರಿ ಮಾಡುತ್ತೇವೆ ಎಂದು ಹೇಳುವ ಮಟ್ಟಿಗೆ, ನಾನಂತೂ ಯಾವತ್ತೂ ಭಾಷಣ ಮಾಡಲಿಲ್ಲ, ಅದನ್ನು ತಿಳಿಸಲಿಲ್ಲ. ಆದರೆ ಅದಕ್ಕೆ ಇರತಕ್ಕಂಥ ಕಾರಣವನ್ನು ಹುಡುಕುವುದಕ್ಕೆ ನಾನು ಹೋಗುತ್ತೇನೆ ಎಂದು ಹೇಳಲಿಲ್ಲ. ನಾನು ಅದನ್ನೂ ಸಹ ಸ್ಪಷ್ಟ ಮಾಡಿದ್ದೇನೆ. ಕಾರಣ ಹುಡುಕಲಿಕ್ಕೆ ಹೋಗುವುದಿಲ್ಲ, ಅದು ಸರ್ಕಾರದ ಗುರಿಯಲ್ಲ, ನಾವು

ಅದನ್ನು ಸರಿಪಡಿಸಿ ಮುಂದೆ ಯಾವರೀತಿ ಮಾಡಬೇಕು ಎನ್ನುವುದಕ್ಕೆ ನಮ್ಮ ಮುಖ್ಯ ಮಂತ್ರಿಗಳ ನಿರ್ದೇಶನವಿದೆಯೇ ಹೊರತು, ಹಿಂದಿನ ಹುಳುಕನ್ನು ಕಂಡುಹಿಡಿಯುವುದು ನಮ್ಮ ಗುರಿಯಲ್ಲ ಎಂದು ಸ್ಪಷ್ಟಪಡಿಸಿದ್ದೇನೆ, ಆದುದರಿಂದ ಇರತಕ್ಕಂಥ ದೋಷಗಳನ್ನು ಸರಿಪಡಿಸಿ ಮುಂದೆ ಕೆಲಸವನ್ನು ಮಾಡುವುದಕ್ಕೆ ಕಾಯಾವಾಚಾ ಮನಸಾ ಕೆಲಸ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಸನ್ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಭರವಸೆ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯಲ್ಲಿ ತುಂಗ ಲಿಫ್ಟ್ ಇರಿಗೇಷನ್ ಆಗಬೇಕು ಎಂದು ಬಹಳ ಕಾಲದಿಂದ ಕೇಳುತ್ತಾ ಇದ್ದೇವೆ. ನಾನು ಮತ್ತು ಜಿಲ್ಲೆಯ ಎಲ್ಲ ಶಾಸಕರು ಸೇರಿ ತುಂಗ ಲಿಫ್ಟ್ ಇರಿಗೇಷನ್ ಆಗಬೇಕು ಎಂದು ಬರೆದುಕೊಟ್ಟಿದ್ದೇವೆ. ಹಿಂದಿನ ಸರ್ಕಾರ ಮಂಜೂರಾತಿ ಮಾಡಿ, ಇದರ ಖರ್ಚಿನಲ್ಲಿ ೧೦ ಪರ್ಸೆಂಟ್ ಸರ್ಕಾರ ವಹಿಸಬೇಕು ಹಾಗೂ ೧೫ ಪರ್ಸೆಂಟ್‌ನ್ನು ರೈತರು ಭರಿಸಬೇಕು ಮತ್ತು ೭೫ ಪರ್ಸೆಂಟ್‌ನ್ನು ಬ್ಯಾಂಕ್‌ನವರು ಭರಿಸಬೇಕು ಎನ್ನತಕ್ಕಂಥ ಒಂದು ಲೆಕ್ಕಾಚಾರಹಾಕಿ ಎಲ್ಲರಿಗೂ ನೋಟೀಸನ್ನು ಕಳಿಸಿದರು. ಈಗ ಅದು ಯಾವ ಸ್ಥಿತಿಯಲ್ಲಿದೆ ಮತ್ತು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ನಾನು ಹೇಳಿದಾಗ ಇರಲಿಲ್ಲ ಎಂದು ಕಾಣುತ್ತದೆ. ಈ ಏತ ನೀರಾವರಿ ಯೋಜನೆಗಳ ನಿಗಮಗಳನ್ನು ಮುಂದುವರಿಸಬೇಕು ಮತ್ತು ಹೆಚ್ಚು ಯೋಜನೆಗಳನ್ನು ಏತ ನೀರಾವರಿ ನಿಗಮಗಳ ಮೂಲಕ ಮಾಡಬೇಕು ಎನ್ನುವುದು ನಮ್ಮ ಸರ್ಕಾರದ ನಿರ್ಧಾರವೆಂದು ಈಗಾಗಲೇ ಹೇಳಿದ್ದೇನೆ, ರೈತರು ಕಟ್ಟಬೇಕಾದಂಥ ಶೇಕಡ ೧೫ ರಷ್ಟು ಹಣವನ್ನು ಸರ್ಕಾರವೇ ತುಂಬತಕ್ಕಂಥ ಒಂದು ನಿರ್ಣಯ ಕೂಡ ಮಾಡಿದೆಎಂದು ಹೇಳಿದ್ದೇನೆ. ಬಹುಶಃ ರೈತ ಸಮೂಹಕ್ಕೆ ನಮ್ಮ ಸರ್ಕಾರ ಕೊಟ್ಟಿರತಕ್ಕಂಥ ವಿಶೇಷವಾದಂಥ ಕೊಡುಗೆ ಎಂದು ಹೇಳಿದರೆ ತಪ್ಪಾಗಲಾರದು. ೧೦೦ ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ಮಾಡುವುದಾದರೆ ೨೫ ಕೋಟಿ ರೂಪಾಯಿಗಳನ್ನು ರೈತರ ಪರವಾಗಿ ವಂತಿಗೆಯನ್ನು ಈ ಸರ್ಕಾರ ಕಟ್ಟುತ್ತದೆ ಅಂದರೆ ಬಹುಶಃ ರೈತನಿಗೆ ಸರ್ಕಾರ ಕೊಟ್ಟಂಥ ಒಂದು ವಿಶೇಷವಾದ ಕೊಡುಗೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆದುದರಿಂದ ರೈತರು ತುಂಬಬೇಕಾದ ಹಣವನ್ನು ಕೊಡಬೇಕಾದ್ದಿಲ್ಲ, ಆ ಹಣವನ್ನು ಸರ್ಕಾರವೇ ಭರಿಸುತ್ತದೆ ಎನ್ನುವ ಮಾತನ್ನು ಹೇಳಿ, ಈ ಏತ ನೀರಾವರಿಗಳನ್ನು ಕೈಗೆತ್ತಿಕೊಳ್ಳತಕ್ಕಂಥ ಕಾರ್ಯಕ್ರಮವನ್ನು ಕೂಡಲೆ ಪ್ರಾರಂಭಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ೩೦೦ ಏತ ನೀರಾವರಿ ಯೋಜನೆಗಳಿವೆ, ಅವು ಪ್ರಾರಂಭವಾದರೆ ಸುಮಾರು ೪೦೦ ಎಕರೆಗೆ ನೀರು ಸಿಗುತ್ತದೆ. ಈಗ ಸುಮಾರು ೫೦ ಎಕರೆಗೆ ಮಾತ್ರ ನೀರು ಕೊಡುತ್ತಾ ಇದ್ದಾರೆ. ಏಕೆಂದರೆ ಅಲ್ಲಿ ಒಂದು ಸೊಸೈಟಿ ಇದೆ. ರೈತರ ಸೇವಾ ಸಹಕಾರ ಸಂಘ ಎಂದು ಇದೆ, ಅವರಿಗಿರುವ ಆರ್ಥಿಕ ತೊಂದರೆಯಿಂದಾಗಿ ಹೆಚ್ಚು ನೀರು ಕೊಡಲಿಕ್ಕೆ ಅವರಿಗೆ ಕಷ್ಟವಾಗಿದೆ. ಆದ್ದರಿಂದ ಆ ಭಾಗದ ಏತ ನೀರಾವರಿ ಯೋಜನೆಗಳನ್ನು ಸರ್ಕಾರ ವಹಿಸಿಕೊಳ್ಳಬೇಕು. ಮತ್ತೆ ಸರಪಾಡಿ ಅಣೆಕಟ್ಟಿನಿಂದ ವಿದ್ಯುತ್ ಉತ್ಪಾದನೆ ಮಾಡುವುದು ಮತ್ತು ಮಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವುದು ಮಾತ್ರ ಸೇರಿದೆ, ಇದರ ಜೊತೆಗೆ ಆಸುಪಾಸಿನ ರೈತರಿಗೆ ವ್ಯವಸಾಯ ಮಾಡಲು ನೀರು ಕೊಡತಕ್ಕ ವ್ಯವಸ್ಥೆ ಮಾಡಬೇಕು, ಎಲ್ಲಕ್ಕಿಂತ ಮುಖ್ಯವಾಗಿ ಮುಳುಗಡೆಯಾದಂಥ ಭೂಮಿಗೆ ಹೆಚ್ಚಿನ ಪರಿಹಾರ ಕೊಡಬೇಕು. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಬಂಟ್ವಾಳ ತಾಲ್ಲೂಕು, ಮಂಗಳೂರು ತಾಲ್ಲೂಕನ್ನು ಸೇರಿಸಿಲ್ಲ. ಈ ಈ ಎರಡು ತಾಲ್ಲೂಕಗಳನ್ನು ಸೇರಿಸಬೇಕೆಂದು ಹೇಳುತ್ತೇನೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಹೆಚ್ಚಿನ ರಸ್ತೆಗಳು ಹಾಳಾಗಿಹೋಗಿ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಕೇವಲ ವಿಠಲ ಕ್ಷೇತ್ರಕ್ಕೆ ಮಾತ್ರ ಅಲ್ಲ, ಪ್ರತಿಯೊಬ್ಬ ಶಾಸಕರುಗಳಿಗೂ ಅವರವರ ಕ್ಷೇತ್ರದಲ್ಲಿ ಕೆಲಸ ಮಾಡಲು ೧೦ ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡುವಂತೆ ವ್ಯವಸ್ಥೆ ಮಾಡಬೇಕು. ಮತ್ತೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ನೇತ್ರಾವತಿ ಹೊಳೆಗೆ ಈಗಿರುವ ಸೇತುವೆಯನ್ನು ಅಗಲಗೊಳಿಸುವ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಸರಪಾಡಿ ಯೋಜನೆಯಿಂದ ನೀರಾವರಿಗೆ ನೀರನ್ನು ಒದಗಿಸುವ ವಿಚಾರ ನಮ್ಮ ಮುಂದೆ ಇಲ್ಲ. ಈ ಯೋಜನೆಯನ್ನು ಕೇವಲ ಪವರ್ ಪ್ರಾಜೆಕ್ಟ್ ಆಗಿ ತೆಗೆದುಕೊಂಡಿದ್ದೇವೆ. ಪವರ್ ಕಾರ್ಪೊರೇಷನ್ ಈಗಾಗಲೇ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ. ಇದರ ಜೊತೆಗೆ ಮಂಗಳೂರಿಗೆ ಕುಡಿಯುವ ನೀರು ಒದಗಿಸುವುದು ಸಹ ಇದರಲ್ಲಿ ಸೇರಿದೆ.

ಇದರಿಂದ ನೀರಾವರಿಗೆ ಅನುಕೂಲ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆ. ಅರಣ್ಯ ಪ್ರದೇಶ ಬರುವುದರಿಂದ ಇದು ಕಷ್ಟದ ಕೆಲಸವೆಂದು ನಾನು ತಿಳಿದ್ಕೊಂಡಿದ್ದೇನೆ. ಇನ್ನು ಏತ ನೀರಾವರಿಯನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಪರಿಶೀಲಿಸುತ್ತೇನೆ, ಅದಕ್ಕಾಗಿ ಒಂದು ಯೋಜನೆ ಹಾಕಿಕೊಂಡಿದ್ದೇವೆ. ಇನ್ನು ರಸ್ತೆಗಳ ಬಗ್ಗೆ ಈಗಾಗಲೇ ಹೇಳಿದ್ದೇನೆ. ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಸಹ ಮೇಲ್ದರ್ಜೆಗೆ ಏರಿಸಿ, ಅದನ್ನು ನಾವೇ ನೋಡಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ನೀವು ೧೨ ಲಕ್ಷ ರೂ.ಗಳನ್ನು ಕೊಡುವುದು ಒಂದೊಂದು ಕ್ಷೇತ್ರಕ್ಕೋ ಒಂದೊಂದು ತಾಲ್ಲೂಕಿಗೋ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಪ್ರತಿ ತಾಲ್ಲೂಕಿಗೆ.

ಶ್ರೀ ಎ. ಟಿ, ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ರಾಜ್ಯದ ಸೇತುವೆಗಳ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಮಾತನ್ನೂ ಆಡಲಿಲ್ಲ. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ ಅಪೂರ್ಣಗೊಂಡಿರತಕ್ಕ ಸೇತುವೆಗಳನ್ನು ಪೂರ್ಣ ಮಾಡಬೇಕೆಂದು ಹೇಳುತ್ತೇನೆ. ಹೇಮಾವತಿ ನದಿಗೆ ಅಡ್ಡಲಾಗಿ ಕಟ್ಟಿರತಕ್ಕ ಸೇತುವೆ ಕಳೆದ ೨೦ ವರ್ಷಗಳಿಂದ ಪೂರ್ಣಗೊಳ್ಳುವುದಕ್ಕೆ ಕಾಯುತ್ತಾ ಇದೆ ಅದು ಕಛೇರಿಯಿಂದ ಕಛೇರಿಗೆ ಪ್ರತಿವರ್ಷ ಬದಲಾವಣೆಯಾಗಿ, ಪ್ರತಿದಿನ ೪-೫ ಜನ ರೈತರನ್ನು ಆಹುತಿ ತೆಗೆದುಕೊಳ್ಳುತ್ತಿದೆ.

ಅಧ್ಯಕ್ಷರು.—ಸಂಕ್ಷಿಪ್ತವಾಗಿರಬೇಕು.

ಶ್ರೀ ಎ. ಟಿ. ರಾಮಸ್ವಾಮಿ.—ದಯಮಾಡಿ ಬೇಗ ಆ ಕೆಲಸ ಮುಗಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈಗಿನ ಮುಖ್ಯಮಂತ್ರಿಗಳು ಆಗ ಲೋಕೋಪಯೋಗಿ ಸಚಿವರಾಗಿದ್ದಾಗ ಹಾಕಿದಂಥ ಅಸ್ತಿಭಾರಶಿಲೆ ೨೦ ವರ್ಷಗಳಿಂದ ಹಾಗೆಯೇ ಇದೆ. ಮತ್ತೆ ಮುಖ್ಯಮಂತ್ರಿಗಳಾಗಿದ್ದಾರೆ. ಇವರ ಕಾಲದಲ್ಲಿಯೇ ಇದು ಮುಗಿಯಬೇಕು. ಮಾನ್ಯ ಅರ್ಥ ಮಂತ್ರಿಗಳು ಉದಾರತೆಯಿಂದ ಹಣದ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ೨ನೇಯದು ಆಡಳಿತ ವಿಕೇಂದ್ರೀಕರಣದ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ತಾಲ್ಲೂಕಿಗೂ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯನ್ನು ಕೊಡಬೇಕೆಂದು ಕೇಳಿದ್ದೆ. ನಮ್ಮಲ್ಲಿ ಸಣ್ಣ ನೀರಾವರಿ ತಾಲ್ಲೂಕ್‌ಗಳಿಗೆ ಸೇರಿದಂತೆ ಸಂಬಂಧಪಟ್ಟಂತೆ ಕಾರ್ಯಸಹಾಯಕ ಪಾಲಕ ಅಭಿಯಂತರ ಕಛೇರಿಯನ್ನು ಮಂಡ್ಯದಲ್ಲಿಟ್ಟಿದ್ದಾರೆ. ಈ ಪದ್ಧತಿಯನ್ನು ದೂರ ಮಾಡಿ, ಪತ್ರಿ ತಾಲ್ಲೂಕಿಗೂ ಸಹ ಸಹಾಯಕ ಕಾರ್ಯಪಾಲಕ ಅಭಿಯಂತರ ಕಛೇರಿಯನ್ನು ಕೊಡಬೇಕು, ವರ್ಕ್‌ಲೋಡ್ ಸಾಲದೇ ಇದ್ದರೆ, ಸಣ್ಣ ನೀರಾವರಿಯನ್ನು ಸಹ ಅವರಿಗೆ ವಹಿಸಿ ಅದರ ಜವಾಬ್ದಾರಿಯ ನಿರ್ವಹಣೆ ಮಾಡುವಂತಹ ಮತ್ತು ರೈತರಿಗೆ ಅನುಕೂಲವಾಗುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಸದಸ್ಯರು ಹೇಳಿದಹಾಗೆ ಈ ರಾಜ್ಯದ ಬಹುತೇಕ ಯೋಜನೆಗಳು ಸನ್ಮಾನ್ಯ ವೀರೇಂದ್ರಪಾಟೀಲರು ಅಂದು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಮುಖ್ಯಮಂತ್ರಿಗಳಾಗಿದ್ದಾಗ ಹಾಕಿದಂತಹ ಅಸ್ತಿಭಾರ ಶಿಲೆಗಳು ಇವತ್ತಿನವರೆಗೂ ಮುಗಿಯುವುದಕ್ಕೆ ಸಾಧ್ಯ ಆಗಿಲ್ಲ. ಬಹುಶಃ ಈರಾಜ್ಯದ ಸೌಭಾಗ್ಯ ಅಂತ ಕಾಣುತ್ತದೆ. ಅವರು ಮತ್ತೆ ಮುಖ್ಯಮಂತ್ರಿಯಾದಾಗಲೇ ಅವೆಲ್ಲಾ ಪೂರ್ಣ ಗೊಳ್ಳಬೇಕೆಂದು ವಿಧಿನಿಯಮ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ನಾವು ಕೆಲಸ ಮಾಡುತ್ತೇವೆ. ಕಟ್ಟೆ ಮಳವಾಡಿ ರಸ್ತೆಗೆ ೨೫ ವರ್ಷಗಳ ಹಿಂದೆ ಅಸ್ತಿಭಾರ ಶಿಲೆ ಹಾಕಿ ಇದುವರೆಗೆ ೨೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ .

ಶ್ರೀ ವಾಟಾಳ್ ನಾಗರಾಜ್.—ಅಸ್ತಿಭಾರ ಶಿಲೆಗೆ ಹಾಕಿದಕಲ್ಲುಗಳೆಲ್ಲಾ ಕೊಚ್ಚಿಕೊಂಡು ಹೋಗಿವೆ.

ಶ್ರೀ ಎಂ. ವೀರಭದ್ರಪ್ಪ.—ಕಲ್ಲುಗಳು ಕೊಚ್ಚಿಕೊಂಡು ಹೋಗಿವೆ. ಜೊತೆಗೆ ಇಲ್ಲಿ ಹಲವಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಮೊನ್ನೆ ಕೂಡ ಪತ್ರಿಕೆಯಲ್ಲಿ ಓದಿದೆ. ಮೂರು ಜನ ಪ್ರಯಾಣಿಕರು ಅದರಲ್ಲಿ ಕೊಚ್ಚಿ ಹೋದರು ಎಂದು ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಸನ್ಮಾನ್ಯ ಸದಸ್ಯರು ಹಲವಾರು ಪತ್ರಗಳನ್ನು ಬರೆದಿದ್ದಾರೆ. ಈ ಸಭೆಯಲ್ಲಿಯೂ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ರಸ್ತೆ ಜಿಲ್ಲಾಪರಿಷತ್ತಿಗೆ ವರ್ಗವಾಗಿದೆ. ನಮ್ಮ ಇಲಾಖೆಗೆ ಸಂಬಂಧಪಟ್ಟದ್ದು ಅಲ್ಲ. ಆದರೆ ಆ ರಸ್ತೆಯನ್ನು ಈಗ ನಮ್ಮ ಇಲಾಖೆಗೆ ಸೇರಿಸಿಕೊಳ್ಳ

ತಕ್ಕಂಥ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಮತ್ತು ಆ ಸೇತುವೆ ಕೆಲಸವನ್ನು ಕೂಡ ಈ ವರ್ಷ ಪೂರ್ತಿ ಮಾಡತಕ್ಕಂಥಾದ್ದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಈ ಮೊದಲು ೨೩ ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದ್ದಂಥ ಸೇತುವೆ ಒಂದು ಕೋಟಿ ೬೭ ಲಕ್ಷ ರೂಪಾಯಿ ಬೇಕಾಗುತ್ತದೆ ಎನ್ನತಕ್ಕ ಅಂದಾಜು ಕೊಟ್ಟಿದ್ದಾರೆ. ಈಗಾಗಲೇ ಆರ್ಥಿಕ ಇಲಾಖೆಯ ಒಪ್ಪಿಗೆಗೆ ಸಂಬಂಧಪಟ್ಟ ಕಡತವನ್ನು ಕಳುಹಿಸಿದ್ದೇವೆ. ಅದು ಮಂಜೂರಾಗತಕ್ಕ ಚಿಹ್ನೆ ಕೂಡ ಇದೆ. ಅದು ಆದನಂತರ ಈ ವರ್ಷದಿಂದ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಸ್ಪಷ್ಟ ಭರವಸೆಯನ್ನು ಸನ್ಮಾನ್ಯ ಮಿತ್ರರಿಗೆ ಕೊಡ ಬಯಸುತ್ತೇನೆ. ಮಾನ್ಯ ಸದಸ್ಯರು ಮತ್ತೊಂದು ಮಾತನ್ನು ಹೇಳಿದರು, ಈ ವಿಭಾಗೀಯ ಕಚೇರಿ ಗಳನ್ನು ಪ್ರತಿ ತಾಲ್ಲೂಕು ಮಟ್ಟದಲ್ಲಿಯೂ ಮಾಡದೇ ಹೋದರೆ ಆಡಳಿತಕ್ಕೆ ತೊಂದರೆಯಾಗುತ್ತ ದೆಂದು ಹೇಳಿದರು. ಈ ಕಾರ್ಯದಲ್ಲಿ ಸ್ವಲ್ಪ ಗೊಂದಲ ಇದೆ. ಸಣ್ಣ ನೀರಾವರಿಗೆ ಒಂದು ಎಕ್ಸಿ ಕ್ಯುಟೀವ್ ಇಂಜಿನಿಯರ್ ಆಫೀಸ್ ಮತ್ತು ದೊಡ್ಡ ನೀರಾವರಿಗೆ ಒಂದು ಎಕ್ಸಿಕ್ಯುಟಿವ್ ಇಂಜಿನಿಯರ್ ಆಫೀಸ್ ಮತ್ತು ರಸ್ತೆಗೆ ಸಂಬಂಧಪಟ್ಟಂತೆ ಒಂದು ಆಫೀಸ್ ಈ ರೀತಿಯಲ್ಲಿ ಒಂದು ಗೊಂದಲಮಯ ವಾಗಿದೆ ಇದನ್ನು ಸರಿಪಡಿಸುವ ಹಿನ್ನೆಲೆಯಲ್ಲಿ ಈಗಾಗಲೇ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವಂಥ ಪರಿಸ್ಥಿತಿಯಲ್ಲಿದೆ ಅದನ್ನು ಶೀಘ್ರದಲ್ಲಿಯೇ ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ,

ಶ್ರೀ ಎಂ. ವೀರಭದ್ರಪ್ಪ.—ಸನ್ಮಾನ್ಯ ಅಧ್ಯಕ್ಷರೆ. ಲೋಕೋಪಯೋಗಿ ಇಲಾಖೆ ಬೇಡಿಕೆಯ ಬಗ್ಗೆ ನನಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕಲಿಲ್ಲ. ನಮ್ಮ ಮಂತ್ರಿಗಳು ಈ ರೋಡ್ ವರ್ಕ್ಸ್‌ಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು, ಮುಖ್ಯಮಂತ್ರಿಗಳ ಸಹಕಾರದಿಂದ ಈ ಒಂದು ಕಾರ್ಯ ರೂಪವನ್ನು ಮಾಡಿದ್ದಾರೆ. ಈ ಬಿಲ್ಡಿಂಗ್ ರಿಪೇರಿ ಬಗ್ಗೆ ಮೂರು ಪರ್‌ಸೆಂಟ್ ಇಟ್ಟುಕೊಂಡಿದ್ದೇವೆ. ಹಣ ಬಂದನಂತರ ಮಾಡಲಿಕ್ಕೆ ಅನುಕೂಲವಾಗುತ್ತದೆಂದು ಹೇಳಿದರು. ಈ ರೋಡ್ ರಿಪೇರಿ ಬಗ್ಗೆ ಹಳೆಯ ಕಾಲದಲ್ಲಿರುವಂತೆ ಒಂದು ಕಿಲೋಮೀಟರ್‌ಗೆ ೧,೮೦೦ ರೂಪಾಯಿ ಇರತಕ್ಕಂಥ ವ್ಯವಸ್ಥೆಯನ್ನು ಇಟ್ಟುಕೊಂಡು ಇವೊತ್ತು ಹೈಕೋರ್ಟ್ ಆಜ್ಞೆಯ ಪ್ರಕಾರ ಗ್ಯಾಂಗ್‌ಮನ್‌ಗಳ ಸಂಬಳಕ್ಕೆ ಸಾಲದೇ ಬರುವಂಥ ಪರಿಸ್ಥಿತಿ ಇದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿಲ್ಲ. ಇನ್ನೊಂದು ನನಗೆ ಆಶ್ಚರ್ಯವಾಗತಕ್ಕಂಥ ವಿಚಾರ. ಚಿಕ್ಕಮಗಳೂರು ಜಿಲ್ಲೆ ಕಡೂರು ಭಾಗ ದಲ್ಲಿರತಕ್ಕ ನನ್ನ ಕ್ಷೇತ್ರದ ರಸ್ತೆಗಳಿಗೆ ಕಳೆದ ಹತ್ತು ವರ್ಷದಿಂದಲೂ ಒಂದು ಹಿಡಿ ಮಣ್ಣು ಮತ್ತು ಜಲ್ಲಿ ಹಾಕಿಲ್ಲ. ಇಷ್ಟು ಜನ ಗ್ಯಾಂಗ್‌ಮನ್ ಇಟ್ಟುಕೊಂಡು ಏನು ಕೆಲಸ ಮಾಡುತ್ತೀರಾ ಅಂದರೆ, ೧,೮೦೦ ರೂಪಾಯಿ ಕೊಡತಕ್ಕಂಥಾದ್ದು ಕೇವಲ ಗ್ಯಾಂಗ್‌ಮನ್ ಸಂಬಳಕ್ಕೆ ಹೋಗುತ್ತದೆ. ರೋಡ್ ಹೇಗೆ ರಿಪೇರಿ ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಕೇಳುತ್ತಾರೆ. ಆ ಪದ್ಧತಿಯನ್ನು ತಪ್ಪಿಸಿ, ಅವರ ಸಂಬಳ ಮತ್ತು ರೋಡ್ ರಿಪೇರಿಗೆ ಆಗತಕ್ಕ ಖರ್ಚು ಏನು ಬರುತ್ತದೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸಹಕಾರವನ್ನು ಪಡೆದು, ಮುಂದೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ ಅನುಕೂಲವಾಗುವಂತೆ, ಯೋಜನೆಗಳನ್ನು ರೂಪಿಸಿಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದಂತೆ ಕೇವಲ ೧೦೦ ಕಿಲೋಮೀಟರ್ ರಸ್ತೆ ಇದೆ. ಅದಕ್ಕೆ ಹತ್ತು ವರ್ಷದಿಂದ ಒಂದು ಹಿಡಿ ಮಣ್ಣು ಹಾಕಿಲ್ಲ. ರೋಡ್‌ನಲ್ಲಿ ಹೋಗತಕ್ಕ ಎಷ್ಟೋ ಬಸ್ಸುಗಳು ಬಿದ್ದುಹೋಗಿವೆ. ಹಾಗೆ ಟ್ರಾಕ್ಟರ್‌ನಲ್ಲಿ ಹೋಗತಕ್ಕ ಹೆಣ್ಣುಮಕ್ಕಳು ಬಿದ್ದು ಹೆರಿಗೆ ಮಾಡಿಕೊಂಡಿದ್ದಾರೆ. ಇಂತಹ ಪರಿಸ್ಥಿತಿ ಇದ್ದಾಗ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಿಸಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡಮೇಲೆ ಅದರಲ್ಲಿ ಈ ಬಗ್ಗೆ ಸಾಕಷ್ಟು ಕೇಳಿಕೊಂಡಿದ್ದೇನೆ, ಮತ್ತೆ ಬರೆದುಕೊಟ್ಟಿದ್ದು ಆಗಿದೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಜಿಲ್ಲಾಪರಿಷತ್‌ಗಳಿಂದ ಕಟ್ಟಿರತಕ್ಕ ರಸ್ತೆಗಳನ್ನು ಮತ್ತು ಪಿ ಡಬ್ಲ್ಯು.ಡಿ. ಯಿಂದ ಆಗತಕ್ಕ ರಿಪೇರಿ ಕೆಲಸ ಅಗತ್ಯವಾಗಿ ಆಗುವ ಕಡೆ ಗಮನಕೊಡಬೇಕು. ಈಗ ಕೇವಲ ೧೨ ಸಾವಿರ ರೂಪಾಯಿ ಜಲ್ಲಿ, ಮಣ್ಣು ಹಾಕಿಸಲಿಕ್ಕೆ ಉಪಯೋಗಿಸುತ್ತಿದ್ದಾರೆ. ಈಗ ನಮ್ಮಲ್ಲಿ ಬರಗಾಲ ಇದೆ. ಈ ಕಾರ್ಯಕ್ರಮ ವನ್ನು ರೂಪಿಸಿಕೊಂಡು ಕೆಲಸ ಮಾಡಲಿಕ್ಕೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು. ಇದರ ಜೊತೆಗೆ ರೋಡ್ ರಿಪೇರಿ ಬಗ್ಗೆ ತಾವು ಏನು ನಿಲುವು ತೆಗೆದುಕೊಂಡಿದ್ದೀರಿ. ಅದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈಗ ರಸ್ತೆ ದುರಸ್ತಿಗೆ ಕೊಡತಕ್ಕ ಹಣ ಏನೇನೂ ಸಾಲದು. ಕೊಡತಕ್ಕ ೨,೪೦೦ ರೂಪಾಯಿ ಮೈನ್‌ಟೆನ್ಸ್ ಗ್ರಾಂಟ್ ಆದರೆ, ಬಹುಶಃ ೧,೯೦೦ ರೂಪಾಯಿಗಳಷ್ಟು ಅಲ್ಲಿಯ ಗ್ಯಾಂಗ್‌ಮನ್‌ಗೆ, ದಿನಕೂಲಿ ನೌಕರರಿಗೆ ಹೋಗುತ್ತದೆ, ಹೀಗಾಗಿ ಯಾವ ರೋಡ್ ಅನ್ನು ಮೈನ್‌ಟೆನೆನ್ಸ್ ಮಾಡಲಿಕ್ಕೆ ಆಗಿಲ್ಲ. ಈಗ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಪ್ರಸ್ತಾವನೆಗೆ ಕಳುಹಿ

ಸಿದ್ದೇವೆ. ೬,೪೦೦ ರೂಪಾಯಿ ಆದರೂ ನಿಷ್ಟ ಕೊಡಬೇಕೆಂದು ಹೇಳಿದ್ದೇವೆ. ಕೇಂದ್ರಸರ್ಕಾರದವರು ಕೂಡ ಈ ದಿಸೆಯಲ್ಲಿ ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆ. ಶೀಘ್ರದಲ್ಲಿ ಅದು ತೀರ್ಮಾನವಾದರೆ ಈ ರಸ್ತೆಗಳ ದುರಸ್ತಿ ಕಾರ್ಯ ಸಮರ್ಪಕವಾಗಿ ಆಗುತ್ತದೆ. ರಸ್ತೆಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಹೇಳಿದ್ದಾರೆ ಅದನ್ನು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ.

ಅಧ್ಯಕ್ಷರು.—ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ಗೊಂದಲ)

ಅಧ್ಯಕ್ಷರು.—ಒಬ್ಬೊಬ್ಬರೂ ಸಹ ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು ಆ ಕಂಡೀಷನ್ ಮೇಲೆ ಕೇಳುವುದಾದರೆ ಮಾತ್ರ ಅವಕಾಶ ಕೊಡುತ್ತೇನೆ. ಅದೂ ಸಹ ಸಂಕ್ಷಿಪ್ತವಾದ ಪಾಯಿಂಟ್ ಅದರಲ್ಲಿ ಇರಬೇಕು. ಭಾಷಣ ಮಾಡಿ ಅರಿಕೆ ಮಾಡಿಕೊಳ್ಳುತ್ತೇನೆಂದು ಹೇಳಿದರೆ ನಾನು ಒಪ್ಪುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ.—ನಾನು ಭಾಷಣ ಮಾಡುವಂತಹ ಸಂದರ್ಭದಲ್ಲಿ ತುಮಕೂರು ಚಿತ್ರದುರ್ಗ ಜಿಲ್ಲೆಗೆ ನೀರು ಕೊಡತಕ್ಕಂತಹ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ತಾವು ಏನೂ ಪ್ರಸ್ತಾಪ ಮಾಡಲಿಲ್ಲ. ಅದರ ಬಗ್ಗೆ ಹೇಳಬೇಕು. ಭದ್ರಾ ಮೇಲ್ದಂಡೆ ಯೋಜನೆ ಜೊತೆಗೆ ಇನ್ನೂ ಯಾವುದಾದರೂ ಯೋಜನೆಗಳು ಸರಕಾರದ ಗಮನದಲ್ಲಿದೆಯೋ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಭದ್ರಾ ಯೋಜನೆ ಸರಕಾರದ ಚಿಂತನೆಯಲ್ಲಿದೆ. ಇನ್ನು ಬೇರೆ ಯಾವ ಯೋಜನೆಗಳು ಎಂದು ಹೇಳಿದರೆ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ನೇತ್ರಾವತಿ ನದಿಯನ್ನು ತುಮಕೂರು ಜಿಲ್ಲೆಗೆ ತರುವುದರ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸಬೇಕು.

ಅಧ್ಯಕ್ಷರು.—ಅದನ್ನು ಪರಿಶೀಲನೆ ಮಾಡಿ.

ಶ್ರೀ ಟಿ. ಬಿ. ಜಯಚಂದ್ರ.—ನಾನು ಪ್ರಸ್ತಾಪ ಮಾಡಿರುವ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಸರಿಯಾದ ಉತ್ತರ ಕೊಡಲಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರಾ.—ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹಿಂದಿನಿಂದ ಅನ್ಯಾಯವಾಗಿದೆ. ಅದನ್ನು ಅಲಕ್ಷ್ಯ ಮಾಡಲಾಗಿದೆ. ಈಗ ನೀವು ಮಂತ್ರಿಯಾಗಿ ಬಂದಿದ್ದೀರಿ. ಅದನ್ನು ಈಗ ಸರಿ ಮಾಡುತ್ತೀರಾ? ಧಾರವಾಡ ಜಿಲ್ಲೆಯಲ್ಲಿ ವರದಾ ನದಿ ಇದೆ. ಅದರ ನೀರನ್ನು ನಾವು ಬಳಸಿಕೊಳ್ಳಬೇಕಾಗುತ್ತದೆ. ಅದಕ್ಕೆ ತಾವು ಏನು ಮಾಡುತ್ತೀರಿ, ಕಟ್ಟೆಯನ್ನು ಯಾವಾಗ ಕಟ್ಟುತ್ತೀರಾ ಇಲ್ಲವೇ ಜಿಲ್ಲೆಯಲ್ಲಿ ರಿಸರ್ವಾಯರನ್ನು ಕಟ್ಟುತ್ತೀರಾ ಎಂಬ ಬಗ್ಗೆ ಹೇಳಬೇಕು ಮತ್ತು ಎಲ್ಲಿಗೆ ಸೇರಬೇಕಾಗಿದೆ ಹೇಳಿ. ಪರಿಶಿಷ್ಟ ಜಾತಿ ವರ್ಗದ ಜನಾಂಗದವರಿಗೆ ಅದರಲ್ಲೂ ವಿಶೇಷವಾಗಿ ಈ ವರ್ಗ ಅಧಿಕಾರಿಗಳಿಗೆ ಪ್ರಮೋಷನ್ ಕೊಡಬೇಕಾಗುತ್ತದೆ. ಅವರಿಗೆ ಆ ಪ್ರಮೋಷನ್ ಸಿಗದಂತೆ ವಿಶಿಷ್ಟ ಹಿತಾಸಕ್ತಿಗಳು ಪ್ರಯತ್ನ ಮಾಡುತ್ತಿದ್ದಾರೆ. ಸಣ್ಣಪುಟ್ಟ ಅಲಿಗೇಷನ್ ಮಾಡಿ ಪ್ರಮೋಷನ್ ಕೊಡಬಾರದೆಂದು ಸರಕಾರದ ಮುಂದೆ ಒತ್ತಾಯ ತರುತ್ತಿದ್ದಾರೆ. ಇಂಥಾದ್ದಕ್ಕೆ ಎಡೆಮಾಡಿಕೊಡದೆ ಅವರಿಗೆ ನ್ಯಾಯವಾಗಿ ಸಿಗಬೇಕಾದ ಪ್ರಮೋಷನ್ ಏನು ಇದೆ ಅದನ್ನು ಕೊಡುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಕೆಲಸದಲ್ಲಿ ಅಲಕ್ಷ್ಯ ತೋರಿಸಲಾಗಿದೆ ತಾರತಮ್ಯ ಮಾಡಲಾಗಿದೆ, ಈಗ ಅದನ್ನು ಸರಿಪಡಿಸುತ್ತೀರಾ ಎಂದು ಕೇಳಿದ್ದಾರೆ. ನನ್ನ ಪ್ರಸ್ತಾವನಾ ಭಾಷಣದಲ್ಲಿ ನಾನು ಹೇಳಿದ್ದೇನೆ. ಯಾವುದೇ ತಾರತಮ್ಯವಿಲ್ಲದೆ, ಯಾವುದೇ ಭಾಗವಂಥ ದ್ವೇಷವಿಲ್ಲದೆ ರಾಜ್ಯದ ಸಮಗ್ರ ದೃಷ್ಟಿಯಿಂದ ಕೆಲಸ ಮಾಡುತ್ತೇನೆಂದು ಸ್ಪಷ್ಟಪಡಿಸಿದ್ದೇನೆ. ಇನ್ನೊಂದು ಮಾತನ್ನು ಹೇಳುತ್ತೇನೆ. ಆ ಭಾಗಕ್ಕೆ ಒಬ್ಬ ದಕ್ಷ ಅಧಿಕಾರಿ ಮುಖ್ಯ ಇಂಜಿನಿಯರ್ ಬೇಕು, ಆ ಕೆಲಸಗಳನ್ನು ನಿಗದಿತ ವೇಳೆಯಲ್ಲಿ ಮುಗಿಸಲು ಮತ್ತು ಅದರ ಗುಣಮಟ್ಟವನ್ನು ಕಾಯ್ದುಕೊಂಡು ಕೆಲಸ ಮಾಡಬೇಕು, ಮತ್ತು ಜನತೆಯ ಇಂಗಿತವನ್ನು ಅರಿತು ಶಾಸಕರ ಮನಸ್ಸು ಅರಿತು ಕೆಲಸ ಮಾಡಬೇಕು ಎಂದು ಮುಖ್ಯ ಇಂಜಿನಿಯರ್ ಆದ ವೆಂಕಟೇಶ್ವರರಾವ್ ಅವರನ್ನು ವರ್ಗ ಮಾಡಿದ್ದೇನೆ. ಅವರು ನಿಮ್ಮೆಲ್ಲರ ನಿರೀಕ್ಷೆಗೆ ತಕ್ಕಂತೆ ಹೆಚ್ಚು ಕೆಲಸ ಮಾಡುತ್ತಾರೆಂದು ವಿಶ್ವಾಸ ಇಟ್ಟುಕೊಂಡಿದ್ದೇನೆ. ಆದ್ದರಿಂದ ಯಾವುದೇ ವಿಧವಾದ ಸಂಶಯವನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಆ ಭಾಗದ ಅಭಿವೃದ್ಧಿ ಕೆಲಸಗಳು ಆಗುತ್ತದೆಂದು ತಿಳಿಸಬಯಸುತ್ತೇನೆ. ಇನ್ನು ಪರಿಶಿಷ್ಟ ವರ್ಗದವರಿಗೆ

ಬಡ್ತಿ ಕೊಡತಕ್ಕಂಥದ್ದರಲ್ಲಿ ಕೆಲವು ಹಿತಾಸಕ್ತಿಗಳು ಅಡ್ಡಿ ಬರುತ್ತಿವೆ. ಆದ್ದರಿಂದ ಯಾವುದೋ ಕಾರಣ ಹಾಕಿ ಅನ್ಯಾಯ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಆ ಸಂಶಯಕ್ಕೆ ಅವಕಾಶ ಇಲ್ಲ. ಯಾವ ಶಕ್ತಿಗಳೂ ಕೂಡ ಅಡ್ಡಿ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಅದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಕೊಟ್ಟಿರತಕ್ಕಂತಹ ಆದ್ಯತೆ ಬಹುಶಃ ಇನ್ನು ಯಾವ ರಾಜ್ಯದಲ್ಲೂ ಈ ಪ್ರಮಾಣದಲ್ಲಿ ದೊರೆತಿಲ್ಲ ಎಂಬ ಹೆಮ್ಮೆಯ ಮಾತನ್ನು ಅವರಿಗೆ ತಿಳಿಸಬಯಸುತ್ತೇನೆ ಯಾವ ಶಕ್ತಿಗಳೂ ಕೂಡ ಅಡ್ಡ ಬಂದಿಲ್ಲ. ಆ ಸಂಶಯಗಳು ಅವರಿಗೆ ಬೇಡವೆಂದು ಹೇಳಬಯಸುತ್ತೇನೆ. ಮತ್ತೆ ಮಾನ್ಯ ಸದಸ್ಯರು ವರದಾ ನದಿಯ ಪ್ರಾಜೆಕ್ಟ್ ಬಗ್ಗೆ ಏನು ಹೇಳಿದ್ದಾರೆ, ಅದನ್ನು ಈಗಾಗಲೇ ಸರ್ಕಾರ ಪರಿಶೀಲಿಸುತ್ತಿದೆ.

ಡಾ॥ ಎನ್. ಬಿ. ಸಂಜಪ್ಪ.—ಮಾನ್ಯ ಅಧ್ಯಕ್ಷರೆ, ಬಾಗೂರು ನವಿಲೆ ಟನಲ್ ಕೆಲಸ ಕಂಪ್ಲೀಟ್ ಆಗಿದೆ. ಅದು ಸುಮಾರು ೮೦ ಅಡಿಯಿಂದ ೧೨೦ ಅಡಿ ಆಳದಲ್ಲಿ ಹೋಗುತ್ತಿದೆ. ಎರಡೂ ಕಡೆಗಳಲ್ಲಿ ಕಳೆದ ೩ ವರ್ಷಗಳಿಂದ ಮಳೆ ಇಲ್ಲದಿರುವುದರಿಂದ ಅಲ್ಲಿಯ ಜನರಿಗೆ ಕುಡಿಯುವುದಕ್ಕೆ ನೀರಿಲ್ಲದೆ ಸುತ್ತಮುತ್ತಲ ಹಳ್ಳಿಯ ಜನರು ಬಹಳ ಕಷ್ಟದಲ್ಲಿದ್ದು ಸುಮಾರು ೫ ಕಿಲೋಮೀಟರ್‌ವರೆಗೂ ನೀರಿಗಾಗಿ ಅಲೆದಾಡುವ ಪರಿಸ್ಥಿತಿ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿನ ಸುತ್ತಮುತ್ತಲ ಜನರಿಗೆ ಕುಡಿಯುವ ನೀರನ್ನೊದಗಿಸುವುದಕ್ಕೆ ಪ್ರಯತ್ನವನ್ನು ತೀವ್ರವಾಗಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಇದರ ಬಗ್ಗೆ ಮಾನ್ಯ ಮಂತ್ರಿಗಳ ಉತ್ತರ ಏನು ಎಂಬುದನ್ನು ಕೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಬಾಗೂರು ನವಿಲೆ ಎಕ್ಸಿಟ್‌ನಿಂದ ಹಿಂದೆ ಇದ್ದಂಥ ಚೀಫ್ ಇಂಜಿನಿಯರ್‌ರವರು "ಬಿ" ಅಲೈನ್‌ಮೆಂಟನ್ನು ನಿಗದಿ ಮಾಡಿದ್ದರು. ಆದರೆ ಅಲ್ಲಿ ಕೆಲಸ ಮಾಡದೆ ತುಮಕೂರು ಜಿಲ್ಲೆಯಿಂದ ಕೆಲಸವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಈಗ "ವೈ" ಅಲೈನ್‌ಮೆಂಟ್‌ನಲ್ಲಿ ಕೆಲಸ ಮಾಡುವುದಕ್ಕೆ ಹೋದರೆ ಅಲ್ಲಿ ೧೪ ಸಾವಿರ ತೆಂಗಿನ ಮರಗಳು ಹೋಗುತ್ತವೆ ಗದ್ದೆಗಳು ಹೋಗುತ್ತವೆ ಕೆರೆಗಳು ಹೋಗುತ್ತವೆ, ೬ ಗ್ರಾಮಗಳಿಗೆ ತೊಂದರೆ ಆಗುತ್ತದೆ. "ಬಿ" ಅಲೈನ್‌ಮೆಂಟ್‌ನಲ್ಲಿ ಆದರೆ ೫೦೦ ತೆಂಗಿನಮರಗಳು ಮಾತ್ರ ಹೋಗುತ್ತವೆ. ಗದ್ದೆ ಹೋಗುವುದಿಲ್ಲ, ಕೆರೆಗಳು ಹೋಗುವುದಿಲ್ಲ, ಯಾವ ಊರುಗಳಿಗೂ ತೊಂದರೆಯಾಗುವುದಿಲ್ಲ. ಖುಷ್ಕಿ ಜಮೀನು ಯಾವುದೂ ಹೋಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಟನಲ್‌ನ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿರತಕ್ಕ ಜನರಿಗೆ ಕುಡಿಯುವ ನೀರಿಗೆ ಈಗಾಗಲೇ ವ್ಯವಸ್ಥೆ ಮಾಡತಕ್ಕ ಕಾರ್ಯಕ್ರಮವನ್ನು ನಾವು ಕೈಗೊಂಡಿದ್ದೇವೆ. ಇರತಕ್ಕ ಪ್ರಸ್ತುತ ಪರಿಸ್ಥಿತಿಯನ್ನು ನಾವು ಪರಿಶೀಲಿಸಿದ್ದೇವೆ, ಮತ್ತು ತಿಳಿದುಕೊಂಡಿದ್ದೇವೆ. ಅಷ್ಟೇ ಅಲ್ಲದೆ ಇದರ ಬಗ್ಗೆ ಸೂಕ್ತ ಕ್ರಮವನ್ನೂ ಕೂಡ ನಾವು ಕೈಗೊಂಡಿದ್ದೇವೆಂಬ ಮಾತನ್ನು ಮಾನ್ಯ ಸದಸ್ಯರಿಗೆ ಈ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಾನ್ಯ ಸದಸ್ಯರು ಅಲೈನ್‌ಮೆಂಟ್ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಗೊಂದು ಅತಿ ಪ್ರಮುಖವಾದ ವಿಚಾರ. ನಾವು ಈಗ ಕಾವೇರಿ ಕೊಳ್ಳದ ಯೋಜನೆಗಳನ್ನು ಆದಷ್ಟು ಬೇಗ ಪೂರೈಸಬೇಕಾದ ಪರಿಸ್ಥಿತಿಯಲ್ಲಿದ್ದೇವೆ ಆದ್ದರಿಂದ, ನಾವು ಮಾನ್ಯ ಎಲ್ಲ ಶಾಸಕರೂ ಹಾಗೂ ಎಲ್ಲ ರೈತರೂ ಈ ಯೋಜನೆಗೆ ಸಂಪೂರ್ಣವಾಗಿ ಸಹಕರಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಇವರಲ್ಲಿ ಯಾವುದೇ ರೀತಿಯ ಪ್ರತಿಷ್ಠೆಯ ಮೇಲೆ ನಿಲ್ಲದೆ ಈ ನೀರನ್ನು ನಾವು ಉಪಯೋಗಿಸಿಕೊಳ್ಳಲೇಬೇಕೆಂಬ ಸದ್ಭಾವನೆಯನ್ನು ಇಟ್ಟುಕೊಂಡು ಎಲ್ಲಾ ರೀತಿಯಲ್ಲೂ ಜನರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. "ವೈ" ಅಲೈನ್‌ಮೆಂಟ್ ಎಂದು ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ಇದು ಲಾಭ-ನಷ್ಟದ ಪ್ರಶ್ನೆ ಅಲ್ಲ. ಕಾವೇರಿ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲೇಬೇಕಾಗಿದೆ. ಇದು ರಾಜ್ಯದ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಯಾವುದೇ ರೀತಿಯ ಗೊಂದಲಕ್ಕೂ ಅವಕಾಶ ಮಾಡಿಕೊಡದೆ ಮಾನ್ಯ ಸದಸ್ಯರು ತಮ್ಮ ತಮ್ಮ ಮುಖಂಡತ್ವದಲ್ಲಿ ರೈತರನ್ನು ಒಲಿಸಿಕೊಳ್ಳಬೇಕು. ಇದು ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ಪ್ರಶ್ನೆಯಾಗಿದೆಯೇ ಹೊರತು ಹಣದ ಪ್ರಶ್ನೆ ಅಲ್ಲ. "ವೈ" ಅಲೈನ್‌ಮೆಂಟ್ ಎಂದು ಸರ್ಕಾರ ಏನು ತೀರ್ಮಾನ ಮಾಡಿದೆ, ಇದೇ ಅಂತಿಮ ಅಲೈನ್‌ಮೆಂಟ್ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆಯ ದಿವಸ ಮಾತನಾಡುವಾಗ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ಈ ಬೆಂಗಳೂರಿನ ಸೌಂದರ್ಯದ ಬಗ್ಗೆ ಮತ್ತು ಬೆಂಗಳೂರಿನ ನಾಗರೀಕರಿಗೆ ಒದಗಿಸಬೇಕಾದ ಸೌಲಭ್ಯಗಳ ವಿಚಾರದಲ್ಲಿ ಬಹುಪಾಲು ಈ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಜವಾಬ್ದಾರಿ ಇದೆಯೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯ ಏನು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಅಕ್ಷರಶಃ ಸತ್ಯವಾಗಿದೆ. ಇದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಜವಾಬ್ದಾರಿ, ಮತ್ತು ಅವರು ಇದನ್ನು ಮಾಡಲೂ ಬೇಕಾಗುತ್ತದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೆ, ಸೇಡಂ ಕ್ಷೇತ್ರದಲ್ಲಿ ಬರುವ ಚಿತಾಪುರ ತಾಲ್ಲೂಕಿನ ಅಲ್ಲೂರು "ಬಿ" ಗ್ರಾಮದಲ್ಲಿ ಒಂದು ಕೆರೆಯ ನಿರ್ಮಾಣ ಕಾರ್ಯವನ್ನು ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ ಕೈಗೊಳ್ಳಲಾಗಿದೆ ಈ ಕೆರೆಯ ಬಂಡು ಕುಸಿದಿದ್ದು ಇದರ ರಿಪೇರಿಗಾಗಿ ಕಳೆದ ೨–೩ ವರ್ಷಗಳಹಿಂದೆ ಕೇಳಿಕೊಂಡಿದ್ದರೂ ಸಹ ಆಡಳಿತಾತ್ಮಕ ಮಂಜೂರಾತಿ ಇನ್ನೂ ಆಗಿಲ್ಲ. ಅದಷ್ಟು ಬೇಗನೇ ಈ ಕೆಲಸ ಆಗದಿದ್ದರೆ ಈ ಕೆರೆಯ ಬಂಡು ಒಡೆದುಹೋಗಿ ಅಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಆದ್ದರಿಂದ ಈ ಕೆರೆಯನ್ನು ಈ ವರ್ಷ ರಿಪೇರಿ ಮಾಡುವರೇ ? ಎರಡನೆಯದೇನೆಂದರೆ ಸೇಡಮ್ ತಾಲ್ಲೂಕಿನಲ್ಲಿ ಅಲ್ಲಿ ಪುರಕೆರೆಗೆ ೧೯೮೮ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಪ್ರತಿ ವರ್ಷವೂ ಟೋಕನ್ ಗ್ರಾಂಟ್ ಇಟ್ಟಿದ್ದಾರೆ. ಈವರ್ಷದ ಆಯವ್ಯಯದಲ್ಲಿ ಸೇರಿಸಿದ್ದಾರೆ, ಎಸ್ಟಿಮೇಟ್ ಸಹ ತಯಾರಾಗಿದೆ. ಇದಕ್ಕೆ ಮೂರನೇ ಒಂದು ಭಾಗದ ಹಣವನ್ನು ಒದಗಿಸಿ ಈ ವರ್ಷವೇ ಆ ಕೆಲಸವನ್ನು ಪ್ರಾರಂಭ ಮಾಡುವರೇ ? ನಗಟ್ಲಪಾಟ್ ಕೆರೆ ಈ ವರ್ಷದ ಆಯವ್ಯಯದಲ್ಲಿ ಸೇರಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಈ ವರ್ಷ ಆ ಕೆಲಸವನ್ನು ಪ್ರಾರಂಭ ಮಾಡುವರೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಮಾಹಿತಿಯನ್ನು ಕೊಡಲು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಮೂರು ಪ್ರಮುಖವಾದ ಪ್ರಶ್ನೆಗಳನ್ನು ಕೂಡ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎ. ಬಿ. ಜಕನೂರು.—ಮಾನ್ಯ ಅಧ್ಯಕ್ಷರೇ, ಪ್ರತಿವರ್ಷ ಬೇಸಿಗೆಯಲ್ಲಿ ನಮ್ಮ ಸರ್ಕಾರದವರು ಮಹಾರಾಷ್ಟ್ರ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಕೃಷ್ಣಾನದಿಯಿಂದ ನೀರನ್ನು ಬಿಡಿಸುತ್ತಿದ್ದಾರೆ. ಅದರ ಬದಲಿ ಹಿಪ್ಪರಗಿ ಬ್ಯಾರೇಜ್ ಪೋರ್ಷನ್‌ನ್ನು ಬೇಗನೇ ಕಟ್ಟಿಸಿದರೆ ಪ್ರತಿವರ್ಷ ದುಡ್ಡನ್ನು ಕೊಟ್ಟು ನೀರನ್ನು ತೆಗೆದುಕೊಳ್ಳುವುದು ತಪ್ಪುತ್ತದೆ ಮತ್ತು ಅಷ್ಟು ದುಡ್ಡನ್ನು ಸರ್ಕಾರಕ್ಕೆ ಉಳಿಸಬಹುದು. ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಕೇಳಿದಾಗ ೧೩ ಕೋಟಿ ಒದಗಿಸಿ ೩ ವರ್ಷದಲ್ಲಿಯೇ ಮುಗಿಸಿಕೊಡುತ್ತೇವೆಂದು ಹೇಳಿದ್ದರು. ಆದರೆ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ದಯವಿಟ್ಟು ಇದನ್ನು ಎರಡು ವರ್ಷದಲ್ಲಿ ಮುಗಿಸಿ ನೀರನ್ನು ಸ್ಟೋರೇಜ್‌ಮಾಡಿ, ನಮಗೆ ನೀರನ್ನು ಬಿಡುತ್ತಾರೆಯೇ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಹಿಪ್ಪರಗಿ ಬ್ಯಾರೇಜ್ ಪ್ರಾರಂಭವಾಗಿ ಈಗಾಗಲೇ ೧೮ ವರ್ಷಗಳಾಗಿದೆ. ೬ ಕೋಟಿ ಹಣವನ್ನು ಖರ್ಚುಮಾಡಿದ್ದಾರೆ. ಈಗ ಬಾಂದಾರವನ್ನು ನಿರ್ಮಾಣ ಮಾಡಲಿಕ್ಕೆ ಹೋದರೆ ೫೫ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಪಟ್ಟಿ ತಯಾರು ಮಾಡಿದ್ದಾರೆ. ಇದು ಬಹಳ ಅಗತ್ಯವಾದ ಕಾರ್ಯ. ಮಹಾರಾಷ್ಟ್ರದಿಂದ ಪ್ರತಿವರ್ಷ ಹಣವನ್ನು ಕೊಟ್ಟು ಕುಡಿಯುವ ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ನನಗೆ ಗೊತ್ತಿರುವ ಹಾಗೆ ೧೫ ಲಕ್ಷ ರೂಪಾಯಿಗಳ ನೀರಿನ ಬಾಕಿಯನ್ನು ನಾವು ಕೊಡಬೇಕಾಗಿದೆ. ಇದನ್ನು ಮಾಡಿದರೆ ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಯಂತೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸುವುದಷ್ಟೇಅಲ್ಲ, ಬೇರೆ ರಾಜ್ಯಕ್ಕೆ ಕೊಡುವಂಥ ಹಣವೂ ಉಳಿಯುತ್ತದೆ. ಆದ್ದರಿಂದ ಈ ವರ್ಷದ ಆಯವ್ಯಯದಲ್ಲಿ ಸೇರಿಸುವುದಕ್ಕೆ ನಮ್ಮ ಇಲಾಖೆಯವತಿಯಿಂದ ಮನವಿ ಪತ್ರವನ್ನು ಅರ್ಥ ಇಲಾಖೆಗೆ ಕಳುಹಿಸಿ

ಕೊಟ್ಟಿದ್ದೇವೆ. ಅರ್ಥ ಇಲಾಖೆಯವರು ತಮ್ಮ ಸಂಪನ್ಮೂಲಗಳ ಅತಿಮಿತಿಯನ್ನು ತಿಳಿದು. ಈ ಸಾರಿ ಇದನ್ನು ಸೇರಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ಪೂರಕ ಬೇಡಿಕೆಯಲ್ಲಿ ಇದನ್ನು ಸೇರಿಸಲಿಕ್ಕೆ ಮತ್ತೊಮ್ಮೆ ವಿತ್ತೀಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅದನ್ನು ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ದಿವಸ ಮಲಪ್ರಭಯೋಜನೆ ಮುಳುಗಡೆ ಪ್ರದೇಶಗಳ ಸಲುವಾಗಿ ಹೇಳಿದ್ದೆ. ಈಗ ಕಾಡಾ ಇದೆ. ಈ ಕಾಡಾ ಆಫೀಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೀಗಾಗಿ ಮುಳುಗಡೆ ಪ್ರದೇಶದ ಜನರಿಗೆ ಯಾವುದೇ ಸೌಕರ್ಯಗಳು ಸಿಗುತ್ತಿಲ್ಲ. ಆದಕಾರಣ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಮ್‌ಗೆ ಬಂದಿದ್ದಾಗ ಜಿಲ್ಲೆಯ ಎಲ್ಲ ಶಾಸಕರು ಅವಿರೋಧವಾಗಿ ಈ ಎರಡು ಆಫೀಸುಗಳ ಬಗ್ಗೆ ತಕರಾರು ಎತ್ತಿದ್ದೆವು ಆದರೂ ಸಹಿತ ಇದುವರೆಗೆ ಯಾವ ಕ್ರಮವನ್ನು ಕೈಗೊಂಡಿಲ್ಲ, ಯಾವಾಗ ಕ್ರಮ ತೆಗೆದುಕೊಳ್ಳುತ್ತಿರೆಂಬುದನ್ನು ಹೇಳಬೇಕು. ಮತ್ತು ಸವದತ್ತಿಯ ಎಸ್. ಎಲ್ ಜಿ. ಆಫೀಸನ್ನು ಮುಂದುವರಿಸಬೇಕೆಂದು ಎಲ್ಲ ಸದಸ್ಯರು ಕೇಳಿಕೊಂಡಿದ್ದೆವು. ಆದ್ದರಿಂದ ಅದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಚಾರ ಪದೇ ಪದೇ ಪ್ರಸ್ತಾಪಕ್ಕೆ ಬಂದಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಅತಿ ಶೀಘ್ರದಲ್ಲಿಯೇ ಈ ಕಚೇರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ನಾವು ನಿರ್ದೇಶನ ಕೊಡುತ್ತೇವೆ. ಮತ್ತು ಅದರ ಫಲ ನೇರವಾಗಿ ಮುಳುಗಡೆಯಾಗುವ ರೈತರಿಗೆ ಸಿಗುವಂತೆ ನೋಡಿಕೊಳ್ಳುತ್ತೇವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಎಸ್ ಎಲ್ ಓ ಆಫೀಸ್ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ನಾನು ಅದರಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಸನ್ಮಾನ್ಯ ಅಧ್ಯಕ್ಷರೇ. ನಮ್ಮ ಜಿಲ್ಲೆ ಪರಶುರಾಮ ಸೃಷ್ಟಿ ಅಂದರೆ ಬ್ರಹ್ಮಸೃಷ್ಟಿಯಲ್ಲಿರುವ ನೀವು ಬೇರೆ ದೃಷ್ಟಿಯಲ್ಲಿ ನಮ್ಮನ್ನು ನೋಡಬೇಕಾಗುತ್ತದೆ. ಏತಕ್ಕೆಂದರೆ ೧೨೦ ಇಂಚು ಮಳೆಬೀಳತಕ್ಕಂಥ ಈ ಪ್ರದೇಶದ ಎಲ್ಲ ರಸ್ತೆಗಳು ಹಾಳಾಗುತ್ತಿವೆ. ನಮ್ಮ ಪುಣ್ಯಕ್ಕೆ ನೀವು ಬಂದಿರುತ್ತೀರಿ. ರಾಷ್ಟ್ರೀಯ ಹೆದ್ದಾರಿಗಳನ್ನು ಬಿಟ್ಟರೆ, ಒಳಬದಿ ರಸ್ತೆಗಳಲ್ಲಿ ಬಾಳೆಗಿಡಗಳನ್ನು ನೆಟ್ಟು ರಸ್ತೆಗಳಲ್ಲಿ ನಮ್ಮನ್ನು ಓಡಾಡದಂತೆ ಮಾಡಿದ್ದಾರೆ. ಆದ್ದರಿಂದ ಈ ಭಾಗದ ಅಳತೆಗೋಲನ್ನು ಬದಲಿಸಿ, ೧೨೦ ಇಂಚು ಮಳೆಬರುವ ಕಡೆ ಹೆಚ್ಚು ಹಣವನ್ನು ಒದಗಿಸಿಕೊಟ್ಟು ರಸ್ತೆಗಳ ರಿಪೇರಿಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಅಲ್ಲಿ ತೆಳ್ಳಗೆ ಹಾಕುವ

೧೧.೪೫ ಎ. ಎಂ.

ಡಾಂಬರ್ ನಮಗೆ ಸಾಲದು, ದಪ್ಪ ಡಾಂಬರ್ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಸಮುದ್ರ ಕೊರೆತವನ್ನು ತಾವು ನೋಡಿದ್ದೀರಿ ಮತ್ತು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ನೀವು ಬಂದಾಗ ಮನೆಗಳಹತ್ತಿರ ಸಮುದ್ರದ ಅಲೆಇತ್ತು, ಈಗ ಅಲ್ಲಿ ಒಂದು ಮನೆ ಕೊಚ್ಚಿ ಹೋಗಿದೆ. ಆದ್ದರಿಂದ ನಿಮ್ಮ ಪಟ್ಟಿಯಲ್ಲಿ ಶಶಿಹಕಲ್ಲ ಗ್ರಾಮವನ್ನು ಸೇರಿಸಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸಮುದ್ರದ ಕೊರೆತದ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಹಣಕೂಡ ಬಿಡುಗಡೆ ಮಾಡಿದ್ದೇವೆ. ನಿನ್ನೆ ದಿವಸ ಸೂಕ್ತ ನಿರ್ದೇಶನ ಕೊಟ್ಟು ಮುಖ್ಯ ಇಂಜಿನಿಯರ್ ಅವರನ್ನು ಇಲ್ಲಿಂದ ಆ ಸ್ಥಳಕ್ಕೆ ಕಳುಹಿಸಿದ್ದೇವೆ ಮಾನ್ಯ ಸದಸ್ಯರು ಶಶಿಹಕ್ಲು ಗ್ರಾಮವನ್ನು ಸಹ ಸೇರಿಸಬೇಕೆಂದು ಕೇಳಿದ್ದಾರೆ. ಆ ಬಗ್ಗೆ ಈಗಲೇ ನಿರ್ದೇಶನವನ್ನು ತಂತಿ ಮೂಲಕ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ರಸ್ತೆ ಬಗ್ಗೆ ವಿಶೇಷ ಗಮನ ಕೊಡಬೇಕೆಂದು ಹೇಳಿದ್ದಾರೆ. ಇಷ್ಟರಲ್ಲೇ ಅದನ್ನು ಕೂಡ ಮಾಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ವಸಂತ ಸಾಲಿಯಾನ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂರಾರು ಅಣೆಕಟ್ಟುಗಳಿವೆ. ಕಳೆದ ೧೨ ವರ್ಷಗಳಿಂದ ಈ ಅಣೆಕಟ್ಟುಗಳ ದುರಸ್ತಿಯನ್ನು ಮಾಡುವುದೇ ಆಗಿದೆ ೧೯೮೩ರಿಂದ ನಾನು ವಿಧಾನಸಭೆಯಲ್ಲಿ ಹೇಳುತ್ತಿದ್ದೇನೆ. ಆದರೂ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಅವರಲ್ಲಿ ಕೆಲವೊಂದು ಅಣೆಕಟ್ಟುಗಳು ಜಿಲ್ಲಾಪರಿಷತ್ತಿಗೆ ಸೇರಿವೆ, ಕೆಲವು ದೊಡ್ಡ ಅಣೆಕಟ್ಟುಗಳು ಸಣ್ಣ ನೀರಾವರಿ

ಇಲಾಖೆಗೆ ಸೇರಿವೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಅಣೆಕಟ್ಟುಗಳ ರಿಪೇರಿ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸಿ ಈ ಅಣೆಕಟ್ಟುಗಳನ್ನು ದುರಸ್ತಿ ಮಾಡಬೇಕು. ಈಗ ಸಾವಿರಾರು ಎಕರೆ ಜಮೀನಿಗೆ ನೀರಿಲ್ಲದೇ ರೈತರಿಗೆ ತುಂಬಾ ತೊಂದರೆಯಾಗಿದೆ. ಮಂತ್ರಿಗಳು ಕೂಡಲೇ ಅಣೆಕಟ್ಟಿನ ದುರಸ್ತಿಗೆ ಹಣ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಸ್. ರಮೇಶ್.—ಬೆಂಗಳೂರು ಪಕ್ಕದಲ್ಲಿರತಕ್ಕ ರಸ್ತೆಗಳು ಏನಿವೆ ಅವು ಬಹಳ ಕುಲಗೆಟ್ಟು ಹೋಗಿವೆ ಆಸ್ಪತ್ರೆಗೆ ಗರ್ಭಿಣಿ ಸ್ತ್ರೀಯರು ಹೆರಿಗೆಗಾಗಿ ಬಂದರೆ, ಅಲ್ಲಿನ ವೈದ್ಯರು ಚುಡಾಯಿಸುತ್ತಾರೆ. ಉತ್ತರಹಳ್ಳಿ ಕಡೆಯಿಂದ ಬರುವಾಗ ಅಲ್ಲೇ ಹೆರಿಗೆ ಆಗಬೇಕಾಗಿತ್ತು, ಎಂದು ಚುಡಾಯಿಸುವ ಮಟ್ಟಕ್ಕೆ ರಸ್ತೆಗಳು ಬಂದಿವೆ. ನಗರದಲ್ಲಿರತಕ್ಕ ಇಂಜಿನಿಯರ್‌ಗಳು ಕಛೇರಿಯಲ್ಲಿ ಸಿಗುವುದಿಲ್ಲ, ನಾವು ಬರೆಯುತಕ್ಕ ಪತ್ರಗಳಿಗೆ ಉತ್ತರ ಬರುವುದಿಲ್ಲ. ಆ ರೀತಿ ಗ್ರಾಮಾಂತರ ಪ್ರದೇಶದ ರಸ್ತೆಗಳಿಗೆ ಏನು ಹಣ ಇಟ್ಟಿದ್ದೀರಿ, ಅಂತೆಯೇ ನಗರದ ರಸ್ತೆಗಳಿಗೂ ಹಣ ಇಟ್ಟು ಅವುಗಳನ್ನು ಸರಿಪಡಿಸುವ ಕಡೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ ಪುಟ್ಟಸ್ವಾಮಿಗೌಡ,—ಗಮನ ಕೊಡಲಾಗುವುದು.

SRI S. S. JOSHI.—While speaking on the demands, I have suggested not to shift the office of Minor Irrigation from Chickodi to Belgaum because it will cause very much difficulties and Hukkeri, Chikkodi and other two Taluks. The Second thing is whether it is possible to give more amount to Doodhganga project because it is the lifeline of Chickodi Taluk.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆ ವಿಭಾಗದ ಕಛೇರಿಯನ್ನು ಸ್ಥಳಾಂತರ ಮಾಡುವ ವಿಚಾರ ತೀವ್ರ ಪರಿಶೀಲನೆಯಲ್ಲಿದೆ. ಆ ಬಗ್ಗೆ ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡಿದ್ದೇನೆ. ದೂದ್‌ಗಂಗಾ ಪ್ರಾಜೆಕ್ಟ್‌ಗೆ ಹಣ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಕರಿಯಣ್ಣ.—ನಮ್ಮಲ್ಲಿ ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಕಳೆದ ವರ್ಷಕ್ಕಿಂತ ಈ ವರ್ಷ ೪೦ ಲಕ್ಷ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೀರಿ, ಅಲ್ಲಿ ಹೆಚ್ಚು ಇರಿಗೇಟೆಡ್ ಏರಿಯ ಆಗಿದ್ದು ಅಲ್ಲಿರತಕ್ಕ ರಸ್ತೆಗಳನ್ನು ರಿಪೇರಿ ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಈ ಸಾರಿ ಹೆಚ್ಚಿಗೆ ಹಣ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಇರಿಗೇಟೆಡ್ ಏರಿಯಾದಲ್ಲಿರುವ ಐ. ಟಿ. ರಸ್ತೆಗಳಿಗೆ ಸರ್ಕಾರದವರು ಷುಗರ್‌ಕೇನ್‌ಸೆಸ್ ಅನ್ನು ಕಲೆಕ್ಟ್ ಮಾಡುತ್ತಿದ್ದಾರೆ, ಆದರೂ ಸಹ ಆ ರಸ್ತೆಗಳನ್ನು ಕೂಡ ರಿಪೇರಿ ಮಾಡುತ್ತಿಲ್ಲ. ಅದನ್ನು ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಗೊಂದಿ ಚಾನಲ್ ಬಗ್ಗೆ ಪ್ರಶ್ನೆ ಹಾಕಿದ್ದೇನೆ. ಅದಕ್ಕೆ ಈ ವರ್ಷ ಏನಾದರೂ ಮಾಡಿ ವರ್ಲ್ಡ್ ಬ್ಯಾಂಕ್ ಸ್ಕೀಂನಿಂದ ಅದನ್ನು ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸ್ವಾಮಿ, ಗೋಂದಿ ಕೆನಾಲ್ ಆಧುನೀಕರಣಕ್ಕೆ ಜಾಗತಿಕ ಬ್ಯಾಂಕಿನ ನಿರ್ವಹಣಾ ಯೋಜನೆಯಲ್ಲಿ ಈಗಾಗಲೇ ಕಳುಹಿಸಿಕೊಡಲಾಗಿದೆ. ಭದ್ರಾ ಅಚ್ಚುಕಟ್ಟು ಪ್ರದೇಶಗಳಿಗೆ ಹೆಚ್ಚು ಹಣ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಐ. ಟಿ. ರೋಡ್‌ಗಳ ರಿಪೇರಿಯನ್ನು ಷುಗರ್ ಕೇನ್ ಟ್ಯಾಕ್ಸ್‌ನಲ್ಲಿ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಈಗಾಗಲೇ ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಮನೋಹರ ತಹಸೀಲ್ದಾರ್.—ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆಯೆಂದರೆ ನಾನು ಕೇಳಿದ ಪ್ರಶ್ನೆಗೆ ಏನೂ ಉತ್ತರ ಬರಲಿಲ್ಲ. ಕರ್ನಾಟಕದಲ್ಲಿ ಹಳೇ ಮೈಸೂರು, ಹೊಸ ಮೈಸೂರು ಎಂದಾಗಿ, ಉತ್ತರ ಕರ್ನಾಟಕವನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಅದಕ್ಕೋಸ್ಕರ ಯಾವರೀತಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮ ಮಾಡಿದ್ದಾರೋ, ಅದೇರೀತಿ ಮುಂಬೈ ಕರ್ನಾಟಕ ಅಭಿವೃದ್ಧಿ ನಿಗಮ ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಅದಕ್ಕೆ ಉತ್ತರ ಬರಲಿಲ್ಲ. ಎರಡನೆಯದಾಗಿ ನಮ್ಮ ಕ್ಷೇತ್ರದಲ್ಲಿ ವರದಾ ಮತ್ತು ಧರ್ಮ ನದಿಗೆ ಬ್ಯಾರೇಜಸ್ ಕಟ್ಟತಕ್ಕದ್ದು—೩, ಲಿಫ್ಟ್ ಇರಿಗೇಷನ್—೪, ಇವುಗಳಿಗೆ ಹತ್ತು ವರ್ಷಗಳಿಂದ ಹಣ ಇಲ್ಲದೆ, ಅವು ಕಾಯುತ್ತಿವೆ ಮಂತ್ರಿಗಳು ಬಂದು ಅಡಿಗಲ್ಲು

ಸಮಾರಂಭವನ್ನೂ ಮಾಡಿದ್ದಾರೆ. ಆದ್ದರಿಂದ ಇವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಸದನದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ಕಳಪೆ ಕೆಲಸ ಮಾಡುತ್ತಿರುವ ಇಂಜಿನಿಯರುಗಳು ಅಥವಾ ಕಂಟ್ರಾಕ್ಟರುಗಳ ಮೇಲೆ ಹತೋಟಿ ಇಡುವುದಕ್ಕೆ ರಾಜ್ಯಮಟ್ಟದ ಹೈ ಪವರ್ ಕಮಿಟಿಯನ್ನು ನೇಮಿಸಿ ಅದರ ಮೂಲಕ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೆವು. ಇದಕ್ಕೂ ಉತ್ತರ ಬರಲಿಲ್ಲ. ಹದ್ದರಿಂದ ಇವೆಲ್ಲದಕ್ಕ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸ್ವಾಮಿ, ವರದಾ ನದಿಗೆ ಅಡ್ಡಲಾಗಿ ಬಾಂದಾರಗಳನ್ನು (ಬ್ಯಾರೇಜಸ್) ಕಟ್ಟತಕ್ಕದ್ದು, ನಾಲ್ಕು ಏತನೀರಾವರಿ ಕೆಲಸ ತೆಗೆದುಕೊಳ್ಳತಕ್ಕದ್ದು, ಇಂಥ ಪ್ರಮುಖ ಯೋಜನೆಗಳ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. ಉತ್ತರ ಕರ್ನಾಟಕವನ್ನು ಕಡೆಗಣಿಸಿದ್ದಾರೆಂದು ಹೇಳಿದ್ದಾರೆ. ಅದು ಆಧಾರರಹಿತವಾದುದು ಎಂಬ ಮಾತನ್ನು ಹೇಳುತ್ತೇನೆ. ಮತ್ತೊಂದು ಸಾರಿ ಸ್ಪಷ್ಟಪಡಿಸುತ್ತೇನೆ ಎಲ್ಲಾ ಜಿಲ್ಲೆಗಳಲ್ಲೂ ಸಾಕಷ್ಟು ಆದ್ಯತೆ ಕೊಟ್ಟು ರಾಜ್ಯದ ಸರ್ವತೋಮುಖ ಬೆಳವಣಿಗೆ ಮಾಡುವುದಕ್ಕೆ ಮತ್ತು ಮುನ್ನಡೆಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಆ ಸಂಶಯ ಸನ್ಮಿತ್ರರಿಗೆ ಇರುವುದು ಬೇಡ ಎಂದು ಹೇಳುತ್ತೇನೆ. ಕಂಟ್ರಾಕ್ಟರ್‌ಗಳು ಕಳಪೆ ಕೆಲಸ ಮಾಡಿ ದುಡ್ಡು ಹೊಡೆಯುತ್ತಾರೆಂದು ಹೇಳಿದ್ದಾರೆ. ಈಗಾಗಲೇ ಅದರ ಉಗ್ರ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ರಾಜ್ಯಮಟ್ಟದ ಹೈ ಪವರ್ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಮಾಡತಕ್ಕದ್ದು ತಪ್ಪೇನಿಲ್ಲ. ಅದನ್ನು ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಹಲಗೇಗೌಡ.—ಸನ್ಮಾನ್ಯ ಅಧ್ಯಕ್ಷರೆ, ಹೇಮಾವತಿ ಎಡದಂಡೆ ನಾಲೆ ವ್ಯಾಪ್ತಿಯಲ್ಲಿ ಬರತಕ್ಕ ಕೆರೆಗಳಿಗೆ ಕಳೆದ ಮೂರು ವರ್ಷಗಳಿಂದ ಬೆಳೆ ಮಾಡುವುದಕ್ಕೆ ನೀರು ಕೊಡುತ್ತಿದ್ದರು. ಆದರೆ ಕಳೆದ ವರ್ಷ ನೀರು ಕೊಡದೇ ಬೆಳೆ ಒಣಗಿ ಅದು ನಾಶವಾಗುವ ಪರಿಸ್ಥಿತಿ ಬಂದಾಗ ನಾನು ಕಾರ್ಯದರ್ಶಿ—೧ ಅವರನ್ನು ಹೋಗಿ ಕೇಳಿದಾಗ ನೀರು ಕೊಡುತ್ತೇವೆಂದು ಎಲ್ಲಿ ಹೇಳಿದ್ದೆವು ಎಂದು ಹೇಳಿದರು. ಈ ಬಗ್ಗೆ ಮಾನ್ಯ ಸಚಿವರಲ್ಲೂ ಕೇಳಿ ಕೊಂಡೆವು ಕಳೆದ ಮೂರು ವರ್ಷಗಳಿಂದ ನೀರು ಕೊಡುತ್ತಿದ್ದರೂ ಈ ವರ್ಷ ಕೊಡಲಿಲ್ಲ. ಕೊಡುತ್ತಾರೋ ಇಲ್ಲವೋ ಎಂಬುದನ್ನು ಹೇಳಬೇಕು. ಎಡದಂಡೆ ನಾಲೆಯ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲ ಕೆರೆಗಳಿಗೆ ನೀರನ್ನು ತಮ್ಮ ಕಾಲದಲ್ಲಾದರೂ ತುಂಬಿಕೊಟ್ಟು ಅನುಕೂಲ ಮಾಡಿಕೊಡುತ್ತೀರಾ ? ಕಾವೇರಿ ಜಲಾನಯನ ಪ್ರದೇಶದ ಕಾಲುವೆಗಳು ನದಿಯಷ್ಟೇ ದೊಡ್ಡದಾಗಿ ಜಮೀನಿಗೆ ನೀರು ಬರುವುದು ಕಷ್ಟವಾಗಿದೆ ಅದಕ್ಕೆ ಬದಲಿ ವ್ಯವಸ್ಥೆ ಮಾಡುತ್ತೀರಾ ? ನನ್ನ ಕ್ಷೇತ್ರದಲ್ಲಿ ಚಟ್ಟಂಗೆರೆ ಸುರಂಗ ಪ್ರದೇಶ ಇದೆ. ಅಲ್ಲಿ ಕೂಡ ೮೦-೧೨೦ ಅಡಿ ಆಳ ಹೋಗಿರುವುದರಿಂದ, ಕುಡಿಯುವ ನೀರಿಗೆ ಮತ್ತು ಬೆಳೆಗೆ ತೊಂದರೆಯಾಗಿದೆ. ಅದರ ಬಗ್ಗೆ ಗಮನ ಕೊಡಬೇಕು. ಇನ್ನು ನಾಲ್ಕನೆಯದಾಗಿ...

ಅಧ್ಯಕ್ಷರು.—ನಾಲ್ಕನೇದು ಬೇಡ. ಇಕ್ಕೇ ನಿಲ್ಲಿಸಿ. ಈ ಇಕ್ಕೆ ಉತ್ತರ ಕೊಡಲಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸನ್ಮಾನ್ಯ ಸದಸ್ಯರು ಮೂರು ವರ್ಷದಿಂದ ಕೆರೆಗೆ ನೀರು ಕೊಟ್ಟಿದ್ದರು, ಕಳೆದಸಾರಿ ಕೊಡಲಿಲ್ಲ, ಕೇಳುವುದಕ್ಕೆ ಹೋದರೆ ಕಾರ್ಯದರ್ಶಿಯವರು ಮತ್ತು ಮಂತ್ರಿಗಳು ನೀರು ಕೊಡುತ್ತೇವೆಂದು ಹೇಳಿರಲಿಲ್ಲ ಎಂದು ಹೇಳಿದರು ಎಂದು ಹೇಳಿದ್ದಾರೆ. ಇಲಾಖೆ ಪತಿಯಿಂದ ಆ ರೀತಿ ಹೇಳಿದ್ದಾರೆ ಎಂದು ಹೇಳಿದರು. ನಮ್ಮಲ್ಲಿ ಈಗಾಗಲೇ ಅಣೆಕಟ್ಟನ್ನು ಕಟ್ಟಿದ್ದೇವೆ. ನೀರನ್ನು ನಿಲ್ಲಿಸಿದ್ದೇವೆ. ಆದರೆ ಡಿಸ್ಟ್ರಿಬ್ಯೂಷನ್ ಕೆನಾಲ್ ಕೆಲಸ ಆಗಲಿಲ್ಲ. ಇದರಿಂದ ಆ ಭಾಗದಲ್ಲಿರತಕ್ಕ ರೈತರು ನೀರನ್ನು ಉಪಯೋಗಿಸಿಕೊಳ್ಳಲಿ ಎಂಬ ದೃಷ್ಟಿಯಿಂದ ಕಾನೂನನ್ನು ಹೊರತುಪಡಿಸಿ ಅನಧಿಕೃತವಾಗಿ ನೀರನ್ನು ಕೆರೆಗಳಿಗೆ ಕೊಟ್ಟಿದ್ದೇವೆ. ಇರುವ ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಅವರಿಗೆ ಕೊಟ್ಟಿದ್ದೇವೆ. ರೈತರೂ ಅದನ್ನು ಉಪಯೋಗಿಸಿ ಚೆನ್ನಾಗಿ ಬೆಳೆಯನ್ನು ಬೆಳೆದಿದ್ದಾರೆ. ಆದರೆ ಇದನ್ನೇ ಮ್ಯಾಟರ್ ಆಫ್ ರೈಟ್ ಎನ್ನುವ ರೀತಿಯಲ್ಲಿ ತೆಗೆದುಕೊಳ್ಳುವುದಾದರೆ, ಅದು ಕಷ್ಟವಾಗುತ್ತದೆ. ಸನ್ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುತ್ತೇನೆ. ಇದು ವಿಶೇಷವಾಗಿ ಇದ್ದಂತಹ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನಧಿಕೃತವಾಗಿ ಕೊಟ್ಟಂತಹ ನೀರೇ ಹೊರತು ಅವರಿಗೆ ಅಧಿಕೃತವಾಗಿ ಕೊಡತಕ್ಕಂತಹ ನೀರು ಅಲ್ಲವೆಂದು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಹಲಗೇಗೌಡ.—ಪ್ರವಾಹ ಬರುವಂತಹ ಕಾಲದಲ್ಲಾದರೂ ನೀರನ್ನು ಕೆರೆಗಳಿಗೆ ಕೊಡಬಹುದಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ನೀರು ಇದ್ದರೆ ಕೊಡಬಹುದು. ಕೆನಾಲ್‌ಗಳನ್ನು ರಿಪೇರಿ ಮಾಡುವ ಬಗ್ಗೆ ಕೇಳಿದ್ದಾರೆ. ಚಾನಲ್ ನಿರ್ವಹಣಾ ಯೋಜನೆಯಲ್ಲಿ ಜಾಗತಿಕ ಬ್ಯಾಂಕಿಗೆ ಒಂದು ಕರಡು ಯೋಜನೆಯನ್ನು ಮಾಡಿ ಕಳುಹಿಸಿದ್ದೇವೆ. ಅದಕ್ಕೆ ಮಂಜೂರಾತಿ ಸಿಕ್ಕುತ್ತದೆ ಎನ್ನುವ ನಿರೀಕ್ಷಣೆಯಲ್ಲಿದ್ದೇವೆ. ಅದು ಆದ ನಂತರ ಎಲ್ಲ ನಾಲೆಗಳನ್ನು ಆಧುನೀಕರಣ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ.

ಅಧ್ಯಕ್ಷರು.—೭೫ ನಿಮಿಷ ಉತ್ತರ ಕೊಟ್ಟಿದ್ದಾರೆ ಅದಕ್ಕೆ ೯೦ ನಿಮಿಷ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿ ಕೊಡಲಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದು ಬಹಳ ಪ್ರಮುಖವಾದ ಇಲಾಖೆ,

ಶ್ರೀ ಹರ್ಷಕುಮಾರ್ ಗೌಡ.—ಕರ್ನಾಟಕ ಅಭಿವೃದ್ಧಿಯ ಎಲ್ಲ ಅಂಕುಶ ಅವರ ಕೈಯ್ಯಲ್ಲಿದೆ.

ಅಧ್ಯಕ್ಷರು.—ಇದು ಸದನದ ಅಭಿಪ್ರಾಯವಾಗುವುದಾದರೆ, ಬಾಕಿ ಡಿಮ್ಯಾಂಡ್ಸ್ ಎಲ್ಲ ಗಿಲಿಟಿನ್ ಆಗಲಿ ಎನ್ನುವುದಾದರೆ ಇನ್ನೂ ೯೦ ನಿಮಿಷ ಬೇಕಾದರೂ ಅವಕಾಶ ಕೊಡುವುದಕ್ಕೆ ನನ್ನ ಅಭ್ಯಂತರ ವೇನೂ ಇಲ್ಲ. I want to take the sense of the House ೭೫ ನಿಮಿಷ ಉತ್ತರಕ್ಕೆ ೯೦ ನಿಮಿಷ ಕ್ಲಾರಿಫಿಕೇಷನ್‌ಗಾಗಿ ಕಳೆದಿದೆ. ಇನ್ನೂ ೫–೬ ಮಾನ್ಯ ಸದಸ್ಯರು ಇದ್ದಾರೆ. Can I have the opinion of the Deputy Leader of the Opposition ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸಾಕಷ್ಟು ಚರ್ಚೆ ಮಾಡಿದ್ದೇವೆ. ಓಟಿಗೆ ಹಾಕಿ.

MR. SPEAKER.—Can anybody say from the Treasury benches in the absence of the Leader of the House ? Law and Parliamentary Affairs Minister...

ಶ್ರೀ ಎಂ. ವೀರಪ್ಪ ಮೊಯ್ಲಿ.—ತಮಗೆ ತಿಳಿಸುವುದೇನೆಂದರೆ, ಇದಕ್ಕೆ ಉತ್ತರ ಕೊಡ ಮೊನ್ನೆಯೇ ಆಗಬೇಕಾಗಿತ್ತು. ನಾಡಿದ್ದು ೧೪ನೇ ತಾರೀಖು ಶನಿವಾರ ಕುಳಿತುಕೊಳ್ಳೋಣವೆಂದರೆ ಅದು ಎರಡನೇ ಶನಿವಾರ, ರಜ ಕೊಡಬೇಕೆಂದು ತೀರ್ಮಾನವಾಗಿದೆ ತಮಗೂ ಅನುಭವ ಇದೆ. ಈಗಾಗಲೇ ೩–೪ ಸಾರಿ ಷೆಡ್ಯೂಲ್ ಬದಲಾವಣೆ ಮಾಡಿದ್ದೇವೆ. Even the finance schedue which was fixed is now deviated. ಆದ್ದರಿಂದ ಈ ತರಹ ಹೋದರೆ ೧೬ಕ್ಕೂ ಮುಗಿಯುವುದಿಲ್ಲ.

ಶ್ರೀ ಹರ್ಷಕುಮಾರ್ ಗೌಡ. ಮೈಸೂರು ಸಿಟಿಯವರಾದ ನಾವು ಏನು ಮಾಡಿದ್ದೇವೆ ? ನಾವು ಇಲ್ಲಿ ಕುಳಿತುಕೊಂಡು ಏನು ಮಾಡಬೇಕು ?

ಶ್ರೀ ಆರ್. ಶಿವರಾಮೇಗೌಡ.—ಊರಿನಲ್ಲಿ ಜನ ನಮ್ಮನ್ನು ಕೇಳುತ್ತಾರೆ, ರಸ್ತೆ, ನೀರಾವರಿ ಬಗ್ಗೆ ಏನು ಕೇಳಿದ್ದೀರಿ ಅಂತ.

ಶ್ರೀ ಹರ್ಷಕುಮಾರ ಗೌಡ.—ನಾವು ಇಲ್ಲಿ ಸುಮ್ಮನೆ ಕುಳಿತುಕೊಂಡು ನಿದ್ದೆ ಮಾಡುವುದಕ್ಕೆ ಬಂದಿಲ್ಲ. ಕೆಲವು ವಿವರಣೆಯನ್ನಾದರೂ ಕೇಳಲಿಕ್ಕೆ ಬೆಳಗ್ಗಿನಿಂದ ಸತತವಾಗಿ ಕಾಯುತ್ತಿದ್ದೇನೆ. ಒಂದು ಪ್ರಮುಖವಾದ ಸಮಸ್ಯೆ ಇದೆ. ಅದನ್ನೂ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ ಅಂದರೆ ಬೇಡ. ಯುವಕರಾದ ನಾವು ಇಲ್ಲಿರುವುದು ಏಕೆ ? ಹೊರಗೆ ಹೋಗುತ್ತೇವೆ.

ಅಧ್ಯಕ್ಷರು.—ಆಯಿತು. ೪ ಮಂದಿ ಸದಸ್ಯರಿಗೆ ಅವಕಾಶ ಕೊಡುತ್ತೇನೆ. ಒಂದೊಂದೇ ನಿಮಿಷ. ಆ ಒಂದೊಂದೇ ನಿಮಿಷದಲ್ಲಿ ಪ್ರಶ್ನೆ ಮತ್ತು ಉತ್ತರ ಎರಡೂ ಸೇರಿರುತ್ತದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಹಂತದ ಬಗ್ಗೆ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಅದಕ್ಕೆ ನಾನು ಅವರನ್ನು ಶ್ಲಾಘನೆ ಮಾಡುತ್ತೇನೆ. ಇವತ್ತು ಶಹಾಪುರ ನಾಲೆ ಪೂರ್ಣಗೊಳ್ಳದ ಪ್ರಯುಕ್ತ ಶಹಾಪುರ ತಾಲ್ಲೂಕಿನ ೪೫ ಸಾವಿರ ಎಕರೆ ಪ್ರದೇಶ ೧೯೮೬ನೇ ಇಸವಿಯಿಂದ ನೆನೆಗುದಿಯಲ್ಲಿ ಬಿದ್ದಿದ್ದಾರೆ

ಆ ಭಾಗದ ಜನರಿಗೆ ಜೂನ್ ತಿಂಗಳಲ್ಲಿ ನೀರು ಕೊಡತಕ್ಕ ಭರವಸೆಯನ್ನು ಕೊಟ್ಟಿದ್ದರು. ಆದರೆ ಈ ಕೆಲಸಕ್ಕೆ ಹಣ ಒದಗಿಸಿ ಅಕ್ಟೋಬರ್ ಒಳಗಾದರೂ ನೀರನ್ನು ಒದಗಿಸುವ ಕಾರ್ಯ ಮಾಡುತ್ತಾರಾ ಎಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಶಹಪುರ ನಾಲೆಗೆ ನೀರನ್ನು ಬಿಡತಕ್ಕದ್ದರ ಬಗ್ಗೆ ಮೊನ್ನೆ ನಾನು ಮತ್ತು ನಮ್ಮ ಸಹೋದ್ಯೋಗಿಗಳು ಆ ಭಾಗದಲ್ಲಿ ಪ್ರವಾಸ ಮಾಡುವಾಗ ಈ ಪ್ರಶ್ನೆ ಬಂದಾಗ ನಾವು ಭರವಸೆಯನ್ನು ಸಹಾ ಕೊಟ್ಟಿದ್ದೇವೆ. ೩೦೦ ಲಕ್ಷ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಬಿಡುಗಡೆ ಮಾಡಿದರೆ ಈ ಕೆಲಸವನ್ನು ೨–೩ ತಿಂಗಳಲ್ಲಿ ಮಾಡಿ ಮುಗಿಸುತ್ತೇವೆಂದು ಅಲ್ಲಿನ ಅಧಿಕಾರಿಗಳು ಕೊಟ್ಟ ಭರವಸೆ ಮೇಲೆ ಈಗಾಗಲೇ ೩೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಸನ್ಮಾನ್ಯ ಸದಸ್ಯರ ಆ ಭಾಗಕ್ಕೆ ಅಕ್ಟೋಬರ್ ಒಳಗೆ ನೀರು ಕೊಡುವ ಪ್ರಯತ್ನ ಮಾಡುತ್ತೇವೆ.

ಶ್ರೀ ಹರ್ಷಕುಮಾರ್‌ಗೌಡ.—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಪ್ರಮುಖ ಕೆ. ಆರ್. ಆಸ್ಪತ್ರೆಯ ಹೊರರೋಗಿ ಕಟ್ಟಡ ವಿಭಾಗ ೫೦ ಲಕ್ಷ ರೂಪಾಯಿ ಬಂಡವಾಳ ಹಾಕಿ ಕಟ್ಟಿದ್ದು ಅದು ಹಾಗೇ ಅರ್ಧಕ್ಕೆ ನಿಂತಿದೆ. ಸುಮಾರು ವರ್ಷಗಳಿಂದ ಅದು ಹಾಗೇ ಉಳಿದಿದೆ. ಅದಕ್ಕೆ ಇನ್ನೂ ಎಷ್ಟು ಹಣ ವಿನಿಯೋಗಿಸಬೇಕಾಗುತ್ತದೆ? ಇನ್ನು ಎಷ್ಟು ವರ್ಷಗಳಲ್ಲಿ ಅದನ್ನು ಪೂರೈಸುತ್ತೀರಿ ಮತ್ತು ಅದನ್ನು ಸಾರ್ವಜನಿಕರ ಉಪಯೋಗಕ್ಕೆ ಬಿಡುಗಡೆ ಮಾಡುತ್ತೀರಿ ಎಂದು ಹೇಳಬೇಕು. ಜೊತೆಗೆ ಮೈಸೂರು ನಗರದಲ್ಲಿ ಮೆಟ್ರೋಪೋಲ್ ಹೋಟೆಲ್‌ನಿಂದ ಪ್ರೀಮಿಯರ್ ಸ್ಟುಡಿಯೋವರೆಗೆ ಇರುವಂತಹ ರಸ್ತೆಯನ್ನು ಅಗಲ ಮಾಡಬೇಕೆಂದು ಹೇಳುತ್ತಿದ್ದೇವೆ. ಇದನ್ನು ತುರ್ತಾಗಿ ಮಾಡಿ ಕೊಡುತ್ತೇವೆಂದು ತಾವೂ ಕೂಡ ಪತ್ರ ಮುಖಾಂತರ ತಿಳಿಸಿದ್ದೀರಿ. ಇದನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಾ ಎಂದು ಈಗ ಈ ಸದನದ ಮುಖಾಂತರ ನಾನು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ಕೆ. ಆರ್. ಆಸ್ಪತ್ರೆಯ ಹೊರರೋಗಿಗಳ ಕಟ್ಟಡ ದೋಷಪೂರಿತವಾಗಿದ್ದು, ಈ ವಿಷಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಕೂಡಾ ಪೆಂಡಿಂಗ್ ಇದೆ ಎಂದು ತಿಳಿಯಪಡಿಸುತ್ತೇನೆ. ಮತ್ತು ಅಲ್ಲಿನ ಕಟ್ಟಡದ ದೋಷವನ್ನು ಸರಿಪಡಿಸಿ ಅದನ್ನು ಉಪಯುಕ್ತ ಮಾಡುವುದಕ್ಕೆ ಸಂಶೋಧಕರಿಂದ ವರದಿಯನ್ನು ಈಗಾಗಲೇ ತರಿಸಿಕೊಂಡಿದ್ದೇವೆ. ಅದಕ್ಕೆ ಸುಮಾರು ೧೫೦ ಲಕ್ಷ ರೂಪಾಯಿಗಳು ಆಗುತ್ತವೆಂದು ಒಂದು ಯೋಜನೆಯನ್ನು ತಯಾರು ಮಾಡಿದ್ದು ಈ ಬಗ್ಗೆ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ಆದ ನಂತರ ಶೀಘ್ರವೇ ಆ ಕಾರ್ಯವನ್ನು ಕೈಗೆತ್ತಿಕೊಂಡು ಸಾರ್ವಜನಿಕರ ಬಳಕೆಗೆ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಲ್ಲಮ್ ವೀರಭದ್ರಪ್ಪ.—ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಡ್ಯಾಮ್‌ನಲ್ಲಿ ಬಹಳ ಸಿಲ್ಟ್ ಅಕ್ಯುಮಿಲೇಟ್ ಆಗಿದೆ. ಈ ಡ್ಯಾಮ್‌ನ ಕೆಪಾಸಿಟಿ ೧೩೨ ಟಿಎಂಸಿ ಇದ್ದರೆ, ಅಲ್ಲಿ ಸುಮಾರು ೨೦ ಟಿಎಂಸಿ ಅಡಿಯಷ್ಟು ಸಿಲ್ಟ್ ಇದ್ದು ಅಷ್ಟು ಪ್ರಮಾಣದ ನೀರು ಕಡಿಮೆ ಆಗುವುದರಿಂದ ಈ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಈ ಸಿಲ್ಟ್ ಎಂಬುದು ಇದೊಂದೇ ಕಡೆ ಅಲ್ಲದೆ, ಎಲ್ಲಾ ನೀರಾವರಿ ಯೋಜನೆಯಡಿಯಲ್ಲೂ ಬರುವುದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಮುಂದೆ ಬರುವ ಯೋಜನೆಗಳಲ್ಲೂ ಈ ವಿಷಯ ಗಮನದಲ್ಲಿ ಇಟ್ಟುಕೊಂಡು ಈ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ? ನಮ್ಮ ತುಂಗಭದ್ರಾದಲ್ಲಿ ಬಲದಂಡೆ ನಾಲೆ, ಎಡದಂಡೆ ನಾಲೆ, ಹೆಚ್.ಎಲ್.ಸಿ. ಎಲ್.ಎಲ್.ಸಿ. ಎಂದೆಲ್ಲಾ ಇದ್ದು ಪಕ್ಕದ ರಾಜ್ಯಗಳಿಗೂ ನೀರು ಸರಬರಾಜು ಆಗುತ್ತಿದ್ದು ಇದರ ಲೆಕ್ಕ ಈಗಿನ ಪದ್ಧತಿಯಲ್ಲಿ ಸರಿಯಾಗಿ ಸಿಗುತ್ತಿಲ್ಲವಾದ ಕಾರಣ, ಈ ಬಗ್ಗೆ ಕಂಪ್ಯೂಟರ್ ಅಳವಡಿಸಲಾಗುವುದು ಎಂದು ತಾವು ಬಳ್ಳಾರಿಗೆ ಬಂದಿದ್ದಾಗ ತಿಳಿಸಿದ್ದಿರಿ. ಈ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಯೋಜನೆಯಲ್ಲಿ ಅದರ ಸಂಗ್ರಹಣಾ ಸಾಮರ್ಥ್ಯ ಸಿಲ್ಟ್‌ನಿಂದಾಗಿ ಸುಮಾರು ೨೨ ಟಿಎಂಸಿ ಯಷ್ಟು ಸಾಮರ್ಥ್ಯ ಕಡಿಮೆ ಆಗಿದೆ ಎಂದು ತಜ್ಞರ ಅಭಿಪ್ರಾಯವಾಗಿದೆ. ಈ ಒಂದು ದೋಷವನ್ನು ಸರಿಪಡಿಸುವುದಕ್ಕೆ ಸಂಶೋಧನಾಕಾರರ ಜೊತೆ ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಇದು ಹೀಗೇ ಮುಂದುವರಿದರೆ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿ ನಮ್ಮ ಯೋಜನೆಗಳೇ ನಿಷ್ಫಲವಾಗುತ್ತವೆನ್ನುವ ಭಯ ಕೂಡಾ ರಾಜ್ಯ ಸರ್ಕಾರಕ್ಕೆ ಇದೆ ಎಂದು ತಿಳಿಯಪಡಿಸುತ್ತೇನೆ. ಈ ಒಂದು ಸಮಸ್ಯೆ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೂ ಕೂಡ ಅನ್ವಯವಾಗುತ್ತದೆ. ಇದು ಬಹಳ ಪ್ರಮುಖವಾದ ಸಮಸ್ಯೆ, ಇದರ ಬಗ್ಗೆ

ಸರ್ಕಾರ ಹೆಚ್ಚು ಶೀಘ್ರವಾಗಿ ಪರ್ಯಾಲೋಚಿಸುತ್ತಿಗೆ, ತುಂಗಭದ್ರಾ ಯೋಜನೆಯಿಂದ ನೀರನ್ನು ಬಿಡುವ ಬಗ್ಗೆ ಕಂಪ್ಯೂಟರ್ ಅಳವಡಿಸುತ್ತೇವೆಂದು ನಾನು ಹೇಳಿದ್ದು ನಿಜ. ಆ ದಿಶೆಯಲ್ಲಿ ಪ್ರಯತ್ನ ಮಾಡಿದ್ದೇವೆ. ಶೀಘ್ರದಲ್ಲಿಯೇ ಆ ಕಾರ್ಯವನ್ನು ಮಾಡಿಕೊಡುತ್ತೇವೆ.

SRI NAZIR AHMED.—Mr. Speaker, Sir, I would like to bring to the notice of the Government that in my constituency there are police quarters which in a very bad condition especially during the the rainy season the residents are put to lot of hardship, in some houses there are no proper doors, windows and they are living in a very pathetic condition. Therefore, I would appeal to the Hon'ble Minister to take note of it and effective steps may be taken to repair the building.

SRI G. PUTTASWAMY GOWDA.—It is under active consideration.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ಮಹಿಳೆಯರಲ್ಲಿ ನಾನೊಬ್ಬಳೇ ಮಾತನಾಡಿದ್ದೇನೆ ನಾನು ಕೇಳಿದ ಹಲವಾರು ವಿಷಯಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಮಲೆನಾಡಿನ ರಸ್ತೆಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳಿದ್ದೇನೆ. ನನ್ನ ಮತದಾರ ಕ್ಷೇತ್ರವಾದ ಕಳಸ ಮತ್ತು ಹೊರನಾಡು ರಸ್ತೆ ಮಾಡಿಕೊಡುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದಾಗ ಇನ್ನೊಂದು ತಿಂಗಳಿನಲ್ಲಿ ರಸ್ತೆ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಪ್ರಾರಂಭ ಮಾಡಲಿಲ್ಲ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಚಾರ್ಮಾಡಿಘಾಟ್ ರಸ್ತೆಯಲ್ಲಿ ಬೆಟ್ಟದ ಕುಸಿತದಿಂದ ಸಂಚಾರಕ್ಕೆ ತೊಂದರೆಯಾಗಿದೆಯೆಂದು ಹೇಳಿದ್ದೇನೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಆ ಬಗ್ಗೆ ಉತ್ತರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಸದಸ್ಯಣೀಯವರ ಸಮಸ್ಯೆಗಳನ್ನು ನಾನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ :

"ದಿನಾಂಕ ೩೧ನೇ ಮಾರ್ಚ್ ೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೩೫, ೩೬, ೪೫, ೪೬ ಮತ್ತು ೪೭ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನ ದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ನೀರಾವರಿ ಮತ್ತು ಕಾಮಗಾರಿ ಮಂತ್ರಿಗಳು

ಅಭಿಯಾಚನೆ ಕ್ರಮಾಂಕ ೩೫—ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೩೯,೫೫,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೨೩,೩೦,೦೦೦ ರೂ. ಗಳಿಗಿಂತ ಮೀರದ ಮೊತ್ತದನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೬—ನೀರಾವರಿ, ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೦೯,೧೬,೫೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೩೧,೯೫,೩೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೪೫—ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗೆ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೯,೧೬,೮೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮೫.೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೪೬—ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೫೧,೫೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೮,೫೧ ೭೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ,

ಅಭಿಯಾಚನೆ ಕ್ರಮಾಂಕ ೪೭—ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೫,೮೯,೭೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೫೯,೦೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರುಗಳಾದ ಪಿ. ಸಿ. ಸಿದ್ದನಗೌಡರ್, ಎಸ್. ಜಿ. ನಾಯಕ್, ಟಿ. ಬಿ. ಜಯಚಂದ್ರ, ಎಂ. ಮಹದೇವ್, ಕೆ. ಲಕ್ಕಪ್ಪ, ಸದಸ್ಯರುಗಳು ಗೈರುಹಾಜರಾಗಿದ್ದಾರೆ. ಶ್ರೀ ಚೌಡರೆಡ್ಡಿಯವರೇ, ಈಗ ತಾವು ತಮ್ಮ ಪ್ರಶ್ನೆಯನ್ನು ಕೇಳಿ.